
Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 42 | ಅಕ್ಟೋಬರ್ 10–16, 2022 | ಪುಟ 16 | ರೂ.10/-
Volume 16 | Issue 42 | October 10-16, 2022 | Pages 16 | Price: 10/-
https://janashakthi.wordpress.com e-mail : js_weekly@yahoo.com



ಅಮೂಲ್ಯ ನೇತಾರ ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಲಾಲ್ ಸಲಾಂ

ಚುನಾವಣಾ ಆಯೋಗದಿಂದ ರಾಜಕೀಯ ಪಕ್ಷಗಳ ಹಕ್ಕುಗಳ ಉಲ್ಲಂಘನೆ

ರೂಪಾಯಿಯ ಮೌಲ್ಯ ಇಳಿಕೆಯ ಹಿಂದಿದೆ ಮಹಾ ಖಾಯಿಲೆ



ವೈದ್ಯಕೀಯ ಗರ್ಭಪಾತದ ತೀರ್ಪು: ಕಾರ್ಮೋಡದಲ್ಲೊಂದು ಕೋಲ್ಮಿಂಚು

ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ

ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಪಕ್ಷದ ಒಬ್ಬ ಅಪ್ರತಿಮ ನಾಯಕರು ಎಂದು ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಆಳವಾದ ದುಃಖವನ್ನು ವ್ಯಕ್ತಪಡಿಸಿದೆ. ಈ ಸಂದರ್ಭದಲ್ಲಿ ನೀಡಿದ ಪೊಲಿಟಬ್ಯುರೋದ ಹೇಳಿಕೆ ಹೀಗಿದೆ:

ಅವರು ಪೊಲಿಟ್‌ಬ್ಯುರೊ ಸದಸ್ಯರಾಗಿದ್ದರು ಮತ್ತು ಇತ್ತೀಚಿನವರೆಗೂ ಪಕ್ಷದ ಕೇರಳ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿದ್ದರು.

ಕ್ಯಾನ್ಸರ್ ವಿರುದ್ಧ ಸುದೀರ್ಘ ಹೋರಾಟದ ನಂತರ ಬಾಲಕೃಷ್ಣನ್ ಅಕ್ಟೋಬರ್ 1, 2022 ರಂದು ಚೆನ್ನೈನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 68 ವರ್ಷ ವಯಸ್ಸಾಗಿತ್ತು.

ಬಾಲಕೃಷ್ಣನ್ ಅವರು ಚಿಕ್ಕ ವಯಸ್ಸಿನಲ್ಲೇ ವಿದ್ಯಾರ್ಥಿ ಚಳವಳಿಗೆ ಸೇರಿ ವಿದ್ಯಾರ್ಥಿ ನಾಯಕರಾಗಿ ತಮ್ಮ ಛಾಪು ಮೂಡಿಸಿದ್ದರು. ಅವರು 1973 ರಿಂದ 1979 ರವರೆಗೆ ಕೇರಳ ರಾಜ್ಯ ಎಸ್‌ಎಫ್‌ಐನ ಕಾರ್ಯದರ್ಶಿಯಾಗಿದ್ದರು, ಎಸ್‌ಎಫ್‌ಐ ಅನ್ನು ರಾಜ್ಯದಲ್ಲಿ ಅತ್ಯಂತ ಶಕ್ತಿಶಾಲಿ ವಿದ್ಯಾರ್ಥಿ ಸಂಘಟನೆಯನ್ನಾಗಿ ಮಾಡಲು ಅವರು ಅನನ್ಯ ಕೊಡುಗೆ ನೀಡಿದ್ದಾರೆ. ನಂತರ ಯುವ ಸಂಘಟನೆಯಲ್ಲಿ ಸಕ್ರಿಯರಾಗಿದ್ದ ಅವರು ಕೇರಳ ಕರ್ಷಕ ಸಂಘಂನ ರಾಜ್ಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

ಬಾಲಕೃಷ್ಣನ್ ಅವರು ಮೊದಲಿನಿಂದಲೂ ಪಕ್ಷ ಸಂಘಟನೆಯಲ್ಲಿ ಗಮನಾರ್ಹ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಅವರು 1988 ರಲ್ಲಿ ಕೇರಳ ರಾಜ್ಯ ಸಮಿತಿಗೆ ಮತ್ತು 1995 ರಲ್ಲಿ ಕಾರ್ಯದರ್ಶಿ ಮಂಡಳಿಗೆ ಆಯ್ಕೆಯಾದರು. ಅವರು 1990 ರಿಂದ 1995 ರವರೆಗೆ ಪಕ್ಷದ ಅತಿದೊಡ್ಡ ಜಿಲ್ಲಾ ಘಟಕವಾದ ಕಣ್ಣೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಜಿಲ್ಲೆಯಲ್ಲಿ ಪಕ್ಷವು ಆರ್‌ಎಸ್‌ಎಸ್‌ನಿಂದ ದಾಳಿಗಳನ್ನು ಎದುರಿಸುತ್ತಿದ್ದ ಸಮಯದಲ್ಲಿ ಅವರು ಪಕ್ಷವನ್ನು ಮುನ್ನಡೆಸಿದರು ಮತ್ತು ಪಕ್ಷವನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ವಿಫಲಗೊಳಿಸಿದರು.

ಕೊಡಿಯೇರಿ 2002ರಲ್ಲಿ ನಡೆದ 17ನೇ ಮಹಾಧಿವೇಶನದಲ್ಲಿ ಪಕ್ಷದ ಕೇಂದ್ರ ಸಮಿತಿಗೆ ಮತ್ತು 2008ರಲ್ಲಿ 19ನೇ ಮಹಾಧಿವೇಶನದಲ್ಲಿ ಪೊಲಿಟ್‌ಬ್ಯೂರೊಗೆ ಆಯ್ಕೆಯಾದರು.

ಬಾಲಕೃಷ್ಣನ್ 2015 ಮತ್ತು 2022 ರ ನಡುವೆ ರಾಜ್ಯ ಸಮಿತಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಇದು ಪಕ್ಷವು ಸತತ ವಿಸ್ತರಣೆಯನ್ನು



ಕಂಡ ಅವಧಿಯಾಗಿದೆ.

ಕೊಡಿಯೇರಿ ತಲಶ್ಶೇರಿ ವಿಧಾನಸಭಾ ಕ್ಷೇತ್ರದಿಂದ ಐದು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಅವರು 2006 ರಿಂದ 2011 ರವರೆಗೆ ಎಲ್‌ಡಿಎಫ್ ಸರ್ಕಾರದಲ್ಲಿ ಗೃಹ ಮತ್ತು ಪ್ರವಾಸೋದ್ಯಮ ಸಚಿವರಾಗಿದ್ದಾಗ ತೋರಿಸಿ ಕೊಟ್ಟಿರುವಂತೆ ಪರಿಣಾಮಕಾರಿ ಶಾಸಕರಾಗಿದ್ದರು ಮತ್ತು ಸಮರ್ಥ ಆಡಳಿತಗಾರರಾಗಿದ್ದರು.

1975 ಮತ್ತು 1977 ರ ನಡುವೆ ಮೀಸಾ ಕಾಯ್ದೆಯ ಅಡಿಯಲ್ಲಿ 18 ತಿಂಗಳುಗಳ ಕಾಲ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕೊಡಿಯೇರಿ ಜೈಲಿನಲ್ಲಿದ್ದರು.

ಕೊಡಿಯೇರಿ ಕೋಮುವಾದಿ ಶಕ್ತಿಗಳ ವಿರುದ್ಧ ನಿಷ್ಠಾವಂತ ಹೋರಾಟಗಾರರಾಗಿದ್ದರು. 1971ರಲ್ಲಿ ತಲಶ್ಶೇರಿಯಲ್ಲಿ ನಡೆದ ಗಲಭೆಯಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವಲ್ಲಿ ಅವರು ಮುಂಚೂಣಿಯಲ್ಲಿದ್ದರು. ತರುವಾಯ ಅವರು ಕೋಮುವಾದಿ ಶಕ್ತಿಗಳು ವಿಚ್ಛಿದ್ರಕಾರಕ ಚಟುವಟಿಕೆಗಳಲ್ಲಿ ತೊಡಗಿದಾಗಲೆಲ್ಲ ಅವುಗಳ ವಿರುದ್ಧದ ಹೋರಾಟಕ್ಕೆ ನಾಯಕತ್ವವನ್ನು ಒದಗಿಸಿದರು.

ಕೊಡಿಯೇರಿ ಬಾಲಕೃಷ್ಣನ್ ಅವರು ಸಾರ್ವಜನಿಕ ಭಾಷಣದಲ್ಲಿ ಅಸಾಧಾರಣ ಪ್ರತಿಭೆಯನ್ನು ಹೊಂದಿದ್ದರು ಮತ್ತು ಪಕ್ಷದ ರಾಜಕೀಯ ಮತ್ತು ಸೈದ್ಧಾಂತಿಕ ನಿಲುವುಗಳ ಅತ್ಯಂತ ಪರಿಣಾಮಕಾರಿ ಪ್ರತಿಪಾದಕರಲ್ಲಿ ಒಬ್ಬರು. ತಮ್ಮ ರಾಜಕೀಯ ಮತ್ತು ಸೈದ್ಧಾಂತಿಕ ನಂಬಿಕೆಗಳಲ್ಲಿ ದೃಢವಾಗಿರುವಾಗಲೇ, ಅವರು ಸ್ನೇಹಪರ ಮನೋಭಾವವನ್ನು ಹೊಂದಿದ್ದರು ಮತ್ತು ಎಲ್ಲ ರೀತಿಗಳ ರಾಜಕೀಯ ನಾಯಕರೊಂದಿಗೆ ಉತ್ತಮ ಸಂಬಂಧಗಳನ್ನು ಹೊಂದಿದ್ದರು.

ಕೊಡಿಯೇರಿ ಬಾಲಕೃಷ್ಣನ್ ಅವರ ಅದಮ್ಯ ಇಚ್ಛಾಶಕ್ತಿ, ರಾಜಕೀಯ ಮತ್ತು ಸಂಘಟನಾ ಸಾಮರ್ಥ್ಯಗಳು ಮತ್ತು ಕಾರ್ಯಕರ್ತರು ಮತ್ತು ಪಕ್ಷದ ಬೆಂಬಲಿಗರ ಬಗ್ಗೆ ಬೆಚ್ಚಗಿನ ನಿಲುವು ಸದಾ ಸ್ಮರಣೀಯ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಅವರ ನೆನಪಿಗೆ ಗೌರವಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತದೆ. ಅವರ ಪತ್ನಿ, ಪುತ್ರರು ಮತ್ತು ಕುಟುಂಬದ ಇತರ ಸದಸ್ಯರಿಗೆ ತನ್ನ ಹೃತ್ಪೂರ್ವಕ ಸಂತಾಪವನ್ನು ತಿಳಿಸುತ್ತದೆ.

ಮಹಿಳೆಯರ ದೈಹಿಕ ಸ್ವಾಯತ್ತತೆಯ ಹಕ್ಕುಗಳಿಗೆ ಅನುವು ಮಾಡಿಕೊಡುವ ಸುಪ್ರಿಂ ಕೋರ್ಟ್ ತೀರ್ಪು: ಎಐಡಿಡಬ್ಲ್ಯುಎ

ಮಹಿಳೆಯರ ಗರ್ಭಪಾತ ಹಕ್ಕುಗಳಿಗೆ ಸಂಬಂಧಪಟ್ಟಂತೆ ಸುಪ್ರಿಂ ಕೋರ್ಟಿನ ಮೂವರು ನ್ಯಾಯಾಧೀಶರ ಪೀಠದ ತೀರ್ಪನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಸ್ವಾಗತಿಸಿದೆ. ಈ ತೀರ್ಪು ಮಹಿಳೆಯರ ದೈಹಿಕ ಸ್ವಾಯತ್ತತೆಯ ಹಕ್ಕುಗಳನ್ನು ಮತ್ತು ಸುರಕ್ಷಿತ ಗರ್ಭಪಾತವನ್ನು ಲಭ್ಯಗೊಳಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿರುವ ಅದು, ಸುರಕ್ಷಿತ ಗರ್ಭಪಾತಕ್ಕೆ ಆರೋಗ್ಯ ವ್ಯವಸ್ಥೆಯಲ್ಲಿ ಸಾಕಷ್ಟು ಮೂಲಸೌಕರ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕರೆ ನೀಡಿದೆ, ಇಲ್ಲವಾದಲ್ಲಿ ಈ ಹಕ್ಕನ್ನು ಲಭ್ಯಗೊಳಿಸಿಕೊಳ್ಳುವಲ್ಲಿ ಮಹಿಳೆಯರು ಅಪಾಯಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದು ಅದು ಹೇಳಿದೆ.



ಅವಿವಾಹಿತ ಮಹಿಳೆಯರು, ವಿವಾಹಿತ ಮಹಿಳೆಯರಂತೆ ತಮ್ಮ ಭೌತಿಕ ಸಂದರ್ಭಗಳಲ್ಲಿ ಬದಲಾವಣೆಯನ್ನು ಎದುರಿಸಿದರೆ, ಗರ್ಭಧಾರಣೆಯ ಇಪ್ಪತ್ತರಿಂದ ಇಪ್ಪತ್ನಾಲ್ಕು ವಾರಗಳ ನಡುವೆ ಸುರಕ್ಷಿತ ಮತ್ತು ಕಾನೂನುಬದ್ಧ ಗರ್ಭಪಾತವನ್ನು ಲಭ್ಯಗೊಳಿಸಿಕೊಳ್ಳುವ ಹಕ್ಕನ್ನು ಹೊಂದಿದ್ದಾರೆ ಎಂದು ಈ ತೀರ್ಪು ಹೇಳಿದೆ. ಈ ಮೊದಲು ಈ ಕುರಿತ ಅರ್ಜಿಯ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್, 'ವೈದ್ಯಕೀಯ ಗರ್ಭಧಾರಣೆ ಮುಕ್ತಾಯ ಕಾಯಿದೆ, 1971'((ಎಂಟಿಪಿ ಕಾಯಿದೆ), ಸೆಕ್ಷನ್ 3(2)(ಬಿ) ಮತ್ತು 'ವೈದ್ಯಕೀಯ ಗರ್ಭಧಾರಣೆ ಮುಕ್ತಾಯ ನಿಯಮಗಳು, 2003' ರ ನಿಯಮ 3ಬಿ (ಎಂಟಿಪಿ ನಿಯಮಗಳು) ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ, ಏಕೆಂದರೆ ಅರ್ಜಿದಾರ ಗರ್ಭಿಣಿ ಮಹಿಳೆ ಅವಿವಾಹಿತಳಾಗಿದ್ದಳು ಮತ್ತು ಆಕೆಯ ಗರ್ಭಧಾರಣೆಯು ಸಮ್ಮತಿಯ ಸಂಬಂಧದಿಂದ ಉಂಟಾಗಿದೆ ಎಂದು ಹೇಳಿತ್ತು.

ಎಂಟಿಪಿ ಕಾಯಿದೆ, 1971 ರ ಸೆಕ್ಷನ್ 3(2)(ಬಿ) ಗರ್ಭಾವಸ್ಥೆಯ ಅವಧಿಯು ಇಪ್ಪತ್ತರಿಂದ ಇಪ್ಪತ್ತನಾಲ್ಕು ವಾರಗಳ ನಡುವೆ ಇರುವಂತಹ "ನಿಯಮಗಳ ಮೂಲಕ ಸೂಚಿಸಬಹುದಾದಂತಹ" ವಿಧಗಳಿಗೆ ಸೇರಿದ ಮಹಿಳೆಯರ ಗರ್ಭಾವಸ್ಥೆಯ ಮುಕ್ತಾಯಕ್ಕೆ ಅಂದರೆ ಗರ್ಭಪಾತಕ್ಕೆ ಅನುಮತಿ ಕೊಡುತ್ತದೆ. ಗರ್ಭಿಣಿ ಮಹಿಳೆಯು ಅಂತಹ ಮುಕ್ತಾಯಕ್ಕೆ ಅರ್ಹತೆ ಪಡೆಯಲು, ಕನಿಷ್ಠ ಇಬ್ಬರು ನೋಂದಾಯಿತ ವೈದ್ಯಕೀಯ ವೃತ್ತಿ ನಡೆಸುವವರು ಗರ್ಭಧಾರಣೆಯು ಮುಂದುವರೆದರೆ ಮಹಿಳೆಯ ಜೀವ, ದೈಹಿಕ ಆರೋಗ್ಯ ಮತ್ತು ಮಾನಸಿಕ ಆರೋಗ್ಯಕ್ಕೆ ಅಪಾಯವಿರುತ್ತದೆ, ಅಥವ ಹುಟ್ಟಲಿರುವ ಮಗುವು ಗಂಭೀರ ಮಾನಸಿಕ ಅಥವಾ ದೈಹಿಕ ಅಸಹಜತೆಗಳಿಂದ ಬಳಲುತ್ತಿರುವ ಗಣನೀಯ ಅಪಾಯವಿದೆ ಎಂದು ಅಭಿಪ್ರಾಯಪಟ್ಟಿರಬೇಕು. ಎಂಟಿಪಿ ನಿಯಮಗಳ 3ಬಿ ನಿಯಮವು ಎಂಟಿಪಿ ಕಾಯಿದೆಯ ಸೆಕ್ಷನ್ 3(2)(ಬಿ) ಅಡಿಯಲ್ಲಿ ಗರ್ಭಪಾತಕ್ಕೆ ಅರ್ಹರಾಗುವ ಮಹಿಳೆಯರ ವಿಧಗಳನ್ನು ನಮೂದಿಸಿದೆ.

ನಿಯಮ 3ಬಿಯನ್ನು ವಿವಾಹಿತ ಮಹಿಳೆಯರಿಗೆ ಮಾತ್ರ ಸೀಮಿತಗೊಳಿಸುವ ಸಂಕುಚಿತ ವ್ಯಾಖ್ಯಾನವು ಅವಿವಾಹಿತ ಮಹಿಳೆಯರಿಗೆ ತಾರತಮ್ಯ ಮಾಡುತ್ತದೆ ಮತ್ತು ಸಂವಿಧಾನದ 14 ನೇ ವಿಧಿಯನ್ನು ಉಲ್ಲಂಘಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಗಮನಿಸಿದೆ. ಅನುಚ್ಛೇದ 21 ರ ಅಡಿಯಲ್ಲಿ ಸಂತಾನೋತ್ಪತ್ತಿ ಸ್ವಾಯತ್ತತೆ, ಘನತೆ ಮತ್ತು ಗೌಪ್ಯತೆಯ ಹಕ್ಕು ಅವಿವಾಹಿತ ಮಹಿಳೆಗೆ ವಿವಾಹಿತ ಮಹಿಳೆಯಂತೆಯೇ ಮಗುವನ್ನು ಹೊಂದಬೇಕೆ ಅಥವಾ ಬೇಡವೇ ಎಂಬ ಆಯ್ಕೆಯ ಹಕ್ಕನ್ನು ನೀಡುತ್ತದೆ ಎಂದು ಅದು ಹೇಳಿದೆ.

ಈ ತೀರ್ಪು "ಸಿಸ್ಜೆಂಡರ್"(ಆಜನ್ಮ-ಅಂದರೆ ಲಿಂಗ ಗುರುತಿಸುವಿಕೆ ಮತ್ತು ಅಭಿವ್ಯಕ್ತಿಗೂ ಹಾಗೂ ಜನಿಸಿದಾಗ ನಿಯೋಜಿಸಲಾದ ಜೈವಿಕ ಲಿಂಗಕ್ಕೂ ಹೊಂದಿಕೆಯಿರುವ ವ್ಯಕ್ತಿಗಳು) ಮಹಿಳೆಯರಿಗೆ ಮಾತ್ರವಲ್ಲ, ಸುರಕ್ಷಿತ ಗರ್ಭಪಾತದ ಲಭ್ಯತೆ ಅಗತ್ಯವಿರುವ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಿಯಮ 3ಬಿ ಅಡಿಯಲ್ಲಿ ಉಲ್ಲೇಖಿಸಿರುವ ವಿಧಗಳು ಸಮಗ್ರವಾಗಿಲ್ಲ, ಇದು "ಭೌತಿಕ ಸಂದರ್ಭಗಳ ಬದಲಾವಣೆಗೆ ಒಳಗಾಗುವ ಎಲ್ಲಾ ಮಹಿಳೆಯರಿಗೆ ವಿಸ್ತಾರಗೊಳ್ಳುತ್ತದೆ" ಎಂದು ಅರ್ಥೈಸಿಕೊಳ್ಳಬೇಕು ಎಂದು ಅದು ಹೇಳಿದೆ. ಈ ತೀರ್ಪಿನ ಸಂದರ್ಭದಲ್ಲಿ, ಸುರಕ್ಷಿತ ಗರ್ಭಪಾತದ ಅಗತ್ಯವಿರುವ ಇತರ ವ್ಯಕ್ತಿಗಳು ಜನ್ಮದಲ್ಲಿ "ಸ್ತ್ರೀ" ಲೈಂಗಿಕತೆಯನ್ನು ನಿಯೋಜಿಸಿದ (ಮತ್ತು ಸ್ತ್ರೀ ಲೈಂಗಿಕ ಅಂಗಗಳನ್ನು ಹೊಂದಿರುವ) ಆದರೆ ಲಿಂಗ ಗುರುತನ್ನು "ಪುರುಷ" ನೊಂದಿಗೆ ಗುರುತಿಸುವ ವಿಶೇಷಲಿಂಗಿ ಪುರುಷರನ್ನು ಒಳಗೊಳ್ಳಬಹುದು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ, 2012 (ಪೋಕ್ಸೊ ಕಾಯಿದೆ) ಅಪ್ರಾಪ್ತ ವಯಸ್ಕರ ನಡುವಿನ ಲೈಂಗಿಕ ಚಟುವಟಿಕೆಗಳನ್ನು (ಸಮ್ಮತಿಯ ಮತ್ತು ಸಮ್ಮತಿಯಿಲ್ಲದ) ಅಪರಾಧೀಕರಿಸುತ್ತದೆ. ಈ ಕಾಯಿದೆಯ ಸೆಕ್ಷನ್ 19 (1) ರ ಅಡಿಯಲ್ಲಿ ಕಡ್ಡಾಯವಾಗಿ ವರದಿ ಮಾಡಬೇಕೆಂದು ವಿಧಿಸಿರುವ ಸಂದರ್ಭಗಳಲ್ಲಿ, ಅಪ್ರಾಪ್ತ ವಯಸ್ಕರು ಸಂತಾನೋತ್ಪತ್ತಿ ಆರೋಗ್ಯಪಾಲನೆಯನ್ನು ಪಡೆಯುವುದನ್ನು ಈ ಸೆಕ್ಷನ್ ತಡೆಯುತ್ತದೆ, ಅಪ್ರಾಪ್ತ ವಯಸ್ಕರ ಮತ್ತು ಅಪ್ರಾಪ್ತ ವಯಸ್ಕರ ಪಾಲಕರ ಕೋರಿಕೆಯ ಮೇರೆಗೆ ಗರ್ಭಾವಸ್ಥೆಯ ವೈದ್ಯಕೀಯ ಮುಕ್ತಾಯ(ಗರ್ಭಪಾತ) ವನ್ನು ನಡೆಸುವ ನೋಂದಾಯಿತ ವೈದ್ಯಕೀಯ ವೃತ್ತಿಯಲ್ಲಿರುವವರು, ಅಪ್ರಾಪ್ತರ ಗುರುತು ಮತ್ತು ಇತರ ವೈಯಕ್ತಿಕ ವಿವರಗಳನ್ನು ಬಹಿರಂಗಪಡಿಸಲು ಬಾಧ್ಯರಾಗಿರುವುದಿಲ್ಲ ಎಂದು ತೀರ್ಪು ಹೇಳಿದೆ. ಇದಲ್ಲದೆ, ಅವರು ಇದರಿಂದ ಉದ್ಭವಿಸಬಹುದಾದ ಯಾವುದೇ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಅಪ್ರಾಪ್ತರ ಗುರುತನ್ನು ಬಹಿರಂಗಪಡಿಸಬೇಕಾಗಿಲ್ಲ ಎಂದು ಹೇಳಿದೆ.

ವೈವಾಹಿಕ ಅತ್ಯಾಚಾರವನ್ನು ಅಪರಾಧೀಕರಿಸಲು ವಿಫಲವಾದ ದೆಹಲಿ ಹೈಕೋರ್ಟಿನ ವಿಭಜಿತ ತೀರ್ಪಿನ ವಿಷಯದಲ್ಲಿ ಎಐಡಿಡಬ್ಲ್ಯುಎ ಈಗಾಗಲೇ ಸುಪ್ರಿಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸಂವಿಧಾನದ ಅಡಿಯಲ್ಲಿ ಮಹಿಳೆಯರ ಸಮ್ಮತಿ ಮತ್ತು ಸ್ವಾಯತ್ತತೆಯ ಪ್ರಾಮುಖ್ಯತೆಯನ್ನು ಗುರುತಿಸುವ ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನು ಸ್ವಾಗತಿಸುವುದಾಗಿ ಹೇಳಿದೆ. ಈ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, ಎಂಟಿಪಿ ನಿಯಮಗಳ ನಿಯಮ 3ಬಿ ಅಡಿಯಲ್ಲಿ "ಅತ್ಯಾಚಾರ" ವೈವಾಹಿಕ ಅತ್ಯಾಚಾರವನ್ನು ಸಹ ಒಳಗೊಂಡಿದೆ ಎಂದು ಹೇಳಿದೆ- ಏಕೆಂದರೆ ಒಪ್ಪಿಗೆ ಅಥವಾ ಇಚ್ಛೆಯಿಲ್ಲದ ಲೈಂಗಿಕ ಸಂಭೋಗವು, ಅದು ಮದುವೆಯ ಸಂದರ್ಭದಲ್ಲಿ ಸಂಭವಿಸಿದ್ದರೂ ಬಲವಂತದ ಸಂಭೋಗ ಅಥವಾ ಅತ್ಯಾಚಾರವಾಗಿದೆ, ವಿವಾಹಿತ ಮತ್ತು ಒಂಟಿ ಮಹಿಳೆಯರ ನಡುವಿನ ಕೃತಕ ವ್ಯತ್ಯಾಸವು ಸಾಂವಿಧಾನಿಕವಾಗಿ ಸಮರ್ಥನೀಯವಲ್ಲ ಎಂದು ನ್ಯಾಯಾಲಯವು ಗಮನಿಸಿದೆ.

90 ರ ದಶಕದಿಂದಲೂ ವೈವಾಹಿಕ ಅತ್ಯಾಚಾರವನ್ನು ಅಪರಾಧ ಎಂದೇ ಪರಿಗಣಿಸಬೇಕು ಎಂದು ಅಭಿಯಾನವನ್ನು ನಡೆಸಿರುವ ಮತ್ತು ಭಾರತೀಯ ದಂಡ ಸಂಹಿತೆಯಲ್ಲಿ ವೈವಾಹಿಕ ಅತ್ಯಾಚಾರಕ್ಕೆ ಕೊಡಲಾಗಿರುವ ವಿನಾಯಿತಿಯನ್ನು ತೆಗೆದುಹಾಕಲು ಸರ್ಕಾರಕ್ಕೆ ವಿವಿಧ ಮನವಿಗಳನ್ನು ಸಲ್ಲಿಸಿರುವ ಎಐಡಿಡಬ್ಲ್ಯುಎ, ಈ ತೀರ್ಪು ಮಹಿಳೆಯರ ದೈಹಿಕ ಸ್ವಾಯತ್ತತೆಯ ಹಕ್ಕುಗಳನ್ನು ಮತ್ತು ಸುರಕ್ಷಿತ ಗರ್ಭಪಾತವನ್ನು ಲಭ್ಯಗೊಳಿಸಿಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತದೆ ಎಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದೆ.

ಸುರಕ್ಷಿತ ಗರ್ಭಪಾತಕ್ಕೆ ಆರೋಗ್ಯ ವ್ಯವಸ್ಥೆಯಲ್ಲಿ ಸಾಕಷ್ಟು ಮೂಲಸೌಕರ್ಯಗಳನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎಐಡಿಡಬ್ಲ್ಯುಎ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಕರೆ ನೀಡಿದೆ, ಇಲ್ಲವಾದಲ್ಲಿ ಈ ಹಕ್ಕನ್ನು ಲಭ್ಯಗೊಳಿಸಿಕೊಳ್ಳುವಲ್ಲಿ ಮಹಿಳೆಯರು ಅಪಾಯಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದು ಅದು ಹೇಳಿದೆ.

ಸಂಪಾದಕೀಯ

ಸಂಘಪರಿವಾರದ ಆರೋಪಗಳ ತಿರಸ್ಕಾರ

2017 ರಡಿಸೆಂಬರ್ 6 ರಂದು ಕಾಣೆಯಾಗಿ, 8 ರಂದು ನೀರಿನ ಕೊಳದಲ್ಲಿ ಶವವಾಗಿ ಪತ್ತೆಯಾದ ಪರೇಶ ಮೇಸ್ತಾ ಪ್ರಕರಣದಲ್ಲಿ ಕೆಂದ್ರ ತನಿಖಾ ಸಂಸ್ಥೆ–ಸಿಬಿಐ ವರದಿ ಹಲವಾರು ಮುಚ್ಚಿಟ್ಟ ಧಾರುಣ ಸತ್ಯಗಳನ್ನು ತೆರೆದಿಟ್ಟಿದೆ. ಈ ಯುವಕನಿಗೆ ಚಿತ್ರಹಿಂಸೆ ನೀಡಿ ಕಗ್ಗೊಲೆ ಮಾಡಲಾಗಿದೆಯೆಂಬ ಆರೋಪದ ಅಂಶಗಳ ಬಗ್ಗೆ ಆಳವಾದ ತನಿಖೆ ನಡೆಸಿದ ಸಿ.ಬಿ.ಐ. ಅಂತಹ ಯಾವುದೇ ಕುರುಹುಗಳು ಇಲ್ಲವೆಂದು ಸ್ಪಷ್ಟವಾಗಿ ಹೇಳಿದೆ. ಈ ಆರೋಪಗಳನ್ನು ಹಬ್ಬಿಸಿ ವಾತಾವರಣವನ್ನು ಉದ್ವಿಗ್ನಗೊಳಿಸಿ ಹಲವಾರು ದಿನಗಳು ವ್ಯಾಪಕ ಕೋಮು ಗಲಭೆ, ಹಿಂಸಾತ್ಮಕ ಧಾಳಿಗಳಿಗೆ ಕಾರಣವಾಗಿದ್ದ ಘಟನೆಯ ಸತ್ಯಾಸತ್ಯತೆಯನ್ನು ಬಯಲಿಗೆಳೆದ ಈ ತನಿಖಾ ವರದಿ ಆರ್.ಎಸ್.ಎಸ್. ಪರಿವಾರ ಮತ್ತು ಬಿ.ಜೆ.ಪಿ ಪಕ್ಷಕ್ಕೆ ಕಪಾಳ ಮೋಕ್ಷ ಮಾಡಿದೆ.

ಹೊನ್ನಾವರದ ಬಂದರು ಪ್ರದೇಶದಲ್ಲಿನ ರಸ್ತೆಯ ನೆಪದಲ್ಲಿ ಉದ್ವಿಗ್ನ ವಾತಾವರಣ ಸೃಷ್ಟಿಗೊಂಡ ಸಂದರ್ಭದಲ್ಲಿಯೇ ಮೀನುಗಾರ ಕುಟುಂಬಕ್ಕೆ ಸೇರಿದ 18 ವರ್ಷಗಳ ಪರೇಶ್ ಕಾಣೆಯಾಗಿದ್ದ. 'ಹಿಂದೂ ಕಾರ್ಯಕರ್ತನಾಗಿದ್ದ ಆತನನ್ನು 'ಜಿಹಾದಿ' ಗಳು ಅಪಹರಣ ಮಾಡಿ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದಾರೆ' ಎಂಬ ವದಂತಿಯನ್ನು ಹಾಗೂ ಪುಂಖಾನುಪುಂಖ ಹಸಿ ಸುಳ್ಳುಗಳನ್ನು 'ಹಿಂದುತ್ವವಾದಿ' ಸಂಘಟನೆಗಳು ಹಬ್ಬಿಸಿದ್ದರು. ಹೊನ್ನಾವರದ ಶೆಟ್ಟಿಕೇರಿ ಪ್ರದೇಶದ ಕೌನ್ಸಿಲರ್ ಅಜಾದ್ ಅಣ್ಣಿಗೇರಿಯವರ ಹೋಟೆಲ್ ಮುಂದಿನಿಂದಲೇ ಪರೇಶನನ್ನು ಅಪಹರಿಸಲಾಗಿದೆ ಎಂದೂ, ಅದರಲ್ಲಿ ಅವರದ್ದೇ ಪಾತ್ರವಿದೆ ಎಂದೂ ದೂರಲಾಗಿತ್ತು.ಅಂದಿನ ಕೇಂದ್ರ ಸಚಿವ ಅನಂತಕುಮಾರ ಹೆಗಡೆ, ಸಂಸದೆ ಶೋಭಾ ಕರಂದ್ಲಾಜೆ, ಅರವಿಂದ ಲಿಂಬಾವಳಿ ಮತ್ತು ಬಿಜೆಪಿ ನಾಯಕರು ಇದಕ್ಕೆ ಮುಸ್ಲಿಂರನ್ನು ಹೊಣೆ ಮಾಡಿ ತ್ವೇಷದ ಮಾತುಗಳನ್ನಾಡಿ ಪರಿಸ್ಥಿತಿಯನ್ನು ಮತ್ತಷ್ಟು ಉದ್ರಿಕ್ತಗೊಳಿಸಿ ಜನರನ್ನು ಮತೀಯ ಆಧಾರದಲ್ಲಿ ಎತ್ತಿಕಟ್ಟಿದ್ದರು. ಸಾಮಾಜಿಕ ಮಾಧ್ಯಮದ ಮೂಲಕ ವಿದ್ವೇಷದ ವಿವಾದಕ್ಕೆ ತಿದಿಯೂದಲಾಗಿತ್ತು. ಶೋಭಾ ಕರಂದ್ಲಾಜೆಯವರು' ಇದು ಐ.ಎಸ್.ಐ.ಎಸ್. ನ ರೀತಿಯಲ್ಲಿ ಜಿಹಾದಿಗಳು ನಡೆಸಿದ ಕಗ್ಗೊಲೆ' ಎಂದು, ರಾಜ್ಯ ಸರ್ಕಾರ ಕೊಲೆಗಾರರಿಗೆ ರಕ್ಷಣೆ ಮಾಡುತ್ತಿದೆ ಎಂದೂ ಆರೋಪಿಸಿ ಟ್ವಿಟ್ಟರ್ ಹಾಗೂ ಮಾಧ್ಯಮಗಳ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರು. ಉರಿವ ಬೆಂಕಿಗೆ ತಿದಿಯೂದುವ, ಕಪೋಲಕಲ್ಪಿತ ವದಂತಿಗಳಿಂದ ಎಲ್ಲೆಡೆ ಪ್ರತಿಭಟನೆಗಳು, ಧಾಳಿಗಳು, ಬೆಂಕಿ ಹಚ್ಚುವ, ಹಿಂಸಾತ್ಮಕ ಘಟನೆಗಳು ನಡೆದಿದ್ದವು. ಅನಂತಕುಮಾರ ಹೆಗಡೆಯಂತಹವರು ನಿರಂತರವಾಗಿ ಅಲ್ಪಸಂಖ್ಯಾತ ಮುಸ್ಲಿಂರ ವಿರುದ್ದ ದ್ವೇಷ ಕಾರುವ ಭಾಷಣಗಳನ್ನು ಮಾಡುತ್ತಾ, ವಿವಾದ ವಿದ್ವೇಷದ ಕಿಡಿ ಹೊತ್ತಿಸುತ್ತಲೇ ಇದ್ದ ಸರಣಿ ಸನ್ನಿವೇಶವನ್ನು ಗಮನಿಸಬೇಕು.ಇಂತಹ ಆಧಾರ ರಹಿತ, ಕಪೋಲಪಲ್ಪಿತ ಆರೋಪ ಧಾಳಿಗಳ ಮೂಲಕ

ಶಾಂತಿ, ಸೌಹಾರ್ದತೆಯನ್ನು ಕದಡಿ, ದ್ವೇಷ, ವಿಭಜನೆ ಸೃಷ್ಟಿಸುವ ಮೂಲಕ ಬಿಜೆಪಿ ಮತ್ತು ಸಂಘಪರಿವಾರ ನಿಕಟದಲ್ಲಿಯೇ ಇದ್ದ ಚುನಾವಣೆಯಲ್ಲಿ ಉತ್ತರ ಕನ್ನಡ, ವಿಶೇಷವಾಗಿ ಕರಾವಳಿಯಲ್ಲಿ ಮೀನುಗಾರರ ನಡುವೆ ಮತ್ತು ರಾಜ್ಯದಾದ್ಯಂತ ಮತೀಯ ಕ್ರೋಢೀಕರಣದ ರಾಜಕೀಯ ದುರ್ಲಾಭ ಪಡೆಯಲು ಮುಂದಾಗಿತ್ತು. ಕಾಂಗ್ರೆಸ್ ಆಡಳಿತದ 2013 ರಿಂದ 2017 ರ ಅವಧಿಯಲ್ಲೇ ನಡೆದ ಕೋಮು ಗಲಭೆಗಳಲ್ಲಿ 11 ಹಿಂದುಗಳು, 6 ಮುಸ್ಲಿಮರು ಒಟ್ಟು 17 ಜನ ಪ್ರಾಣ ಕಳೆದುಕೊಂಡಿದ್ದರು. ಈ ದುರ್ಘಟನೆಗಳು ಬಹುತೇಕ ಕರಾವಳಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ನಡೆದವೆಂಬುದು ಗಮನಾರ್ಹ.

ಪರೇಶ ಮೇಸ್ತಾ ಪ್ರಕರಣದಲ್ಲಿ ಆತ ನೀರಿನಲ್ಲಿ ಮುಳುಗಿ ಸತ್ತಿದ್ದಾನೆ ಎಂದು ಪೊಲೀಸರು ಅಂದು ಹೇಳಿದ್ದನ್ನು ಬಿಜೆಪಿ ನಾಯಕರು, ಪರೇಶನ ತಂದೆ ಒಪ್ಪಿರಲಿಲ್ಲ. 'ಮಗನನ್ನು ಚಿತ್ರಹಿಂಸೆ ಮಾಡಿ ಕೊಂದಿದ್ದಾರೆ ಎಂದು ನಂಬುವುದಾಗಿ, ಸರಕಾರ ಮುಚ್ಚಿ ಹಾಕಲು ಪ್ರಯತ್ನಿಸುತ್ತಿದೆ ಎಂದೂ' ತಂದೆ ಹೇಳಿದ ಹೇಳಿಕೆಯ ಹಿಂದೆ ಸಂಘಪರಿವಾರದ ನಾಯಕರ ಒತ್ತಡ ಇರುವುದನ್ನು ಆರೋಪಿಸಲಾಗಿತ್ತು. ವಿವಾದ ವಿಪರೀತಕ್ಕೆ ಹೋದಾಗ ಮುಖ್ಯಮಂತ್ರಿಯಾಗಿದ್ದ ಸಿದ್ಧರಾಮಯ್ಯನವರು ಬಿಜೆಪಿಯವರ ಆಗ್ರಹದಂತೆ ಸಿ.ಬಿ.ಐ. ತನಿಖೆಗೆ ಒಪ್ಪಿಸಿದ್ದರು. ಆಗ ಮತ್ತು ಈಗಲೂ ಕೇಂದ್ರದಲ್ಲಿ ನರೇಂದ್ರ ಮೋದಿಯವರ ಬಿಜೆಪಿ ಸರಕಾರವೇ ಅಧಿಕಾರದಲ್ಲಿದೆ. ಸಿಬಿಐ ಅದರ ಅಡಿಯಲ್ಲೇ ಕೆಲಸ ಮಾಡುತ್ತಿದೆ. ಅಂದಿನಿಂದ ಸುಮಾರು ನಾಲ್ಕು ವರ್ಷಗಳ ಅವಧಿಯಲ್ಲಿ ಪ್ರಕರಣದ ಎಲ್ಲಾ ಅಂಶಗಳನ್ನು ಆಳವಾಗಿ ತನಿಖೆ ಮಾಡಿದೆ. 'ಎಫ್.ಐ.ಆರ್.ನಲ್ಲಿ ಆರೋಪಿಸಿದಂತೆ ದೇಹದ ಮೇಲೆ ಯಾವುದೇ ಗಾಯಗಳು ಅಥವಾ ಹೊಡೆದ ಗುರುತುಗಳು ಇಲ್ಲ. ಹೀಗಾಗಿ ಹಿಂಸಿಸಿ ಕೊಲ್ಲಲಾಗಿದೆನ್ನಲು ಕುರುಹುಗಳಿಲ್ಲ' ಎಂದು ಸಿಬಿಐ ಹೇಳಿದೆ. ಆ ವರದಿಯ ಪೂರ್ಣ ಪಾಠ ಸಾರ್ವಜನಿಕರಿಗೆ ಇನ್ನು ಲಭ್ಯವಾಗಬೇಕಿದೆ. ಆದರೆ ಬಿಜೆಪಿ ಪಡೆದಿರಲು ತಡೆಗಳೇನೂ ಇಲ್ಲ. ಸಿಬಿಐ ನ ವರದಿಯನ್ನು ತಿರಸ್ಕರಿಸುವುದಾಗಿ, ಅಂದೇ ಸಾಕ್ಷ್ಯಗಳನ್ನು ನಾಶ ಪಡಿಸಲಾಗಿದೆ ಎಂದೂ ಬಿಜೆಪಿಯ ನಾಯಕರು ಮರು ಆರೋಪ ಮಾಡಿದ್ದಾರೆ. ಮಾತ್ರವಲ್ಲ, ಕೇಂದ್ರ ಸರಕಾರ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ರವರು ಸಿಬಿಐ ವರದಿಯನ್ನು ತಿರಸ್ಕರಿಸಬೇಕೆಂದು ಒತ್ತಾಯಿಸಿದ್ದಾರೆ.ಸಿಬಿಐ ಬಹಿರಂಗ ಪಡಿಸಿದ ಸತ್ಯದಿಂದಸಂಘ ಪರಿವಾರ ತೀವ್ರ ಮುಖಭಂಗಕ್ಕೆ ಒಳಗಾಗಿದೆ ಮಾತ್ರವಲ್ಲ ಇವರ ಅಧಿಕಾರದ ಗದ್ದುಗೆಗೆ ಇಂತಹ ಎಷ್ಟು ಜನರ ರಕ್ತ ಮೆತ್ತಿದೆ ಎನ್ನುವಂತಹ ಪ್ರಶ್ನೆಯನ್ನೂ ಹುಟ್ಟು ಹಾಕಿದೆ. ಈಗಲೂ ಪರೇಶನ ಸಾವು ಹೇಗೆ ಸಂಭವಿಸಿತು ಎನ್ನುವುದರತ್ತ ಗಮನ ಹರಿಸಿ ನಿಜ ಸತ್ಯಗಳನ್ನು ಬಹಿರಂಗ ಪಡಿಸಬೇಕಾದ ಅಗತ್ಯವಿದೆ. ಚುನಾವಣಾ ದುರ್ಲಾಭದ ದುಷ್ಟ ಹಿತಾಸಕ್ತಿಗಳು ಇದಕ್ಕೆ ಅಂಟಿರುವುದರಿಂದ ಅಡಗಿಸಲಾದ ಅಂತಹ ಧಾರುಣ ಸತ್ಯಗಳು ಅನಾವರಣಗೊಳ್ಳುವುದು ಅತ್ಯಗತ್ಯ.

ಈ ಪ್ರಕರಣ ಮಾತ್ರವಲ್ಲ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಕದಡುವ ಪ್ರಸಂಗದಲ್ಲಿ ಅದನ್ನು ತಿಳಿಗೊಳಿಸುವ ಪ್ರಯತ್ನದ ಬದಲು ಅದನ್ನು ಮತ್ತಷ್ಟು ಹದಗೆಡಿಸುವ, ಕದಡಿದ ನೀರಿನಲ್ಲಿ ಮೀನು ಹಿಡಿಯುವ ಕೃತ್ಯಗಳೇ ಅಧಿಕ. ಈ ಹಿಂದೆ 2017 ಡಿಸೆಂಬ್ 14ರಂದು ಶೋಬಾ ಕರಂದ್ಲಾಜೆ ಮಾಡಿದ್ದ ಟ್ವೀಟ್ ಆಧರಿಸಿ ಪೊಲೀಸರು ಸ್ವಯಂಪ್ರೇರಣೆಯಿಂದ ಸೆಕ್ಷನ್ 153, 153 ಎ, (ಗಲಭೆಸೃಷ್ಟಿಸಲೆಂದೇ ಪ್ರಚೋದನೆ), 503 (2)–(ಶತೃತ್ವ, ದ್ವೇಷ ಸೃಷ್ಟಿಸಲು, ವಿವಿಧ ವರ್ಗಗಳ ನಡುವೆ ಅಪನಂಬಿಕೆ ಬೆಳೆಸಲು ಯತ್ನ) ರನ್ವಯ ಕ್ರಿಮಿನಲ್‌ಮೊದ್ದಮೆಯನ್ನು ಹೂಡಿದ್ದರು. ಹೊನ್ನಾವರದ ಮೊಗಡುಹಳ್ಳಿಯಲ್ಲಿ ಯುವನೊಬ್ಬನ ಒಡ್ಡಿದ ಬೆದರಿಕೆಯಿಂದ ಹೆದರಿ 9ನೆಯ ತಗತಿಯಲ್ಲಿ ಓದುತ್ತಿದ್ದ ಬಾಲಕಿ ಮೈಮೇಲೆ ತಾನೇ ಗಾಯ ಮಾಡಿಕೊಂಡ ಘಟನೆಯನ್ನು ಜಿಹಾದಿಗಳು ರೇಪ್ ಮಾಡಲು ಯತ್ನಿಸಿ ಗಾಯಗಳನ್ನು ಮಾಡಿದ್ದಾರೆ ಎಂದು ಕರಂದ್ಲಾಜೆ ಸುದ್ದಿ ಮಾಡಿದ್ದರು. ವೈದ್ಯರಿಗೆ ನಿಜ ಸಂಗತಿಯನ್ನು ಬಾಲಕಿಯು ಹೇಳಿದ್ದನ್ನು ತಿರುಚಿ ಪೊಲೀಸರು ಅವಳ ಬಾಯಿ ಮುಚ್ಚಿಸಿದ್ದಾರೆ ಎಂದೂ ಹೇಳಿದ್ದರು. ಕರಂದ್ಲಾಜೆಯವರನ್ನೂ ಒಳಗೊಂಡು ಇಂತಹ ತಿರುಚುವಿಕೆ, ದ್ವೇಷ ಹುಟ್ಟಿಸುವ ನಾಯಕರ ಸಂಖ್ಯೆಗೇನೂ ಕಡಿಮೆ ಇಲ್ಲ. ಇಂತಹ ಪ್ರಕರಣಗಳಲ್ಲಿ ಪೊಲೀಸರು ಕಾನೂನು ಜಾರಿಗೊಳಿಸಿ ದಾಖಲಿಸಿದ ಮೊಕದ್ದಮೆಗಳನ್ನು ಬೊಮ್ಮಾಯಿ ಸರಕಾರ ಹಿಂಪಡೆದಿರುವುದು ಏನನ್ನು ಸೂಚಿಸುತ್ತದೆ.

ಈಗಲೂ ಪರೇಶ ಪ್ರಕರಣದ ಸಂಗತಿಗಳನ್ನು ತಿರುಚಿ ಗಲಭೆಗಳನ್ನು ಸೃಷ್ಟಿಸಲು, ಶಾಂತಿ, ಸೌಹಾರ್ದತೆ ಕದಡಲು ಕಾರಣರಾದ ಎಲ್ಲರ ಮೇಲೆ ಕಠಿಣ ಕಾನೂನು ಕ್ರಮವನ್ನು ಜರುಗಿಸಬೇಕು. ಸಾವಿನ ಹಿಂದೆ ಅಡಗಿರುವ ರಹಸ್ಯವನ್ನು ಭೇಧಿಸಬೇಕು.

ಮೀಸಲಾತಿ ಪ್ರಮಾಣದ ಹೆಚ್ಚಳ: ಮುಂದಿನ ಪ್ರಶ್ನೆಗಳು

ಈ ವಾರ

ಎಸ್.ವೈ. ಗುರುಶಾಂತ್

ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡ (ಎಸ್.ಟಿ) ಸಮುದಾಯಗಳಿಗೆ ಶಿಕ್ಷಣ ಹಾಗೂ ಉದ್ಯೋಗದ ಅವಕಾಶಗಳಲ್ಲಿನ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಬೇಕು ಎನ್ನುವ ಪ್ರಮುಖ ಬೇಡಿಕೆಯನ್ನು ಮುಖ್ಯವಾಗಿ ಈ ಕುರಿತ ನ್ಯಾ.ಹೆಚ್.ಎಸ್.ನಾಗಮೋಹನದಾಸ್ ಆಯೋಗದ



ವರದಿಯನ್ನು ಪೂರ್ಣವಾಗಿ ಅಂಗೀಕರಿಸಲು ಶನಿವಾರದಂದಿನ ಕರ್ನಾಟಕ ಸರಕಾರದ ಸಚಿವ ಸಂಪುಟ ತೀರ್ಮಾನಿಸಿರುವುದು ಸ್ವಾಗತಾರ್ಹವಾಗಿದೆ.

ಈ ಸಮುದಾಯಗಳ ಜನಸಂಖ್ಯೆಯ ಪ್ರಮಾಣಕ್ಕನುಗುಣವಾಗಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಬೇಕೆಂಬ ನಿರ್ದೇಶನವನ್ನು ಕೇಂದ್ರ ಸರಕಾರದ ಹಂತದಲ್ಲಿ ಅಳವಡಿಸಿಕೊಂಡಿದ್ದರೂ ರಾಜ್ಯ ಸರಕಾರ ಕೈಗೊಂಡಿರಲಿಲ್ಲ. ಹೀಗಾಗಿ ಆದಿವಾಸಿ–ದಲಿತ ಸಂಘಟನೆಗಳು, ಈ ಸಮುದಾಯಗಳ ಧಾರ್ಮಿಕ ಪ್ರಮುಖರು ಮೀಸಲಾತಿಯ ಹೆಚ್ಚಳಕ್ಕೆ ನಿರಂತರವಾಗಿ ಆಗ್ರಹಿಸುತ್ತಲೇ ಬಂದಿದ್ದರು. ಈ ಬೇಡಿಕೆಯ ಬಗ್ಗೆ ವಚನ ನೀಡಿದ್ದ ಬಿಜೆಪಿ ಮರೆತು ಅಥವಾ ಅದನ್ನು ಗೋಜಲುಗೊಳಿಸುವ ವಿಳಂಬ ಅನುಸರಿಸುತ್ತಿದ್ದಾಗ ವಿಶೇಷವಾಗಿ ವಾಲ್ಮೀಕಿ ಪೀಠದ ಶ್ರೀಗಳ ನೇತೃತ್ವದಲ್ಲಿ ಸುಮಾರು 240 ದಿನಗಳಿಂದಲೂ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಿರಂತರ ಧರಣಿ ಸತ್ಯಾಗ್ರಹವನ್ನು ನಡೆಸಿದ್ದರು. ಸಮುದಾಯಗಳ ಆಗ್ರಹವನ್ನು, ಸ್ವಾಮೀಜಿಗಳ ಮನವಿಯನ್ನೂ ಲಕ್ಷಿಸಿ ಸರಕಾರ ಅಂದೇ ನಿರ್ಧಾರ ಕೈಗೊಳ್ಳಬಹುದಿತ್ತು.

ತೀರಾ ವಿಳಂಬದ ಬಳಿಕವಾದರೂ ನಿರ್ಧಾರ ಕೈಗೊಂಡಿತಲ್ಲಾ ಎಂದು ನಿಟ್ಟುಸಿರು ಬಿಡುವಾಗಲೂ ಅರಯಬೇಕಾದ ಹಲವು ಅಂಶಗಳನ್ನು ಮರೆಯುವಂತಿಲ್ಲ.

ಇದು ವಿವಿಧ ಸಮುದಾಯಗಳು, ಎಡ ಪಕ್ಷಗಳನ್ನು ಒಳಗೊಂಡು ವಿವಿಧ ವಿರೋಧ ಪಕ್ಷಗಳು ಹಾಕಿದ ಒತ್ತಡ, ಸಹಮತವೂ ಕಾರಣವೂ ಇದೆ. ಅದರಲ್ಲೂ ತೀವ್ರ ಒತ್ತಡಗಳು, ಬೆದರಿಕೆಗಳು, ಹುಸಿ ಭರವಸೆಗಳು ಬಂದರೂ, ಬೇಡಿಕೆ ಈಡೇರುವವರೆಗೂ ಕದಲುವುದಿಲ್ಲ ಎಂದು ಸತ್ಯಾಗ್ರಹದಲ್ಲಿ ಕುಳಿತ ವಾಲ್ಮೀಕಿ ಪೀಠದ

ಪುಟ 4 ಕ್ಕೆ

ಕೋಲಾರ ಜಿಲ್ಲೆಯ ದಲಿತರ ಮೇಲೆ ನಿರಂತರವಾಗಿ ದೌರ್ಜನ್ಯ: ಡಿಹೆಚ್‌ಎಸ್ ಖಂಡನೆ

ಕೋಲಾರ ಜಿಲ್ಲೆಯಲ್ಲಿ ದಲಿತರ ಮೇಲೆ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ. ಸಾಮಾಜಿಕ ನ್ಯಾಯ ಕೇಳಿದರೆ ದಲಿತರ ಮೇಲೆ ದೌರ್ಜನ್ಯ. ಇದಕ್ಕೆ ಪೊಲೀಸರ ಕುಮ್ಮಕ್ಕು ನೀಡಲಾಗುತ್ತಿದೆ. ರಾಜೀ ಮಾಡಿಸಿ ದಲಿತರಿಗೆ ಅನ್ಯಾಯ ಮಾಡುವುದು ದಿನನಿತ್ಯದ ಕೃತ್ಯವಾಗಿದೆ. ದಾನವಹಳ್ಳಿ ದಲಿತರ ಮೇಲಿನ ದೌರ್ಜನ್ಯವನ್ನು ದಲಿತ ಹಕ್ಕುಗಳ ಸಮಿತಿ–ಕರ್ನಾಟಕ (ಡಿಹೆಚ್‌ಎಸ್) ಖಂಡಿಸಿದೆ.

ಅಕ್ಟೋಬರ್ 3 ರಂದು ಕೋಲಾರ ತಾಲೂಕಿನ ದಾನವಹಳ್ಳಿಯ ದಲಿತರ ಕೇರಿಗೆ ದಸರ ಮೆರವಣಿಗೆ, ಗಂಗಮ್ಮದೇವಿ ಹಾಗೂ ಕಾಟೇರಮ್ಮದೇವಿ ಉತ್ಸವ ನಡೆದಿತ್ತು. ದೇವರು ದಲಿತರ ಕೇರಿಯ ಬೀದಿಗೆ ಬರುವುದಿಲ್ಲ. ಬಂದರು ಪೂಜೆ ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲವೆಂದು ದಲಿತರು ಪ್ರಶ್ನಿಸಿದರು. ಊರಿನ ಅರಳಿಕಟ್ಟೆ ಮುಂದೆ ಸೇರಿದ ಮೇಲ್ ವರ್ಗದ ಗ್ರಾಮಸ್ಥರು ಸೇರಿದಂತೆ ದಲಿತರು ಸೇರಿ ವಾಗ್ವಾದಕ್ಕಿಳಿದರು 'ದೇವರ ಉತ್ಸವದಲ್ಲಿ ದಲಿತರಾದ ನಮ್ಮಗೆ ಅವಕಾಶ ನೀಡದೆ ವಂಚನೆ ಮಾಡುತ್ತಿದ್ದೀರಾ ಎಂದು ದಲಿತ ಯುವಕರು ಆಕ್ಷೇಪ ಎತ್ತಿದರು.

ಇದರಿಂದ ಕುಪಿತರಾದ ಮೇಲ್‌ಜಾತಿಯವರು ಇವರ ಮಾತು ಒಪ್ಪಲಿಲ್ಲ. ಮಾತಿಗೆ ಮಾತು ಬೆಳೆದು ಜಾತಿ ಹೀಯಾಳಿಸಿದರಿಂದ ಗಲಾಟೆ ತೀವ್ರ ರೂಪ ಪಡೆದು ಕಲ್ಲು, ಇಟ್ಟಿಗೆಗಳಿಂದ ಬಡಿದಾಡಿಕೊಂಡಿದ್ದಾರೆ.

ಪೊಲೀಸರು ಈ ಗಲಾಟೆಯನ್ನು ತಡೆಯಲು ವಿಫಲರಾಗಿದ್ದು ಎರಡು ಕಡೆಯವರ ಮೇಲೆ ಕೇಸ್, ಕೌಂಟರ್ ಕೇಸ್ ಹಾಕಿದ್ದಾರೆ. ದಲಿತರ ಮೇಲೆ ಕೊಲೆ ಕೇಸು ಹಾಕಿರುವುದು ಸರಿಯಲ್ಲ. ದಲಿತರನ್ನು ಅವಮಾನಿಸುವುದು, ಕೆರಳಿಸುವುದು ಇಂದು ವಾಡಿಕೆಯಾಗಿದೆ. ದಲಿತರನ್ನು ಹೊಡೆದರೆ ತಕ್ಷಣ ಎಫ್ಐಆರ್ ಹಾಕುವುದಿಲ್ಲ. ಹಾಕಿದರು ಕೌಂಟರ್ ಕೇಸ್ ಹಾಕುತ್ತಾರೆ. ಬಿಜೆಪಿ ಸರ್ಕಾರ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ.

ದಲಿತರ ಮೇಲೆ ದೌರ್ಜನ್ಯ ಮಾಡಿದವರನ್ನು 'ದೌರ್ಜನ್ಯ ತಡೆ ಕಾಯ್ದೆ' ಅಡಿ ಬಂಧಿಸಬೇಕು. ಕಟ್ಟು ನಿಟ್ಟಿನ ಕ್ರಮ ಜರುಗಿಸಿ ನ್ಯಾಯ ಒದಗಿಸಬೇಕೆಂದು ದಲಿತ ಹಕ್ಕುಗಳ ಸಮಿತಿ(ಡಿಹೆಚ್‌ಎಸ್) ಕರ್ನಾಟಕ ಒತ್ತಾಯಿಸುತ್ತದೆ. ರಾಜ್ಯಾದ್ಯಂತ ಪ್ರತಿಭಟನೆಯನ್ನು ನಡೆಸಲು ಕರೆ ನೀಡಿದೆ.

ಮೀಸಲಾತಿ ಪ್ರಮಾಣದ ಹೆಚ್ಚಳ: ಮುಂದಿನ ಪ್ರಶ್ನೆಗಳು

ಪುಟ 3 ರಿಂದ

ಸ್ವಾಮೀಜಿಗಳು, ಬೆನ್ನುಲುಬಾಗಿ ಬೆಂಬಲಿಸಿದ ಎಲ್ಲರೂ ಅಭಿನಂದನಾರ್ಹರು. ಸರಕಾರವನ್ನು ಮಣಿಸಿ ಪಡೆದ ಜಯ.

ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳಿಗೆ ಶೇ.15 ಮತ್ತು ಶೇ.3 ನಿಗದಿ ಮಾಡಿ ನಾಲ್ಕು ದಶಕಗಳೇ ಕಳೆದಿವೆ. ಕಾಲಾನುಕ್ರಮದಲ್ಲಿ ಈ ಪಟ್ಟಿಯಲ್ಲಿ ಹೊಸದಾಗಿ ಹಲವು ಸಮುದಾಯಗಳೂ ಸೇರಿವೆ. 2011 ರ ಜನಗಣತಿಯನ್ನು ಆಧರಿಸಿದರೂ ಎಸ್.ಸಿ ಜನಸಂಖ್ಯೆ ಶೇ. 17 ಮತ್ತು ಎಸ್.ಟಿ. ಪ್ರಮಾಣ ಶೇ. 6.9 ಅಥವಾ 7 ಕ್ಕೆ ಬೆಳೆದಿದೆ. ಇನ್ನು ಹಲವು ಸಮುದಾಯಗಳು ಈ ಪಟ್ಟಿಗೆ ಸೇರಲು ಕಾದು ಕುಳಿತಿವೆ. ಈ ಸಮುದಾಯಗಳ ಸಂವಿಧಾನದತ್ತ ಹಕ್ಕುಗಳೂ, ಸಾಮಾಜಿಕ ನ್ಯಾಯ ದೊರಕಿಸುವ ಬದ್ಧತೆ ಕಾಯ್ದುಕೊಳ್ಳುವುದು ನಾಗರೀಕ ಸರಕಾರದ ಜವಾಬ್ದಾರಿ.

ನ್ಯಾ.ದಾಸ್ ಅವರ ಆಯೋಗದ ವರದಿಯನ್ನು ಪೂರ್ಣವಾಗಿ ಜಾರಿಗೊಳಿಸುವುದಾಗಿ ಸರಕಾರ ಹೇಳಿದೆ. ಮೊದಲನೆಯದಾಗಿ, ಈ ವರದಿಯನ್ನು ಸಾರ್ವಜನಿಕರಿಗೆ ಪೂರ್ಣವಾಗಿ ಲಭ್ಯವಾಗುವಂತೆ ಮಾಡಬೇಕು. ಮೀಸಲಾತಿಯ ಪ್ರಮಾಣ ಹೆಚ್ಚಳದ ವಿಷಯ ಸೂಚಿ ಪ್ರಧಾನವಾದ ಪರಿಶೀಲನಾ ಕಾರ್ಯಭಾರವನ್ನು ಕುಮಾರಸ್ವಾಮಿ ನೇತೃತ್ವದ ಸಮಿಶ್ರ ಸರಕಾರ ವಹಿಸಿತ್ತು. ಇದನ್ನು ಪರಿಶೀಲಿಸುವ ಜೊತೆಗೆ ಸಮುದಾಯಗಳ ಪ್ರಗತಿಗೆ, ಮೀಸಲಾತಿ ಪರಿಣಾಮಕಾರಿಯಾಗಲು ಅವಶ್ಯಕವಾದ ಹಲವು ಅಂಶಗಳನ್ನು ಆಯೋಗ ಪರಿಶೀಲಿಸಿರುವುದು ಅತ್ಯಂತ ಅಭಿನಂದನಾರ್ಹ. ಆಯೋಗದ ಕಾಳಜಿಯನ್ನು ಶ್ಲಾಘಿಸಲೇಬೇಕು.

ಮೀಸಲಾತಿ ಪ್ರಮಾಣದ ಹೆಚ್ಚಳದ ಜೊತೆಗೆ ಅದರ ಅನುಷ್ಠಾನದ ವಿಧಾನ ಹಾಗೂ ಅದರ ಕ್ಷೇತ್ರಗಳ ಪುನರ್ ಗುರುತಿಸುವಿಕೆಯೂ ಮುಖ್ಯ. ಶೈಕ್ಷಣಿಕ ಮತ್ತು ಔದ್ಯೋಗಿಕ ರಂಗಗಳು ವ್ಯಾಪಕವಾದ ಖಾಸಗೀಕರಣಕ್ಕೆ ಈಡಾಗಿರುವಾಗ, ಸರಕಾರದ, ಸಾರ್ವಜನಿಕ ವಲಯದ ಉದ್ಯೋಗಾವಕಾಶಗಳು ಶೇ.2 ರಷ್ಟಕ್ಕೆ ಕುಗ್ಗಿರುವಾಗ ಮೀಸಲಾತಿ ನೀಡಿಕೆಯನ್ನು ಖಾಸಗಿ ವಲಯಕ್ಕೂ ಅನ್ವಯಿಸುವುದು ಅತ್ಯಗತ್ಯ. ಇಲ್ಲವಾದಲ್ಲಿ ಸಾಮಾಜಿಕ ನ್ಯಾಯ ನೀಡಿಕೆ ಎನ್ನುವುದು ಅರ್ಥಹೀನವಾಗಿ ಕೇವಲ ಮತ ರಾಜಕಾರಣದ ವಸ್ತುವಾಗಿ ಉಳಿಯುತ್ತದೆ. ಆಯೋಗ ಇದನ್ನು ಗುರುತಿಸಿದೆ. ಹಾಗೇ ಸ್ವರ್ದಾವಕಾಶದಲ್ಲೂ ಅಸಮಾನತೆ ಇರುವುದರಿಂದಯಾವ ಸಮುದಾಯಗಳೂ ವಂಚಿತವಾಗದಂತೆ ಅವರ ಪಾಲು ಸಮನಾಗಿ ಸಿಗುವಂತಾಗಲು ಒಳ ಮೀಸಲಾತಿಯ ಅಗತ್ಯವನ್ನೂ ಪ್ರತಿಪಾದಿಸಿದೆ. ಇದನ್ನು ಸಹ ಪರಿಗಣಿಸಲಾಗುವುದು ಎನ್ನುವ ಮಾತನ್ನು ಸಚಿವರು ಹೇಳಿದ್ದಾರೆ. ಆದರೆ ಒಳ ಮೀಸಲಾತಿಯ ಜಾರಿಗೆ ಅಗತ್ಯವಿರುವ ಜಾತಿ ಜನಗಣತಿಯ ವರದಿ, ನ್ಯಾ.ಸದಾಶಿವ ಆಯೋಗದ ವರದಿಯ ಜಾರಿಯತ್ತ ಗಮನ ಹರಿಸದೇ ಮತಬೇಟೆ ರಾಜಕಾರಣದ ಲೆಕ್ಕಾಚಾರದಲ್ಲಿ ಮುಳುಗಿರುವ ಸರ್ಕಾರಗಳು ಪ್ರಜ್ಞಾಪೂರ್ವಕವಾಗಿಯೇ ವಿಳಂಬಿಸಿವೆ.

ಇವೆಲ್ಲವುಗಳತ್ತ ಸರಕಾರ ಗಮನಹರಿಸಬೇಕಿದೆ. ವಿಳಂಬದ ಯಾವ ನೆಪವೂ ವಂಚನೆಯ ಹಂಚಿಕೆಯಾಗುತ್ತದೆ.

ಜನ ಚಳುವಳಿಗಳ ಮೇಲಿನ ಜವಾಬ್ದಾರಿಯೂ ಹೆಚ್ಚಿದೆ.



ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಿರುವ ನವೀನ್‌ಕುಮಾರ್

ಭೂಗಳ್ಳ ಸರಕಾರದ ವಿರುದ್ಧ ರೈತರ ಹೋರಾಟ ತೀವ್ರಗೊಳ್ಳಬೇಕು

ಕೇಂದ್ರ, ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳ ವಿರುದ್ದ ಸಂಘಟಿತ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ ಎಚ್.ಆರ್. ನವೀನ್ ಕುಮಾರ್ ಕರೆ ನೀಡಿದರು.

ಹುಣಸೂರು ನಗರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ 2ನೇ ಮೈಸೂರು ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಶ್ರೀಮಂತ ಕಾರ್ಪೋರೆಟ್ ಕಂಪನಿಗಳ ಸಾಲ ಮನ್ನ ಮಾಡುವಲ್ಲಿ ತೋರುವ ಆಸಕ್ತಿಯನ್ನು ರೈತರ ಸಾಲ ಮನ್ನಾ ಮಾಡುವಲ್ಲಿ ಆಸಕ್ತಿ ತೋರುತ್ತಿಲ್ಲ, ಇದು ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ತೋರಿಸುತ್ತದೆ. ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿ ಮಾಡುತ್ತೇನೆಂದು ಹೇಳಿ ಅಧಿಕಾರಕ್ಕೆ ಬಂದ ಮೋದಿ ಸರ್ಕಾರ ರೈತರಿಗೆ ಮೋಸಮಾಡಿ ವರದಿ ಜಾರಿ ಮಾಡಲು ಸಾಧ್ಯವಿಲ್ಲ ಎಂದು ಅಫಿಡೇವಿಟ್ ಸಲ್ಲಿಸಿದೆ ಎಂದು ಆರೋಪಿಸಿದರು.


ಕಾರ್ಪೋರೇಟ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಕರಾಳ ಕೃಷಿ ಕಾನೂನನ್ನು ತಂದಿತ್ತು ಅದನ್ನು ಧೀರೋದಾತ್ತ ಹೋರಾಟದ ಮೂಲಕ ತಡೆಹಿಡಿಯಲಾಯಿತು. ಆದರೆ ಮೋದಿ ಸರ್ಕಾರ ಪುನಃ ಕರಾಳ ಕಾಯಿದೆಯನ್ನು ತರಲು ಹುನ್ನಾರ ನಡೆಸುತ್ತಿದೆ. ಇದನ್ನು ಹಿಮ್ಮೆಟ್ಟಿಸಲು ಸಂಘಟಿತರಾಗಬೇಕು,ಅಲ್ಲದೆ ಭೂಮಿಗಾಗಿ 50–60 ವರ್ಷಗಳಿಂದ ಸಾಗುವಳಿ ಪತ್ರಕ್ಕೆ ಅರ್ಜಿ ಸಲ್ಲಿಸಿ ಹಕ್ಕು ಪತ್ರಕ್ಕೆ ಕಾಯುತ್ತಿರುವ ರೈತರಿಗೆ ಸಾಗುವಳಿ ಪತ್ರ ನೀಡದೆ,ಕಾನೂನಿನ ನೆಪ ಹೇಳಿ ಸಾಗುವಳಿ ನಿರಾಕರಿಸುತ್ತಿದ್ದಾರೆ. ಆದರೆ ಅದೇ ಸಾಗುವಳಿ ಭೂಮಿಯನ್ನು ಸಂಘ ಸಂಸ್ಥೆಗಳಿಗೆ ನೀಡಲು ಕಂದಾಯ ಸಚಿವರ ನೇತೃತ್ವದಲ್ಲಿ ಸಮಿತಿ ಮಾಡಿ ಖಾಸಗಿ ಸಂಘ ಸಂಸ್ಥೆಗಳಿಗೆ ನೀಡುತ್ತಿದ್ದಾರೆ ಈ ಭೂಗಳ್ಳ ಸರ್ಕಾರದ ವಿರುದ್ಧ ತೀವ್ರ ಹೋರಾಟಕ್ಕೆ ಅಣಿನೆರೆಸಬೇಕಿದೆ ಎಂದರು.



ವೇದಿಕೆಯಲ್ಲಿ ಅಥಿತಿಗಳಾಗಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜಯರಾಂ, ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕೆ.ಬಸವರಾಜ್, ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ನೂರಾಣಿ, ಜಿಲ್ಲಾ ಅಧ್ಯಕ್ಷ ಚಿಕ್ಕಣ್ಣೇಗೌಡ, ಮುಖಂಡರಾ ಕೆಂಪಯ್ಯ, ಚಂದ್ರಶೇಖರ್ ಮುಂತಾದವರು ಇದ್ದರು. ಇದಕ್ಕೂ ಮುಂಚೆ ರಾಮಸ್ವಾಮಿ ವೃತ್ತದಿಂದ ಬುದ್ದ ವಿಹಾರದ ವರೆಗೆ ಮೆರವಣಿಗೆ ನಡೆಸಲಾಯಿತು.

ಕೃಷಿ ಕಾರ್ಮಿಕರು ಮತ್ತು ಬುಡಕಟ್ಟು ಜನಗಳಿಗಾಗಿ ಶ್ರಮಿಸಿದ ಕುಮಾರ್ ಶಿರಾಳ್ಕರ್: ಶ್ರದ್ಧಾಂಜಲಿ

ಮಹಾರಾಷ್ಟ್ರದ ಕೃಷಿ ಕಾರ್ಮಿಕರು ಮತ್ತು ಬುಡಕಟ್ಟು ಜನಾಂಗದವರ ನಾಯಕ, ವಿಚಾರವಾದಿ ಮತ್ತು ಎಡ ಚಳವಳಿಯ ಅತ್ಯುನ್ನತ ನಾಯಕರಲ್ಲಿ ಒಬ್ಬರಾದ ಕಾಮ್ರೇಡ್ ಕುಮಾರ್ ಶಿರಾಳ್ಕರ್ 2 ಅಕ್ಟೋಬರ್ 2022 ರಂದು ನಾಸಿಕ್‌ನ ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ 75 ವರ್ಷ ವಯಸ್ಸಾಗಿತ್ತು. ಅವರ ನಿಧನವು ಮಹಾರಾಷ್ಟ್ರದ ಕಾರ್ಮಿಕ ಸಂಘ ಮತ್ತು ಪ್ರಗತಿಪರ ಚಳವಳಿಗೆ



ದೊಡ್ಡ ನಷ್ಟವಾಗಿದೆ ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿದ್ದಾರೆ.

ಕುಮಾರ್ ಶಿರಾಳ್ಕರ್ ಅವರು 70 ರ ದಶಕದ ಆರಂಭದಲ್ಲಿ ಇಂಜಿನಿಯರ್ ಹುದ್ದೆಯನ್ನು ತೊರೆದು ಮತ್ತು ಉತ್ತರ ಮಹಾರಾಷ್ಟ್ರದ ಆದಿವಾಸಿಗಳನ್ನು ವರ್ಗ ದೃಷ್ಟಿಕೋನದಿಂದ ಸಂಘಟಿಸಲು 'ಶ್ರಮಿಕ್ ಸಂಘಟನಾ' ಸ್ಥಾಪಿಸಿದರು. 80 ರ ದಶಕದ ಆರಂಭದಲ್ಲಿ ಕೃಷಿ ಕಾರ್ಮಿಕರನ್ನು ಸಂಘಟಿಸಲು ಪ್ರಾರಂಭಿಸಿದರು ಮತ್ತು ಮಹಾರಾಷ್ಟ್ರದ ಕೃಷಿ ಕಾರ್ಮಿಕರಸಂಘದರಾಜ್ಯಕಾರ್ಯದರ್ಶಿಯಾಗಿದ್ದರು. ಅವರು ದೀರ್ಘಕಾಲ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ನ ಜಂಟಿ ಕಾರ್ಯದರ್ಶಿಯಾಗಿದ್ದರು. ಅವರು ಮಹಾರಾಷ್ಟ್ರದಲ್ಲಿ ಸಿಐಟಿಯು ಜೊತೆ ನಿಕಟ ಸಂಬಂಧ ಹೊಂದಿದ್ದರು. ಮಹಾರಾಷ್ಟ್ರದ ಕಬ್ಬು ಅರೆಯುವ ಕಾರ್ಮಿಕರ ಸಂಕಷ್ಟದ ಕುರಿತು ಅಧ್ಯಯನ ನಡೆಸಿದ್ದಾರೆ.

ಕೋಲಾರ ಜಿಲ್ಲಾ 17ನೇ ಸಮ್ಮೇಳನ
ಕೇಂದ್ರ ಸರ್ಕಾರವು ರೈತರು ಕೃಷಿಯನ್ನು ತ್ಯಜಿಸುವಂತ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಮುಂದಾಗಿದೆ


ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಜಿ.ಸಿ. ಬಯ್ಯಾರೆಡ್ಡಿ

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸುತ್ತಿರುವ ಡಬಲ್ ಇಂಜಿನ್ ಸರ್ಕಾರಗಳು ಕಾರ್ಪೋರೇಟ್ ಕಂಪನಿಗಳ ಪರ ನಿಂತು ರೈತರ ಬದುಕು ಹಾಳು ಮಾಡುತ್ತಿವೆ. ರೈತಾಪಿ ಕೃಷಿಯನ್ನು ಸರ್ವನಾಶ ಮಾಡಿ ಕಂಪನಿ ಕೃಷಿ – ಕಾರ್ಪೋರೇಟ್ ಕೃಷಿಯನ್ನು ಪ್ರೋತ್ಸಾಹಿಸುತ್ತಿದೆ ಎಂದು ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯಾಧ್ಯಕ್ಷ ಕಾಂ. ಜಿ.ಸಿ.ಬಯ್ಯಾರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ 17ನೇ ಸಮ್ಮೇಳನದ ಅಂಗವಾಗಿ ಶ್ರೀನಿವಾಸಪುರ ಪಟ್ಟಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಉದಾರೀಕರಣ – ಜಾಗತೀಕರಣ ನೀತಿಗಳ ಜಾರಿಯಾದ 30 ವರ್ಷಗಳಲ್ಲಿ ದೇಶದಲ್ಲಿ 6 ಲಕ್ಷಕ್ಕೂ ಅಧಿಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತ ಪರಿಸ್ಥಿತಿ ಇದ್ದಾಗಲೂ, ರೈತರ ಸಮಸ್ಯೆಗಳನ್ನು ಬಗೆಹರಿಸದೇ, ರೈತ ವಿರೋಧಿ ಕಾಯ್ದೆಗಳನ್ನು ಜಾರಿ ಮಾಡಲು ಕೇಂದ್ರ ಸರ್ಕಾರ ಹೊರಟಿಸುವುದು ಅತ್ಯಂತ ಖಂಡನೀಯ. ಇಡೀ ದೇಶದ ಕೃಷಿಯನ್ನು ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿ, ರೈತರು ಕೃಷಿಯನ್ನು ತ್ಯಜಿಸುವಂತ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಮುಂದಾಗಿರುವುದು ಅತ್ಯಂತ ನಾಚಿಕೆಗೇಡಿನ ವಿಷಯವಾಗಿದೆ ಎಂದರು.

ರೈತರ ಆದಾಯವನ್ನು ದ್ವಿಗುಣ, ಸಾಲಮನ್ನಾ, ರೈತರ ಉತ್ಪನ್ನಗಳಿಗೆ ಬೆಂಬಲ ಬೆಲೆಗಾಗಿ ಡಾ॥ಸ್ವಾಮಿನಾಥನ್ ವರದಿ ಜಾರಿಗೊಳಿಸುವ ನರೇಂದ್ರ ಮೋದಿಯವರ ಚುನಾವಣಾ ಪೂರ್ವ ಭರವಸೆಗಳನ್ನು ಈಡೇರಿಸುವ ಬದಲಿಗೆ ರೈತ ವಿರೋಧಿಯಾದ ಎಪಿಎಂಸಿ ಕಾಯ್ದೆಗಳು, ವಿದ್ಯುತ್ ಖಾಸಗೀಕರಣ, ಅಗತ್ಯವಸ್ತುಗಳ ದಾಸ್ತಾನು ಕಾಯ್ದೆಗಳು ಹೀಗೆ ಹಲವಾರು ಕಾಯ್ದೆಗಳು ಕಾರ್ಪೋರೇಟ್ ಕಂಪನಿಗಳ ಅನುಕೂಲಕ್ಕೆ ಜಾರಿಗೊಳಿಸಲು ಮುಂದಾಗಿದೆ. ದೇಶದಲ್ಲಿ ರೈತ ಸಂಘಗಳು ಒಗ್ಗಟ್ಟಿನ ಪ್ರದರ್ಶನ ಮತ್ತು ಕಾರ್ಮಿಕ ಸಂಘಗಳು ಜನಪರ ಸಂಘಟನೆಗಳ ಸಖ್ಯತೆಯಿಂದ ದೆಹಲಿಯ ಸುತ್ತಲೂ ಸಮರಶೀಲ ಹೋರಾಟಗಳನ್ನು ನಡೆಸಿದ ಪರಿಣಾಮ ಕಾಯ್ದೆಗಳು ಈಗ ಸಧ್ಯಕ್ಕೆ ವಾಪಸ್ಸಾಗಿವೆ. ಆದರೆ ಕೇಂದ್ರ ಸರ್ಕಾರ ಈ ಕಾಯ್ದೆಗಳನ್ನು ರಾಜ್ಯ ಸರ್ಕಾರಗಳ ಮೂಲಕ ಜಾರಿ ಮಾಡಲು ಪಿತೂರಿ ನಡೆಸುತ್ತಿದೆ ಎಂದು ಆರೋಪಿಸಿದರಲ್ಲದೇ ರೈತರ ಸಾಲ ಮನ್ನಾ, ಋಣಮುಕ್ತ ಕಾಯ್ದೆ ಜಾರಿಗಾಗಿ, ಎಲ್ಲಾ ಕೃಷಿ ಉತ್ಪನ್ನಗಳಿಗೂ ಬೆಂಬಲ ಬೆಲೆ ಜಾರಿಗಾಗಿ, ಮುಂದಿನ ದಿನಗಳಲ್ಲಿ ಸಂಘಟಿತ ಹೋರಾಟ ಅನಿವಾರ್ಯವಾಗಲಿದೆ ಎಂದರು.

ಬಹಿರಂಗ ಸಭೆಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕೆಪಿಆರ್‌ಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್ ಮಾತನಾಡುತ್ತಾ ರಾಜ್ಯದಲ್ಲಿ ಅತಿವೃಷ್ಠಿ – ಅನಾವೃಷ್ಠಿಯಿಂದ ರೈತರ ಬೆಳೆಗಳು ಹಾಳಾಗಿವೆ. ರೈತರಿಗೆ ಸರಿಯಾದ ಪರಿಹಾರ ನೀಡುತ್ತಿಲ್ಲ. ಕರ್ನಾಟಕದಲ್ಲಿ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ಮಾಡಿ ಭೂಮಿ ರೈತರಿಂದ ಕೈತಪ್ಪಿ, ಕಾರ್ಪೋರೇಟ್ ಕಂಪನಿಗಳ ಮತ್ತು ಬಂಡವಾಳಗಾರರ ಕೈ ಸೇರುವಂತೆ ಮಾಡಿದೆ. ಅಭಿವೃದ್ಧಿ ಹೆಸರಿನಲ್ಲಿ ಬಲವಂತ ಭೂಸ್ವಾಧೀನ ಕ್ರಮಗಳು ಹೆಚ್ಚಾಗಿವೆ. ಜಾನುವಾರು ಹತ್ಯೆ ನಿಷೇಧದಿಂದ ಹಾಲು ಉತ್ಪಾದಕ ರೈತರು ದೊಡ್ಡ ಪ್ರಮಾಣದಲ್ಲಿ ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ. ರಾಜ್ಯದಲ್ಲಿ ಜನಾಂಗೀಯ ಕಲಹಗಳು ಮತ್ತು ಕೋಮುವಾದವನ್ನು ಬಲಪಡಿಸುತ್ತಾ ಜನರ ಸಮಸ್ಯೆಗಳನ್ನು ನಿರ್ಲಕ್ಷ್ಯಿಸುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕು ಎಂದು ಕರೆ ನೀಡಿದರು.

ಬಹಿರಂಗ ಸಭೆ ಅಧ್ಯಕ್ಷತೆ ವಹಿಸಿದ್ದ ರೈತ ಸಂಘದ ಜಿಲ್ಲಾಧ್ಯಕ್ಷ ಪಿ.ಆರ್.ಸೂರ್ಯನಾರಾಯಣ ಮಾತನಾಡಿ ಕೋಲಾರ ಜಿಲ್ಲೆ ಹಣ್ಣು ಮತ್ತು ತರಕಾರಿ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿ ಇದೆ. ಹಣ್ಣಿನ ಸಂಸ್ಕರಣ ಘಟಕಗಳು ಮತ್ತು ಕೃಷಿಯಾಧಾರಿತ ಕೈಗಾರಿಕೆಗಳು ಇಲ್ಲದೇ ರೈತರು ತುಂಬ ನಷ್ಟ ಅನುಭವಿಸುತ್ತಿದ್ದಾರೆ. ಜಿಲ್ಲೆಯ ಕೃಷಿಯು ಮಳೆ ಮತ್ತು ಅಂತರ್ಜಲ ಅಶ್ರಿತವಾಗಿರುವುದರಿಂದ ಎತ್ತಿನಹೊಳೆ, ಮೇಕೆ ದಾಟು ಸೇರಿದಂತೆ ಸೇರಿದಂತೆ ಕೃಷಿ ಕಣಿವೆಯ ಭಾಗದ ನೀರನ್ನು ನಮ್ಮ ಜಿಲ್ಲೆಗೆ ತರುವ ಪ್ರಯತ್ನಗಳಾಗಬೇಕು. ಕೆರೆ ಕಾಲುವೆಗಳನ್ನು ಅಭಿವೃದ್ಧಿಪಡಿಸಿ ಸಮಗ್ರ ನೀರಾವರಿ ಯೋಜನೆಗಳ ಜಾರಿಗಾಗಿ ಇಲ್ಲಿನ ಜನ ಸಂಘಟಿತ ಹೋರಾಟ ನಡೆಸಬೇಕೆಂದರು. ಜಿಲ್ಲೆಯಲ್ಲಿ ಹೈನುಗಾರಿಕೆ, ಕೋಳಿ, ಕುರಿ ಉದ್ದಿಮೆಯಲ್ಲಿ ಬಹಳಷ್ಟು ಅಲವಂಬಿಸಿವೆ. ಇವುಗಳ ಉಳಿವಿಗಾಗಿ ಜಿಲ್ಲೆಯಲ್ಲಿ ಪಶು ವೈದ್ಯಕೀಯ ವಿಜ್ಞಾನಿಗಳ ಕಾಲೇಜಿಗಾಗಿ ಒತ್ತಾಯ ಮಾಡಬೇಕಾಗಿದೆ. ಎಂದರು.

ವೇದಿಕೆಯಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಎಸ್.ಸಿ.ಮುರಳಿನಾಥ್, ಗೌರವಾಧ್ಯಕ್ಷರಾದ ಡಾ. ವೆಂಕಟಚಲ, ಪಾತಕೋಟೆ ನವೀನ್‌ಕುಮಾರ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಟಿ.ಎಂ. ವೆಂಕಟೇಶ್, ಎಸ್.ಕೋಟೇಶ್, ವೀರಪ್ಪರೆಡ್ಡಿ, ಗಂಗಮ್ಮ ಆರ್.ವೆಂಕಟೇಶ್, ಸೈಯದ್ ಪಾರೂಕ್, ಕಲಾವಿದ ಸ್ವಾಮಿ, ಮುನಿವೆಂಕಟೇಗೌಡ, ಶ್ರೀರಾಮ್, ನಾರಾಯಣರೆಡ್ಡಿ, ಪಿ.ಆರ್.ಶಂಕರ್, ಪಿ.ಶ್ರೀನಿವಾಸ್, ವೆಂಕಟಪ್ಪ ಇದ್ದರು.

ಎರಡು ದಿನಗಳ ಕಾಲ ನಡೆದ ರೈತ ಸಂಘದ ಜಿಲ್ಲಾ ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ಟಿ.ಎಂ. ವೆಂಕಟೇಶ್‌ರವರು ಮಂಡಿಸಿದ ಕರಡು ವರದಿ ಮೇಲೆ 12 ಮಂದಿ ಚರ್ಚೆ ನಡೆಸಿದರು. ಸಮ್ಮೇಳನದಲ್ಲಿ ಜಿಲ್ಲೆಯಲ್ಲಿ ಕೃಷಿಯಾಧಾರಿತ ಕೈಗಾರಿಕೆಗಳ ಜಾರಿಗಾಗಿ, ಸಮಗ್ರ ನೀರಾವರಿ, ಬಲವಂತ ಭೂಸ್ವಧೀನ ವಿರೋಧಿಸಿ, ಹಾಗೂ ಬಗರ್ ಹುಕ್ಕುಂ ಸಾಗುವಳಿ ಸಕ್ರಮಕ್ಕಾಗಿ, ಜಿಲ್ಲೆಯಲ್ಲಿ ಹೈನುಗಾರಿಕೆ ವಿಜ್ಞಾನಿಗಳ ಕಾಲುವೆ ಸ್ಥಾಪನೆಗಾಗಿ, ಜಿಲ್ಲೆಯಲ್ಲಿ ಕೆರೆ ಕಾಲುವೆಮಗಳ ಸಂರಕ್ಷಣೆಗಾಗಿ ಮತ್ತಿತರ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕೊನೆಯಲ್ಲಿ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾಗಿ ಟಿ.ಎಂ.ವೆಂಕಟೇಶ್, ಉಪಾಧ್ಯಕ್ಷರಾಗಿ ಪಿ.ಶ್ರೀನಿವಾಸ್, ಪಿ.ಆರ್.ಸೂರ್ಯನಾರಾಯಣ, ಗಂಗಮ್ಮ, ವೆಂಕಟಪ್ಪ, ಅಲಹಳ್ಳಿ ವೆಂಕಟೇಶಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಪಾತಕೋಟೆ ನವೀನ್‌ಕುಮಾರ್, ಜಂಟಿ ಕಾರ್ಯದರ್ಶಿಯಾಗಿ ವಿ.ನಾರಾಯಣರೆಡ್ಡಿ, ಸೈಯದ್ ಫಾರೂಕ್, ಎನ್. ಎನ್.ಶ್ರೀರಾಮ್, ಕಲ್ಲುಕೆರೆ ಬಾಬು, ಸದಸ್ಯರಾಗಿ ಎಸ್.ಎಂ.ನಾಗರಾಜ್, ಆರ್.ವೆಂಕಟೇಶ್, ವೆಂಕಟಲಕ್ಷ್ಮಮ್ಮ, ಕುರ್ಕಿ ದೇವರಾಜ್, ಎನ್.ಯಲ್ಲಪ್ಪ, ವಿ.ವೆಂಕಟೇಶಪ್ಪ, ಸಿ.ಮುನಿಸ್ವಾಮಿಗೌಡ, ಸಿಂಗಪುರ್ ನಾರಾಯಣಪ್ಪ, ಕೃಷ್ಣಪ್ಪ, ಕಲಾವಿದ ಸ್ವಾಮಿ, ಮುನಿವೆಂಕಟೇಗೌಡ, ಶ್ರೀಧರ್, ಶಿವರಾಜ್ ಆಯ್ಕೆಯಾದರು.



➘ ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಅವರು ಜೈಲುವಾಸವನ್ನೂ ಅನುಭವಿಸಿದರು ಎಂದು ತಪನ್ ಸೆನ್ ನೆನಪಿಸಿಕೊಂಡಿದ್ದಾರೆ.

ಮಾರ್ಕ್ಸ್‌ವಾದಿ ತತ್ವಶಾಸ್ತ್ರದಲ್ಲಿ ಆಳವಾದ ತಿಳುವಳಿಕೆ ಹೊಂದಿದ್ದ ಅವರು ಸೈದ್ಧಾಂತಿಕ ಹೋರಾಟಗಳಲ್ಲಿ ದೃಢ ನಿಲುವು ತಳೆದಿದ್ದವರು ಹಾಗೂ ಬಲವಾದ ವರ್ಗ ದೃಷ್ಟಿಕೋನದೊಂದಿಗೆ ಚಳುವಳಿ ಕಟ್ಟಿದವರು. ಎರಡು ಪುಸ್ತಕಗಳು ಮತ್ತು ವಿವಿಧ ವಿಷಯಗಳ ಮೇಲೆ ಹಲವಾರು ಲೇಖನಗಳನ್ನು ಅವರು ಬರೆದಿದ್ದಾರೆ. ದಲಿತರು ಮತ್ತು ಬುಡಕಟ್ಟು ಜನಾಂಗದವರ ವಿಮೋಚನೆಗೆ ಬದ್ಧರಾಗಿದ್ದ ಅವರು ಈ ವಿಷಯದ ಬಗ್ಗೆ ಅಪಾರವಾಗಿ ಬರೆದಿದ್ದಾರೆ. ಬದುಕಿನಲ್ಲೂ ಅವರದ್ದು ಮಾದರಿ ಸರಳ ಜೀವನ, ಅನಾರೋಗ್ಯದಿಂದ ಬಳಲುತ್ತಿದ್ದಾಗಲೂ ಅವರು ಹಳ್ಳಿಯಲ್ಲಿ ಆದಿವಾಸಿಗಳ ನಡುವೆಯೇ ಇದ್ದರು.

ಮಹಾರಾಷ್ಟ್ರದಲ್ಲಿ ಸಿಐಟಿಯು ಕಾರ್ಯಕರ್ತರ ಶಿಕ್ಷಣಕ್ಕೆ ಅವರು ನೀಡಿದ ನೆರವನ್ನು ತಪನ್ ಸೆನ್ ಸ್ಮರಿಸಿಕೊಳ್ಳುತ್ತ ಅವರ ನಿಧನವು ಮಹಾರಾಷ್ಟ್ರದ ಕಾರ್ಮಿಕ ಸಂಘ ಮತ್ತು ಪ್ರಗತಿಪರ ಚಳವಳಿಗೆ ದೊಡ್ಡ ನಷ್ಟ ಎಂದಿದ್ದಾರೆ, ಅವರ ಕುಟುಂಬ ಮತ್ತು ಒಡನಾಡಿಗಳಿಗೆ ಸಿಐಟಿಯು ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

ಕ.ಪ್ರಾಂ.ರೈತ ಸಂಘ ದ.ಕ.ಜಿಲ್ಲಾ ಸಮ್ಮೇಳನ

"ಉಳುವವನೇ ಹೊಲದೊಡೆಯ" ಎಂಬ ಘೋಷಣೆಯೊಂದಿಗೆ ರೈತರ ಭೂಮಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ದ.ಕ.ಜಿಲ್ಲೆಯ ರೈತ ಸಂಘದ ಇಂದಿನ ರೈತ ಕೃಷಿ ಕಾರ್ಮಿಕರನ್ನು ಪ್ರತಿನಿಧಿಸುವ ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಸಮ್ಮೇಳನವು ಅಕ್ಟೋಬರ್ 2 ರಂದು ಉಳ್ಳಾಲ ವಲಯದ ಮುನ್ನೂರಿನಲ್ಲಿ ಜರುಗಿತು.

ಕ.ಪ್ರಾಂ.ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಶಾಂತರಾಮ ನಾಯಕ್ ಅವರು ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಇಂದಿನ ಕೇಂದ್ರ ಸರಕಾರವು ಕೃಷಿ ವಲಯವನ್ನು ಕಾರ್ಪರೇಟ್ ಉದ್ಯಮಿಗಳಿಗೆ ಹಸ್ತಾಂತರಿಸುವ ಸಂಕಲ್ಪದೊಂದಿಗೆ 3 ಕೃಷಿ ಕಾಯ್ದೆಗಳನ್ನು ಜಾರಿ ಮಾಡಿತ್ತು. ದೇಶದ ರೈತ ಸಂಘಟನೆಗಳು ಇತರ ಶ್ರಮಿಕ ಸಂಘಟನೆಗಳ ಜೊತೆಗೂಡಿ, ರೈತ ವಿರೋಧಿಯಾದ ಈ ಕಾನೂನಗಳನ್ನು ಹಿಂದೆಗೆಯಬೇಕೆಂದು ಆಗ್ರಹಿಸಿ ನವದೆಹಲಿ ಕೇಂದ್ರಿತವಾಗಿ ಒಂದು ವರ್ಷಕ್ಕೂ ಮೀರಿ ಧರಣಿ ಸತ್ಯಾಗ್ರಹವನ್ನು ನಡೆಸಿದವು. ಈ ಸಮರಧೀರ ಹೋರಾಟಕ್ಕೆ ಬಾಗಿದ ಕೇಂದ್ರ ಸರಕಾರವು ಈ ಕಾನೂನುಗಳನ್ನು ಹಿಂತೆಗೆದುಕೊಂಡುದು ಇತಿಹಾಸವಾಗಿದೆ. ನಮ್ಮ ಕರ್ನಾಟಕ ರಾಜ್ಯ ಸರಕಾರವು ಕೂಡಾ ಕೇಂದ್ರ ಕಾನೂನುಗಳಿಗೆ ಸಮಾನಾಂತರವಾದ 3 ರೈತ ವಿರೋಧಿ ಕಾನೂನುಗಳನ್ನು ಜಾರಿ ಮಾಡಿದೆ. ಅವನ್ನು ಹಿಂತೆಗೆಯುವಂತೆ ಮಾಡಲು ರಾಜ್ಯದ ರೈತ ಸಂಘಟನೆಗಳು ನಡೆಸುತ್ತಿರುವ ಹೋರಾಟವನ್ನು ಯಶಸ್ವಿಗೊಳಿಸುವಂತೆ ಮಾಡುವ ಜವಾಬ್ದಾರಿ ರೈತ ಚಳವಳಿಗಿದೆ ಎಂದವರು ಹೇಳಿದರು.

ಕೇಂದ್ರ ಸರಕಾರವು ಜಿಎಸ್‌ಟಿ ತೆರಿಗೆಯನ್ನು ಕೃಷಿ ಉತ್ಪನ್ನ ಹಾಗೂ ಸಲಕರಣೆಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಹೇರಿರುವುದರಿಂದ ಕೃಷಿಯ ಉತ್ಪಾದನಾ ವೆಚ್ಚ ಹಾಗೂ ಕೃಷಿಯ ಉತ್ಪನ್ನಗಳ ವೆಚ್ಚದ ಹೊರೆ ರೈತನಿಗೆ ಮಾತ್ರವಲ್ಲ ಜನಸಾಮಾನ್ಯರ ಮೇಲೆಯೂ ಬೀಳಲಿದೆ. ಡಾ.ಎಂ.ಎಸ್.ಸ್ವಾಮಿನಾಥನ್ ವರದಿಯಂತೆ ಸರಕಾರವು ರೈತರಿಂದ ಕೊಳ್ಳುವ ಕೃಷ್ಯುತ್ಪನ್ನಗಳಿಗೆ ಸಮಗ್ರ ಉತ್ಪಾದನಾ ವೆಚ್ಚದ ಒಂದೂವರೆಪಟ್ಟು ದರ ಕೊಡಬೇಕಾಗಿದೆ. ಆದರೂ ಈ ಬಗ್ಗೆ ಕೇಂದ್ರ ಸರಕಾರ ಮೌನವಾಗಿದೆ. ಇನ್ನೊಂದೆಡೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ವಿದ್ಯುಚ್ಛಕ್ತಿ ಉತ್ಪಾದನೆ ಹಾಗೂ ವಿತರಣೆಯನ್ನು ಖಾಸಗಿ ರಂಗದ ಉದ್ಯಮಿಗಳಿಗೆ ಹಸ್ತಾಂತರಿಸಲು ಕಾನೂನು ಸಿದ್ಧಪಡಿಸಿದೆ. ಇದರಿಂದ ರೈತನಿಗೆ ವಿದ್ಯುತ್ ಪೂರೈಕೆಯಲ್ಲಿ ಸಬ್ಸಿಡಿ ದರಗಳು, ಭಾಗ್ಯಜ್ಯೋತಿ, ಕುಟೀರ ಜ್ಯೋತಿಯಂಥಾ ಬಡಜನರ ಸೌಲಭ್ಯಗಳು ಇಲ್ಲವಾಗುವವು. ಇಂಥ ಜನವಿರೋಧಿ ಕಾಯಿದೆಯನ್ನು ಜಾರಿಗೊಳಿಸದಂತೆ ರೈತ ಚಳವಳಿಗಳು ಒತ್ತಾಯಿಸಬೇಕಾಗಿದೆ ಎಂಬುದಾಗಿ ಶಾಂತರಾಮ ನಾಯಕ್ ಹೇಳಿದರು.

ಕ.ಪ್ರಾಂ.ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೆ.ಕೃಷ್ಣಪ್ಪ ಸಾಲಿಯಾನ್ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ರೈತ ಸಂಘದ ಹಿರಿಯ ಮುಖಂಡರಾದ ವಾಸುದೇವ ಉಚ್ಚಿಲ ಸಮ್ಮೇಳನದ ಧ್ವಜಾರೋಹಣ ಮಾಡಿದರು. ಉದ್ಘಾಟನಾ ಸಭೆಯಲ್ಲಿ ಕಾರ್ಮಿಕ ಮುಖಂಡ ಸುಕುಮಾರ್ ಹಾಗೂ ಡಿವೈಎಫ್ಐ ಮುಖಂಡರಾದ ಸುನಿಲ್ ತೇವುಲ ಶುಭ ಹಾರೈಸಿ ಮಾತನಾಡಿದರು. ಹಿರಿಯ ರೈತ ಮುಖಂಡ ಯು.ಬಿ.ಲೋಕಯ್ಯ, ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಮುಖಂಡರಾದ ಸದಾಶಿವ ದಾಸ್, ಜಯಂತ ಅಂಬ್ಲಮೊಗರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರತಿನಿಧಿ ಅಧಿವೇಶನದಲ್ಲಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿಯವರು ಕಳೆದ ಸಮ್ಮೇಳನದ ಬಳಿಕದ ಚಟುವಟಿಕೆಗಳ ವರದಿಯನ್ನು ಮಂಡಿಸಿದರು. ಪ್ರತಿನಿಧಿ ಸಮ್ಮೇಳನವು ಮುಂದಿನ ಅವಧಿಗೆ 14 ಮಂದಿಯ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದೆ.

ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ್ತಿ ದುರ್ಗಾವತಿದೇವಿ ಭಗವತಿ ಚರಣ್ ವೋಹ್ರಾ



ದುರ್ಗಾವತಿ ದೇವಿ

ಸ್ವಾತಂತ್ರ್ಯ ಸಮರದಲ್ಲಿ ಹುತಾತ್ಮರಾದ ಲಕ್ಷಾಂತರ ಜನ ಸ್ವಾತಂತ್ರ್ಯ ಸೇನಾನಿಗಳಲ್ಲಿ ಬಹುಮುಖ್ಯವಾಗಿ ಇಂದಿಗೂ ಯುವಜನರ ಮನಸಿನಲ್ಲಿ ಸ್ಫೂರ್ತಿಯಾಗಿ ನಿಂತಿರುವುದು ಭಗತ್‌ಸಿಂಗ್ ಹಾಗೂ ಅವರ ಸಂಗಾತಿಗಳು. ಭಗತ್‌ಸಿಂಗ್, ಲಾಲ್ ಲಜಪತ್ ರಾಯ್ ಅವರ ಕೊಲೆಗೆ ಕಾರಣರಾಗಿದ್ದ ಸ್ಯಾಂಡರ್ಸ್‌ನನ್ನು ಕೊಲೆ ಮಾಡಲು ಸಂಚು ರೂಪಿಸಿ, ಬ್ರಿಟಿಷ್ ಕಚೇರಿಯ ಮುಂದೆನೆ ಗುಂಡು ಹಾರಿಸಿ ಕೊಲೆ ಮಾಡುತ್ತಾರೆ. ಈ ಪ್ರಕರಣದಲ್ಲಿ ಭಗತ್‌ಸಿಂಗ್, ರಾಜಗುರು, ಸುಖದೇವ್ ಮೂವರು ಪೋಲಿಸರ ಕಣ್ಣಿನಿಂದ ತಪ್ಪಿಸಿಕೊಂಡು ಲಾಹೋರಿನಿಂದ ಕಲ್ಕತ್ತಾಗೆ ಹೊರಡುವ ಯೋಜನೆಯನ್ನು ರೂಪಿಸಿರುತ್ತಾರೆ ಆದರೆ ಸ್ಯಾಂಡರ್ಸ್ ಕೊಲೆ ಗಂಭೀರ ಸ್ವರೂಪ ಪಡೆದು ಬ್ರಿಟಿಷ್ ಪೋಲಿಸರು ಭಗತ್ ಸಿಂಗ್ ಹಾಗೂ ಇತರರನ್ನು ಎಲ್ಲೆಡೆ ಹುಡುಕುತ್ತಿದ್ದ ಸಂದರ್ಭದಲ್ಲಿ ಸ್ವಾತಂತ್ರ್ಯ ಚಳುವಳಿಯ ಮತ್ತೊಬ್ಬ ಕ್ರಾಂತಿಕಾರಿ ಸಂಗಾತಿ ಭಗವತಿ ಚರಣ್ ವೋಹ್ರಾ ಹೆಂಡತಿ ದುರ್ಗಾವತಿದೇವಿ ವೋಹ್ರಾ ಅವರು ಭಗತ್ ಸಿಂಗ್ ಹಾಗೂ ರಾಜಗುರು ತಪ್ಪಿಸಿಕೊಳ್ಳಲು ಸಹಕರಿಸುತ್ತಾರೆ.

ಸುಭಾಸ ಮಾದರ

ನಾನೀಗ ಹೇಳಲು ಹೊರಟಿರುವುದು ಅಂತಹ ಒಬ್ಬ ಧೀರ ಮಹಿಳೆಯ ಕುರಿತು, ಸ್ವಾತಂತ್ರ್ಯ ಸೇನಾನಿಗಳಲ್ಲಿ ಹಲವರನ್ನು ನಿತ್ಯವೂ ನೆನಪಿಸಿತ್ತೇವೆ. ಅಂತವರ ಸಾಲಿನಲ್ಲಿ ಸಶಸ್ತ್ರ ಚಳುಚಳಿಯಲ್ಲಿ ದುರ್ಗಾವತಿದೇವಿ ಅವರು ಮೊದಲ ಸಾಲಿನಲ್ಲಿ ನಮ್ಮೆದರು ಬರುತ್ತಾರೆ. 1928 ರ ಡಿಸೆಂಬರ್ 19 ರಂದು ಭಗತ್ ಸಿಂಗ್ ಜೆಪಿ ಸ್ಯಾಂಡರ್ಸ್‌ನನ್ನು ಹತ್ಯೆ ಮಾಡಿದ ಘಟನೆ ನಮಗೆ ಚೆನ್ನಾಗಿ ತಿಳಿದಿದೆ. ಆದರೆ ನಮ್ಮಲ್ಲಿ ಹೆಚ್ಚಿನವರಿಗೆ ತಿಳಿಯದ ಸಂಗತಿಯೆಂದರೆ, ಭಗತ್ ಸಿಂಗ್ ಹಾಗೂ ಸಂಗಾತಿಗಳು ಇಡೀ ಬ್ರಿಟಿಷ್ ಪಡೆಯ ಸಂಚಿನಿಂದ ತಪ್ಪಿಸಿಕೊಳ್ಳುವಲ್ಲಿ ಹೇಗೆ ಯಶಸ್ವಿಯಾದರು. ಭಗತ್‌ಸಿಂಗ್ ಹಾಗೂ ಸಂಗಾತಿಗಳು ಸ್ಯಾಂಡರ್ಸ್ ಹತ್ಯೆಯ ಎರಡು ದಿನಗಳ ಬಳಿಕ ಲಾಹೋರ್‌ನಿಂದ ತಪ್ಪಿಸಿಕೊಳ್ಳಲು ಸಹಾಯಕ್ಕಾಗಿ ದುರ್ಗಾವತಿದೇವಿಯನ್ನು ಭೇಟಿ ಮಾಡಿದಾಗ ಈ ಕೆಲಸಕ್ಕೆ ದುರ್ಗಾವತಿದೇವಿ ತನ್ನ ಸಂಪೂರ್ಣ ಒಪ್ಪಿಗೆ ನೀಡುತ್ತಾರೆ. ಭಗತ್ ಸಿಂಗ್ ತನ್ನ ಕೂದಲನ್ನು ಚಿಕ್ಕದಾಗಿ ಕತ್ತರಿಸಿ ವಿದೇಶಿ ಉಡುಗೆಯಲ್ಲಿದ್ದರೆ, ಭಗತ್‌ಸಿಂಗ್ ಅವರಿಗೆ ಸಾಥ್ ನೀಡಲು ಆತನಿಗೆ ಪತ್ನಿಯಾಗಿ ದುರ್ಗಾದೇವಿಯು ಯಾವುದೇ ಹಿಂಜರಿಕೆಯಿಲ್ಲದೆ ಅಭಿನಯಿಸುತ್ತಾರೆ, ಅವರ ಸೇವಕರಂತೆ ರಾಜಗುರು ಅವರೊಡನೆ ಹೊರಡುತ್ತಾರೆ, ದುರ್ಗಾದೇವಿ ಮೂಲತಃ ಗುಜರಾತಿ ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದರು ಕೂಡಾ ಅವತ್ತಿನ ಸಂದರ್ಭದಲ್ಲಿ ಸಮಾಜಿಕವಾಗಿ ಸ್ಥಾಪಿತವಾದ ಸಾಮಾಜಿಕ ಶಿಷ್ಟಾಚಾರದ ರೂಢಿಗಳನ್ನು ಮುರಿದು ಹಾಕಿ ಭಗತ್‌ಸಿಂಗ್ ನೊಡನೆ ಹೆಜ್ಜೆ ಹಾಕಿರುವುದು ಮಹತ್ವದ್ದಾಗಿದೆ.

ದುರ್ಗಾವತಿ ದೇವಿ (ದುರ್ಗಾ ಭಾಭಿ) ಒಬ್ಬ ಭಾರತೀಯ ಕ್ರಾಂತಿಕಾರಿ ಮತ್ತು ಸ್ವಾತಂತ್ರ್ಯ ಹೋರಾಟಗಾರ್ತಿ. ಆಳುವ ಬ್ರಿಟಿಷರ ವಿರುದ್ಧ ಸಶಸ್ತ್ರ ಕ್ರಾಂತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ಕೆಲವೇ ಮಹಿಳಾ ಕ್ರಾಂತಿಕಾರಿಗಳಲ್ಲಿ ಅವರು ಒಬ್ಬರು, ದ್ುಗರ್ಾ ವ್ತಿ ದ್ೀವಿ ಅಲಹಾಬಾದ್‌ನಲ್ಲಿ ನೆಲೆಸಿದ್ದ ಬ್ರಾಹ್ಮಣ ದಂಪತಿಗಳ ಏಕೈಕ ಮಗಳು, 07 ಅಕ್ಟೋಬರ್ 1907 ರಲ್ಲಿ ಜನಿಸಿದ ದುರ್ಗಾವತಿದೇವಿಯು ಅವರ ತಾಯಿ ತೀರಿಕೊಂಡ ನಂತರ ತನ್ನ ಚಿಕ್ಕಮ್ಮನ ಪೋಷಣೆಯಲ್ಲಿ ಬೆಳೆದರು, ತನ್ನ 11 ನೇ ವಯಸ್ಸಿನಲ್ಲಿ, ಲಾಹೋರ್‌ನಲ್ಲಿ ವಾಸಿಸುತ್ತಿದ್ದ ಮತ್ತು ರೈಲ್ವೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀಮಂತ ದಂಪತಿಗಳ ಮಗನಾದ ಭಗವತಿ ಚರಣ್ ವೋಹ್ರಾ ಅವರೊಂದಿಗೆ ಮದುವೆಯಾಯಿತು, ಭಗವತಿಚರಣ್ ವೋಹ್ರಾ ಹಿಂದೂಸ್ತಾನ್ ಸೋಷಿಯಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ (HSRA) ಸಕ್ರಿಯ ಸದಸ್ಯರಾಗಿದ್ದವರು, ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ, ಅವರ ದೌರ್ಜನ್ಯಗಳ ವಿರುದ್ಧ 1920 ರಲ್ಲಿ ಶುರುವಾದ ಸತ್ಯಾಗ್ರಹ ಚಳುವಳಿಗೆ ಬಂದರು. ನ್ಯಾಷನಲ್ ಕಾಲೇಜಿನಲ್ಲಿ ಭಗತ್‌ಸಿಂಗ್ ಹಾಗೂ ಇತರ ಸಂಗಾತಿಗಳೊಡನೆ ಸೇರಿಕೊಂಡರು.


ಕರ್ತಾರ್ ಸಿಂಗ್ ಸರಭ

ಭಗತ್‌ಸಿಂಗ್ ಹಾಗೂ ಸಂಗಾತಿಗಳು 1926 ರಲ್ಲಿ ಗುಂಪು ನೌಜವಾನ್ ಭಾರತ್ ಸಭಾವನ್ನು ಸ್ಥಾಪಿಸಿದರು, ಭಗವತಿ ಚರಣ್ ವೋಹ್ರಾ ಇದರ ಸಕ್ರಿಯ ಕಾರ್ಯಕರ್ತರಾಗಿ ಕೆಲಸ ಮಾಡುತ್ತಿದ್ದರು, ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಯುವಕರನ್ನು ಪ್ರೋತ್ಸಾಹಿಸುವ ಮತ್ತು ಕೋಮುವಾದ ಮತ್ತು ಅಸ್ಪೃಶ್ಯತೆಯ ಸಾಮಾಜಿಕ ಅನಿಷ್್ಟಗ್ಳ್ನ್್ನ ಕೊನೆಗೊಳಿಸುವುದು ಈ ಸಂಘಟನೆಯ ಪ್ರಮುಖ ಗುರಿಯಾಗಿತ್ತು. ನೌಜವಾನ್ ಭಾರತ ಸಭಾದ ಸದಸ್ಯರು, ಯುವ ಕ್ರಾಂತಿಕಾರಿಗಳೆಲ್ಲರೂ ಲಾಹೋರ್‌ನಲ್ಲಿರುವ ಭಗವತಿ ಚರಣ್ ಅವರ ಕುಟುಂಬದ ಮನೆಗೆ ನಿರಂತರ ಬೇಟಿ ನೀಡುತ್ತಿದ್ದರು, ಆ ಬೇಟಿ ನಿರಂತರವಾಗಿ ನಡೆಯುತ್ತಿದ್ದ ಚರ್ಚೆಗಳು, ಸಂವಾದಗಳು, ಸ್ವಾತಂತ್ರ್ಯ ಚಳುವಳಿಯ ಭಾಷಣಗಳು ದುರ್ಗಾವತಿದೇವಿಯವರ ಮೇಲೆ ಪ್ರಭಾವ ಬೀರಿರಬಹುದು, ಭಗವತಿ ಚರಣ್ ವೋಹ್ರಾ ಅವರ ಹೆಂಡತಿ ದುರ್ಗಾವತಿದೇವಿಯನ್ನು ಎಲ್ಲರೂ ದುರ್ಗಾ ಭಾಭಿ ಎಂದೆ ಕರೆಯುತ್ತಿದ್ದರು, ಪೋಲಿಸ್ ವಿಚಾರಣೆಯಲ್ಲಿದ್ದ ಭಗತ್ ಸಿಂಗ್ ಮತ್ತು ಇತರ ಸಂಗಾತಿಗಳ ಕಾಪಾಡಲು ದುರ್ಗಾವತಿ ತನ್ನ ಬಳಿಯಿದ್ದ ಆಭರಣಗಳನ್ನು 3000 ರೂಪಾಯಿಗೆ ಮಾರಾಟ ಮಾಡಿ ಆ ಹಣವನ್ನು ಅವರಿಗೆ ನೀಡಿದ್ದರು, ಎಚ್‌ಎಸ್‌ಆರ್‌ಎ ಸದಸ್ಯರಾದ ವಿಮಲಪ್ರಸಾದ ಜೈನ್ ಅವರ ದೆಹಲಿಯಲ್ಲಿ ನಡೆಸಬೇಕಿದ್ದ ಹಿಮಾಲಯನ್ ಟಾಯಿಲೆಟ್ಸ್ (a smokescreen to hide the agenda of making bombs) ಕಾರ್ಖಾನೆಗೆ ತನ್ನ ಪತಿಯೊಡನೆ ಸಹಾಯಕ್ಕೆ ನಿಂತರು, 1928 ರಲ್ಲಿ ದುರ್ಗಾವತಿ ಎಚ್‌ಎಸ್‌ಆರ್‌ಎ ಪ್ರಾಥಮಿಕ ಸದಸ್ಯತ್ವ ಪಡೆದುಕೊಂಡರು. ಕ್ರಾಂತಿಕಾರಿಗಳ ಚಳುವಳಿಯ ಇತಿಹಾಸವನ್ನು ಬರೆಯುವ ಜವಾಬ್ದಾರಿಯನ್ನು ಸಂಘವು ಇವರಿಗೆ ವಹಿಸುತ್ತದೆ, The Philosophy of the Bomb, The Cult of the Bomb ಗಳಲ್ಲಿ ಕ್ರಾಂತಿಕಾರಿಗಳ ಚಳುವಳಿಯ ಕುರಿತು ಬರೆದಿದ್ದಾರೆ..


ದುರ್ಗಾವತಿದೇವಿ ಭಗವತಿ ಚರಣ್ ವೋಹ್ರಾ

ಲಕ್ನೋದಿಂದ, ಭಗತ್ ಸಿಂಗ್ ಭಗವತಿ ಚರಣ್‌ಗೆ ಟೆಲಿಗ್ರಾಮ್ ಕಳುಹಿಸಿದ್ದರು, ನಾನು "ದುರ್ಗಾವತಿ" ಯೊಂದಿಗೆ ಕಲ್ಕತ್ತಾಕ್ಕೆ ಬರುತ್ತಿರುವುದಾಗಿ ತಿಳಿಸಿರುವುದನ್ನು, ಭಗವತಿ ಚರಣ್ ಇದನ್ನು ಬಹಳ ಆಶ್ಚರ್ಯದಿಂದ ಸ್ವೀಕರಿಸಿದರು: "ಯಾರು ಈ ದುರ್ಗಾವತಿ?" ಎಂದು ಆಶ್ವರ್ಯಪಟ್ಟರು, ದುರ್ಗಾವತಿಯನ್ನು ಕಂಡೊಡನೆ ಭಗವತಿ ಚರಣ್ ವೋಹ್ರಾ ಇದುವರೆಗೂ ನಿನ್ನಲ್ಲಿನ ಕ್ರಾಂತಿಕಾರಿಯನ್ನ ನಾನು ಕಂಡಿರಲಿಲ್ಲ, ನನಗೊಬ್ಬ ಕ್ರಾಂತಿಕಾರಿ ಹೆಂಡತಿ ಸಿಕ್ಕಿದ್ದಾಳೆ ಎಂದು ಎಂದು ಬಹಳ ಸಂತೋಷಪಟ್ಟಿದ್ದರು. 28 ಮೇ 1930 ರಂದು ಭಗವತಿ ಚರಣ್ ನಿಧನರಾದರು. ರಾವಿ ಬಳಿಯ ಕಾಡಿನಲ್ಲಿ ಬಾಂಬ್ ಪರೀಕ್ಷೆ ನಡೆಸುತ್ತಿದ್ದಾಗ ಅದು ಅವರ ಕೈಯಲ್ಲಿ ಆಕಸ್ಮಿಕವಾಗಿ ಸ್ಫೋಟಗೊಂಡು ಹುತಾತ್ಮರಾದರು.

16 ನೆವಂಬರ್ 1926 ರಲ್ಲಿ ಕರ್ತಾರ ಸಿಂಗ್ ಸರಭ ಹುತಾತ್ಮ ದಿನಾಚರಣೆಯನ್ನು ನಡೆಸಿದರು, ಕರ್ತರ ಸಿಂಗ್ ಸರಭಾ ಅವರು 16 ನವೆಂಬರ್ 1915 ರಂದು ಸ್ವಾತಂತ್ರ್ಯ ಚಳುವಳಿಯ ಕಾರಣಕ್ಕೆ ಅವರನ್ನು ಗಲ್ಲಿಗೇರಿಸಲಾಗಿತ್ತು ಆಗ ಅವರ ವಯಸ್ಸು 19 ವರ್ಷ, 63 ದಿನಗಳ ಕಾಲ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ 13 ಸೆಪ್ಟೆಂಬರ್ 1929 ರಂದು ಜತಿನ್ ದಾಸ ನಿಧನರಾದರು. ದುರ್ಗಾ ವತಿ ದೇವಿ ಲಾಹೋರ್‌ನಿಂದ ಕಲ್ಕತ್ತಾಗೆ ರೈಲಿನಲ್ಲಿ ಅಂತ್ಯಕ್ರಿಯೆಯ ಮೆರವಣಿಗೆಯನ್ನು ನಡೆಸಿದರು, ಭಗತ್ ಸಿಂಗ್ 1929 ರಲ್ಲಿ ಅಸೆಂಬ್ಲಿಯಲ್ಲಿ ಬಾಂಬ್ ಎಸೆದ ಪ್ರಕರಣದಲ್ಲಿ ಶರಣಾದ ನಂತರ ದುರ್ಗಾವತಿದೇವಿ ಲಾರ್ಡ್ ಹೈಲಿಯನ್ನು ಹತ್ಯೆ ಮಾಡಲು ಪ್ರಯತ್ನಿಸಿದರು, ಆದರೆ ಅವನು ತಪ್ಪಿಸಿಕೊಂಡರೂ ಕೂಡ ಅವನ ಅನೇಕ ಸಹಚರರು ಹತರಾದರು, ಭಗವತಿ ಚರಣ್ ಮರಣಾ ನಂತರ ಪೋಲಿಸರಿಗೆ ಸರಿಯಾದ ಸುಳಿವು ಕೂಡ ಸಿಗದ ರೀತಿಯಲ್ಲಿ ದುರ್ಗಾವತಿದೇವಿ ಚಲಿಸುತ್ತಿದ್ದರು ಜುಲೈ 1929 ರಲ್ಲಿ ಅವರು ಲಾಹೋರ್‌ನಲ್ಲಿ ಕಾಣಿಸಿಕೊಂಡರು, ಭಗತ್ ಸಿಂಗ್ ಅವರ ಚಿತ್ರವಿರುವ ಬೋರ್ಡ್ ಹಿಡಿದುಕೊಂಡು "ಭಗತ್ ಸಿಂಗ್ ಮತ್ತು ದತ್ ದಿನದಂದು" ಮೆರವಣಿಗೆಯನ್ನು ನಡೆಸಿದರು, ನಂತರದಲ್ಲಿ ಜತೀಂದ್ರನಾಥ ದಾಸ್ ಅವರ ಶೋಕಾಚರಣೆಯ ಮಹಿಳಾ ಮೆರವಣಿಗೆಯಲ್ಲಿ ಕಾಣಿಸಿಕೊಂಡರು, ಅಕ್ಟೋಬರ್ 8, 1930 ರ ಮಧ್ಯರಾತ್ರಿಯಲ್ಲಿ, ದಕ್ಷಿಣ ಬಾಂಬೆಯ ಪ್ರಮುಖ ರಸ್ತೆಯಾದ ಲ್ಯಾಮಿಂಗ್ಟನ್ ರಸ್ತೆಯಲ್ಲಿ ಪೊಲೀಸ್ ಠಾಣೆಯ ಹೊರಗೆ ನಿಂತಿದ್ದ ಬ್ರಿಟಿಷ್ ಪೋಲಿಸ್ ದಂಪತಿಗಳ ಮೇಲೆ ದುರ್ಗಾದೇವಿ ಗುಂಡು ಹಾರಿಸಿದರು, ಈ ಘಟನೆಯನ್ನು ನಂತರ "ಭಯೋತ್ಪಾದಕ ದೌರ್ಜನ್ಯದಲ್ಲಿ ಮಹಿಳೆಯೊಬ್ಬರು ಪ್ರಮುಖವಾಗಿ ಕಾಣಿಸಿಕೊಂಡ ಮೊದಲ ನಿದರ್ಶನ" ಎಂದು ವಿವರಿಸಲಾಗಿದೆ ಇದನ್ನು ಅಂದಿನ ಪ್ರಮುಖ ಪತ್ರಿಕೆಯೊಂದು ದಾಖಲಿಸಿದೆ, ಅಂದು ನಡೆದ ಗುಂಡಿನ ದಾಳಿಗೊಳಗಾದವರು ಪೊಲೀಸ್ ಸಾರ್ಜೆಂಟ್ ಮತ್ತು ಅವರ ಪತ್ನಿ ಎಂದು ನಂತರದಲ್ಲಿ ತಿಳಿಯಿತು. ಗುಂಡಿನ ದಾಳಿ ಪ್ರಕರಣದಲ್ಲಿ ದುರ್ಗಾವತಿ ದೇವಿಯನ್ನು ಬಂಧಿಸಿ ಮೂರು ವರ್ಷ ಜೈಲು ಶಿಕ್ಷೆಯನ್ನು ವಿಧಿಸಲಾಯಿತು.

ಸ್ವಾತಂತ್ರ್ಯದ ನಂತರ, ದುರ್ಗಾವತಿದೇವಿ ಭಗವತಿ ಚರಣ್ ವೋಹ್ರಾ ಅವರು ಅಪರಿಚಿತ ಜೀವನವನ್ನು ನಡೆಸಿದರು, ಗಾಜಿಯಾಬಾದ್‌ನಲ್ಲಿ ಸಾಮಾನ್ಯ ನಾಗರಿಕರಾಗಿ, ಲಕ್ನೋದ ಪುರಾಣ ಕಿಲಾ ಪ್ರದೇಶದಲ್ಲಿ ಬಡ ಮಕ್ಕಳಿಗಾಗಿ ಶಾಲೆಯನ್ನು ತೆರದರು. ಅಂದಿನ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಅವರು 1956 ರಲ್ಲಿ ಶಾಲೆಗೆ ಭೇಟಿ ನೀಡಿದ್ದರು, ಇದನ್ನು ಈಗ ಸಿಟಿ ಮಾಂಟೆಸ್ಸರಿ ಶಾಲೆ ಎಂದು ಕರೆಯಲಾಗುತ್ತದೆ. ದುರ್ಗಾಬಾಭಿ ಶಹೀದ್ ಸೋಧ್ ಸಂಸ್ಥಾನಕ್ಕಾಗಿ ತನ್ನ ಭೂಮಿಯನ್ನು ದಾನ ಮಾಡಿದರು. 15 ಅಕ್ಟೋಬರ್ 1999 ರಂದು ತಮ್ಮ 92 ನೇ ವಯಸ್ಸಿನಲ್ಲಿ ನಿಧನರಾದರು.

ದುರ್ಗಾವತಿ ದೇವಿಯೆಂದರೆ ಬ್ರಿಟಿಷ ಪೋಲಿಸರಿಗೂ ಚಳುವಳಿಯ ಸಂದರ್ಭದಲ್ಲಿ ಭಯ ಹುಟ್ಟು ಹಾಕಿದ ಹೆಸರಾಗಿತ್ತು, ಬ್ರಿಟಿಷರು ದುರ್ಗಾವತಿಯನ್ನು "ಭಾರತದ ಅಗ್ನಿ" ಎಂದು ಕರೆದರು. ಬ್ರಿಟಿಷರ ವಿರುದ್ಧ ಕೆಲವೇ ಕೆಲವು ಮಹಿಳೆಯರು ತೋರಿಸಿದ ತ್ಯಾಗ ಮತ್ತು ನಿರ್ಭಯತೆಯ ಫ್ಲ್ಯಾಷ್‌ಬ್ಯಾಕ್‌ನಲ್ಲಿ ಕಾಮ್ರೇಡ್ ದುರ್ಗಾವತಿ ದಂತಕಥೆಯಾಗಿ ಉಳಿದಿದ್ದಾರೆ. ಈ ಮಹಾನ್ ಸ್ವಾತಂತ್ರ್ಯ ಹೋರಾಟಗಾರ್ತಿ ಮತ್ತು ನಿರ್ಭೀತ ಮಹಿಳೆ ಯುವ ಪೀಳಿಗೆಗೆ ಸ್ಫೂರ್ತಿ ನೀಡಲು ಜೀವನಚರಿತ್ರೆಯು ವಿದ್ಯಾರ್ಥಿಗಳಿಗೆ ಮುಟ್ಟಬೇಕಿದೆ.



ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅವರಿಗೆ ಅಂತಿಮ ನಮನ

'ನೀವು ಸಾಯಲಿಲ್ಲ, ನಮ್ಮೊಳಗೆ ಬದುಕುತ್ತೀರಿ' ಎಂಬ ಘೋಷಣೆಯೊಂದಿಗೆ ಲಕ್ಷಾಂತರ ಜನರು ಅಗಲಿದ ನಾಯಕ ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಕಳೆದ ಮೂರು ವರ್ಷಗಳಿಂದ ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕೋಡಿಯೇರಿ ಅವರು ಅಕ್ಟೋಬರ್ ಒಂದರಂದು ಚೆನ್ನೈ ನ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು.

ಅಕ್ಟೋಬರ್ 3 ರಂದು ಮಧ್ಯಾಹ್ನ 3.30 ಕ್ಕೆ ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅವರ ಪಾರ್ಥಿವ ಶರೀರವನ್ನು ಸಿಪಿಐ(ಎಂ) ಕಣ್ಣೂರು ಜಿಲ್ಲಾ ಸಮಿತಿ ಕಚೇರಿಯಿಂದ ಪಯ್ಯಂಬಲಂ ಬೀಚ್‌ಗೆ ಮೆರವಣಿಗೆಯಲ್ಲಿ ಕೊಂಡೊಯ್ಯುವಾಗ ಸಾವಿರಾರು ಜನರು ಕಣ್ಣೂರಿನ ಬೀದಿಗಳ ಎರಡೂ ಬದಿಗಳಲ್ಲಿ ಸಾಲುಗಟ್ಟಿ ನಿಂತಿದ್ದರು. ಪಿಣರಾಯಿ ವಿಜಯನ್, ಇತರ ಪಾಲಿಟ್ ಬ್ಯೂರೋ ಸದಸ್ಯರು ಮತ್ತು ಹಿರಿಯ ನಾಯಕರ ನೇತೃತ್ವದಲ್ಲಿ ನಡೆದ ಮೂರು ಕಿಲೋಮೀಟರ್ ಉದ್ದದ ಅಂತಿಮಯಾತ್ರೆಯಲ್ಲಿ ಸಾವಿರಾರು ಜನರು ಸೇರಿದ್ದರು.

ಮೆರವಣಿಗೆಯು ಪಯ್ಯಂಬಲಂ ಬೀಚ್ ತಲುಪಿದಾಗ, ಕೊಡಿಯೇರಿ ಬಾಲಕೃಷ್ಣನ್ ಅವರ ಪಾರ್ಥಿವ ಶರೀರವನ್ನು ಸೀತಾರಾಂ ಯೆಚೂರಿ, ಪಿಣರಾಯಿ ವಿಜಯನ್ ಮತ್ತು ಇತರ ಪೊಲಿಟ್ ಬ್ಯೂರೋ ಮತ್ತು ಕೇಂದ್ರ ಸಮಿತಿ ಸದಸ್ಯರು ಚಿತಾಗಾರಕ್ಕೆ ಕೊಂಡೊಯ್ದರು.

ಪಯ್ಯಂಬಲಂ ಬೀಚ್ ನ ಆ ಸ್ಥಳದಲ್ಲಿ, ಇ ಕೆ ನಾಯನಾರ್, ಮಾಜಿ ಮುಖ್ಯಮಂತ್ರಿ ಚಡಯನ್ ಗೋವಿಂದನ್, ಮಾಜಿ ರಾಜ್ಯ ಕಾರ್ಯದರ್ಶಿ ಮತ್ತು ಹುತಾತ್ಮರಾದ ಅಝೀಕ್ಕೊಡನ್ ರಾಘವನ್ ಅವರಂತಹ ಮಹಾನ್ ಕಮ್ಯುನಿಸ್ಟ್ ನಾಯಕರನ್ನು ಅಂತ್ಯಸಂಸ್ಕಾರ ಮಾಡಲಾಗಿದೆ. ಮತ್ತು ಅಲ್ಲಿ ಅವರ ಸ್ಮಾರಕ ಸ್ತಂಭಗಳು ಅಸ್ತಿತ್ವದಲ್ಲಿವೆ. ಕೊಡಿಯೇರಿ ಅವರ ಅಂತ್ಯಕ್ರಿಯೆಯು ಇ ಕೆ ನಾಯನಾರ್ ಮತ್ತು ಚಡಯನ್ ಗೋವಿಂದನ್ ಅವರ ಸ್ಮಾರಕಗಳ ನಡುವೆ ನಡೆಯಿತು.

ಅಂತ್ಯಸಂಸ್ಕಾರದ ನಂತರ ಸರ್ವಪಕ್ಷಗಳ ಮುಖಂಡರಿಂದ ಸಂತಾಪ ಸೂಚಕ ಸಭೆ ನಡೆಯಿತು. ಸಿಪಿಐ(ಎಂ) ಪರವಾಗಿ ಸೀತಾರಾಮ್ ಯೆಚೂರಿ, ಪಿಣರಾಯಿ ವಿಜಯನ್, ಪ್ರಕಾಶ್ ಕಾರಟ್, ಜಿ ರಾಮಕೃಷ್ಣನ್ ಮತ್ತು ಎಸ್ ರಾಮಚಂದ್ರನ್ ಪಿಳ್ಳೈ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಎಂ ವಿ ಗೋವಿಂದನ್ ಮಾಸ್ತರ್ ಸಭೆ ನಡೆಸಿಕೊಟ್ಟರು.

ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅವರ ಪಾರ್ಥಿವ ಶರೀರವನ್ನು ನೋಡಲು ಉದ್ದನೆಯ ಸರತಿ ಸಾಲಿನಲ್ಲಿ ನಿಂತಿದ್ದ ಮತ್ತು ವಿವಿಧ ಹಂತಗಳಲ್ಲಿ ಜಮಾಯಿಸಿದ ಲಕ್ಷಾಂತರ ಜನರು ಕಣ್ಣೀರು ಸುರಿಸಿದರು. ಅವರೆಲ್ಲರ ದುಃಖದ ಕಟ್ಟೆ ಒಡೆದಿತ್ತು.

ಅಕ್ಟೋಬರ್ 2 ರಂದು ಕೊಡಿಯೇರಿ ಬಾಲಕೃಷ್ಣನ್ ಅವರ ಪಾರ್ಥಿವ ಶರೀರ ಚೆನ್ನೈನಿಂದ ಕಣ್ಣೂರು ವಿಮಾನ ನಿಲ್ದಾಣಕ್ಕೆ ಆಗಮಿಸಿತ್ತು. ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಡಲಾಗಿದ್ದ ಮಟ್ಟನ್ನೂರಿನಿಂದ ತಲಶ್ಶೇರಿ ಪುರಭವನದವರೆಗೆ ರಸ್ತೆಯ ಇಕ್ಕೆಲಗಳಲ್ಲಿ ಸಾವಿರಾರು ಜನರು ಜಮಾಯಿಸಿದ್ದರು. ತಲಶ್ಶೇರಿ ಕೊಡಿಯೇರಿಯವರ ತವರು ಪಟ್ಟಣವಾಗಿತ್ತು ಮತ್ತು ಅವರ ವಿಧಾನಸಭಾ ಕ್ಷೇತ್ರವೂ ಆಗಿತ್ತು. ಪಾರ್ಥಿವ ಶರೀರವನ್ನು ವೀಕ್ಷಿಸಲು ಎಲ್ಲ ವರ್ಗದ ಜನರು ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತಿದ್ದರು. ಶ್ರದ್ಧಾಂಜಲಿ ಸಲ್ಲಿಸಿದವರಲ್ಲಿ ರಾಜಕೀಯ ಮುಖಂಡರು, ಸಾಂಸ್ಕೃತಿಕ ಗಣ್ಯರು, ಧಾರ್ಮಿಕ ಮುಖಂಡರು ಇದ್ದರು. ಇದು ಅಭೂತಪೂರ್ವ ದೃಶ್ಯವಾಗಿದ್ದು, ರಾಜ್ಯದ ಎಲ್ಲಾ ಟಿವಿ ಚಾನೆಲ್‌ಗಳು ನೇರ ಪ್ರಸಾರವನ್ನು ತೋರಿಸಿದವು.

ನಂತರ ಪಾರ್ಥಿವ ಶರೀರವನ್ನು ಮಧ್ಯರಾತ್ರಿಯ ಹೊತ್ತಿಗೆ ಮಡಪ್ಪೀಡಿಕಾದಲ್ಲಿರುವ ಅವರ ಪೂರ್ವಿಕರ ಮನೆಗೆ ಕೊಂಡೊಯ್ಯಲಾಯಿತು. ಅಲ್ಲಿಯೂ ಅಪಾರ ಸಂಖ್ಯೆಯಲ್ಲಿ ಜನರು ತೆರಳಿ ಅಂತಿಮ ನಮನ ಸಲ್ಲಿಸಿದರು.

ಪಾರ್ಥಿವ ಶರೀರವನ್ನು ಅಕ್ಟೋಬರ್ 3 ರಂದು ಬೆಳಿಗ್ಗೆ 11 ಗಂಟೆಗೆ ಸಿಪಿಐ(ಎಂ) ಕಣ್ಣೂರು ಜಿಲ್ಲಾ ಸಮಿತಿ ಕಛೇರಿಯಾದ ಅಝೀಕ್ಕೊಡನ್ ಸ್ಮಾರಕ ಮಂದಿರಕ್ಕೆ ಕೊಂಡೊಯ್ಯಲಾಯಿತು. ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಮತ್ತು ಪಾಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಅಂತಿಮ ನಮನ ಸಲ್ಲಿಸಲು ಆಗಮಿಸಿದರು. ಇಲ್ಲಿಯೂ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ವಿರೋಧ ಪಕ್ಷದ ನಾಯಕ ವಿ ಡಿ ಸತೀಶನ್, ಸಚಿವರು ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಧಾರ್ಮಿಕ ಗಣ್ಯರು ಶ್ರದ್ಧಾಂಜಲಿ ಸಲ್ಲಿಸಲು ಆಗಮಿಸಿದ್ದರು.

'ದುಃಖಿಸುವುದಕ್ಕಿಂತ ಅದನ್ನು ಎದುರಿಸುವುದು ಉತ್ತಮ' ತಮ್ಮ ಅನಾರೋಗ್ಯದ ಬಗ್ಗೆ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಕೋಡಿಯೇರಿ ಅವರ ದೃಢವಾದ ಉತ್ತರ ಇದು. ಸವಾಲುಗಳನ್ನು ನಿಸ್ಸಂದಿಗ್ಧವಾಗಿ ಎದುರಿಸುವುದು ಅವರ ವಿಧಾನವಾಗಿತ್ತು. ಇದು ರಾಜಕೀಯ ಸವಾಲುಗಳು ಮತ್ತು ಅನಾರೋಗ್ಯ ಎರಡನ್ನೂ ಉಕ್ಕಿನ ಸಂಕಲ್ಪದಿಂದ ಹೋರಾಡಿದ ಕೋಡಿಯೇರಿ ಬಾಲಕೃಷ್ಣನ್ ಅವರ ಜೀವನ" ತಮ್ಮ ಒಡನಾಡಿಯ ಕುರಿತು ಕಾಮ್ರೇಡ್ ಪಿಣರಾಯಿ ವಿಜಯನ್ ಅವರು ಹೇಳಿದ ಮಾತಿದು.

'ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅವರು ನಮ್ಮನ್ನು ಅಗಲಿದ್ದಾರೆ ಎಂಬುದನ್ನು ಯೋಚಿಸಲಾಗದು. ಇದು ನನಗೆ ಆಳವಾದ ನೋವನ್ನು ಉಂಟುಮಾಡುತ್ತದೆ. ಅವರು ಕೇವಲ ಸಹೋದರನಂತೆ ಇರಲಿಲ್ಲ, ನಮ್ಮ ನಡುವೆ ನಿಜವಾದ ಸಹೋದರತ್ವವಿತ್ತು. ನಾವಿಬ್ಬರೂ ಒಂದೇ ದಾರಿಯಲ್ಲಿ ಸಾಗಲು ಆರಿಸಿಕೊಂಡೆವು' ಹೀಗೆ ತಮ್ಮ ದುಃಖವನ್ನು ತೋಡಿಕೊಂಡಿರುವ ಪಿಣರಾಯಿ ವಿಜಯನ್ ಅವರು "ಕೋಡಿಯೇರಿಯವರು ತೀವ್ರ ಅನಾರೋಗ್ಯದ ಸಂದರ್ಭದಲ್ಲೂ ಪಕ್ಷದ ಬಗ್ಗೆ ಅವರ ಕಾಳಜಿ ಎಲ್ಲಕ್ಕಿಂತ ಹೆಚ್ಚಾಗಿತ್ತು. ತಮ್ಮ ಕೊನೆಯ ದಿನಗಳವರೆಗೂ ಪಕ್ಷದ ವಿರುದ್ಧದ ದಾಳಿಯನ್ನು ಹೇಗೆ ನಿಭಾಯಿಸಬೇಕು ಎಂದು ಯೋಚಿಸಿದರು. ಪಕ್ಷದ ಪೂರ್ಣ ಸಮಯದ ಜವಾಬ್ದಾರಿಯನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ಅವರು ಭಾವಿಸಿದಾಗ ಸ್ವಯಂಪ್ರೇರಣೆಯಿಂದ ಪಕ್ಷದ ಕಾರ್ಯದರ್ಶಿ ಸ್ಥಾನದಿಂದ ಕೆಳಗಿಳಿಯುವ ನಿರ್ಧಾರ ತೆಗೆದುಕೊಂಡರು" ಎಂದಿದ್ದಾರೆ. (ಪಿಣರಾಯಿಯವರ ಶ್ರದ್ಧಾಂಜಲಿ ಬರಹ ಪ್ರತ್ಯೇಕವಿದೆ.)

ಸೀತಾರಾಂ ಯೆಚೂರಿ:

"ಕಾಮ್ರೇಡ್ ಕೊಡಿಯೇರಿಯವರ ಕೆಲಸ ಮತ್ತು ಜೀವನದ ವಿವಿಧ ವೈಶಿಷ್ಟ್ಯಗಳಲ್ಲಿ ಮೂರು ಮುಖ್ಯವಾದವುಗಳಿವೆ. ಇವುಗಳನ್ನು ಈಗಿನ ಪೀಳಿಗೆಯ ಕಮ್ಯುನಿಸ್ಟರು ಕೇರಳದಲ್ಲಿ ಮಾತ್ರವಲ್ಲದೆ ದೇಶದಾದ್ಯಂತ ಅನುಕರಿಸಬೇಕಾಗಿದೆ" ಎಂದು ಹೇಳಿರುವ ಕಾಮ್ರೇಡ್ ಸೀತಾರಾಂ ಯೆಚೂರಿ ಅವರು ವಿವರಿಸಿದ್ದಾರೆ. (ಈ ಬಗ್ಗೆ ಪ್ರತ್ಯೇಕ ಬರಹವಿದೆ)

ಪ್ರಕಾಶ್ ಕಾರಟ್:

ಕೊಡಿಯೇರಿ ಅವರು ಬಲವಾದ ಸೈದ್ಧಾಂತಿಕ ನಂಬಿಕೆಯ ವ್ಯಕ್ತಿ ಮತ್ತು ಸಮರ್ಪಿತ ಕಮ್ಯುನಿಸ್ಟ್ ಆಗಿದ್ದರು ಎಂದಿರುವ ಕಾಮ್ರೇಡ್ ಪ್ರಕಾಶ್ ಕಾರಟ್ ಅವರು "ಕೊಡಿಯೇರಿ ಅವರು ರಾಜಕೀಯ ಚಾಣಾಕ್ಷತೆ ಮತ್ತು ಸಂಘಟನಾ ಕೌಶಲ್ಯ ಎರಡನ್ನೂ ಸಂಯೋಜಿಸಲು ಸಮರ್ಥರಾಗಿದ್ದರು. ಪಕ್ಷವು ರಾಜಕೀಯ ನಿಲುವು ಅಥವಾ ವಿಧಾನವನ್ನು ರೂಪಿಸಿದ ನಂತರ, ಆ ರಾಜಕೀಯ ನಿಲುವನ್ನು ಜನರಿಗೆ ವ್ಯಕ್ತಪಡಿಸುವಲ್ಲಿ ಕೊಡಿಯೇರಿ ಅತ್ಯಂತ ಪರಿಣತರಾಗಿದ್ದರು. ಅವರು ತಮ್ಮ ಸಾರ್ವಜನಿಕ ಭಾಷಣಗಳ ಮೂಲಕ ಪಕ್ಷದ ನೀತಿಗಳ ಅತ್ಯಂತ ಪರಿಣಾಮಕಾರಿ ಪ್ರಚಾರಕರಾಗಿದ್ದರು. ಸಾರ್ವಜನಿಕ ಭಾಷಣಕಾರರಾಗಿ ಈ ಕೌಶಲ್ಯ ಮತ್ತು ಸಾಮಾನ್ಯ ಜನರೊಂದಿಗೆ ಅವರ ಬಾಂಧವ್ಯವೇ ಅವರನ್ನು ಮಾಸ್ ಲೀಡರ್ ಆಗಿ ರೂಪಿಸಿತು" ಎಂದಿದ್ದಾರೆ.



"ಕೊಡಿಯೇರಿ ಅವರು 1964 ರಲ್ಲಿ ಸಿಪಿಐ(ಎಂ) ರಚನೆಯಾದ ನಂತರ ಪಕ್ಷಕ್ಕೆ ಸೇರಿದ ಮೊದಲ ಪೀಳಿಗೆಗೆ ಸೇರಿದವರು. ಈ ತಲೆಮಾರಿನ ನಾಯಕರನ್ನು ಕಣ್ಣೂರಿನಲ್ಲಿ ಪ್ರಬಲವಾದ ಪಕ್ಷದ ಸಂಘಟನೆಯ ಅಸ್ತಿತ್ವ ಮತ್ತು ದಶಕಗಳ ಹೋರಾಟಗಳು ಮತ್ತು ಚಳುವಳಿಗಳ ಮೂಲಕ ನಿರ್ಮಿಸಿದ ಸಾಮೂಹಿಕ ನೆಲೆಯಿಂದ ರೂಪಿಸಲಾಯಿತು.

ಅದೇ ಸಮಯದಲ್ಲಿ, ಅವರ ಸಂಘಟನಾ ಸಾಮರ್ಥ್ಯವೂ ಗಮನಾರ್ಹವಾಗಿದೆ. ರಾಜ್ಯ ಕಾರ್ಯದರ್ಶಿಯಾಗಿ, ಕೊಡಿಯೇರಿಯವರು ಪಕ್ಷದ ಮುಂದಿರುವ ಸಮಸ್ಯೆಗಳು ಮತ್ತು ಅವುಗಳನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ತೀಕ್ಷ್ಣ ಮತ್ತು ಸಮತೋಲಿತ ರೀತಿಯಲ್ಲಿ ಪ್ರಸ್ತುತಪಡಿಸುವಲ್ಲಿ ಉನ್ನತ ಮಟ್ಟವನ್ನು ಹೊಂದಿದ್ದರು. ವೈವಿಧ್ಯಮಯ ದೃಷ್ಟಿಕೋನಗಳನ್ನು ಆಲಿಸುವ ಮತ್ತು ಸರಿಯಾದ ತೀರ್ಮಾನಗಳಿಗೆ ಬರುವ ಅಪರೂಪದ ಸಾಮರ್ಥ್ಯವನ್ನು ಅವರು ಹೊಂದಿದ್ದರು. ಅವರ ರಾಜಕೀಯ–ಸಾಂಸ್ಥಿಕ ಸಾಮರ್ಥ್ಯಗಳಿಂದ ಕೇರಳದ ಪಕ್ಷವು ಅಪಾರವಾಗಿ ಪ್ರಯೋಜನ ಪಡೆಯಿತು.

ಕೊಡಿಯೇರಿಯವರು ತಮ್ಮ ರಾಜಕೀಯ ಮತ್ತು ಸೈದ್ಧಾಂತಿಕ ನಂಬಿಕೆಗಳಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಆದರೆ ಅವರು ರಾಜಕೀಯ ವಿರೋಧಿಗಳನ್ನು ಸೌಜನ್ಯದಿಂದ ನಡೆಸಿಕೊಂಡರು ಮತ್ತು ಅವರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಹೊಂದಿದ್ದರು, ಇದು ಅವರಿಗೆ ರಾಜಕೀಯ ನಾಯಕರ ಗೌರವವನ್ನು ಗಳಿಸಿಕೊಟ್ಟಿತು.

1974ರ ಆರಂಭದಿಂದಲೂ ಕೋಲ್ಕತ್ತಾದಲ್ಲಿ ನಡೆದ ಎಸ್‌ಎಫ್‌ಐನ ಎರಡನೇ ಅಖಿಲ ಭಾರತ ಸಮ್ಮೇಳನದಲ್ಲಿ ನಾವಿಬ್ಬರೂ ಜಂಟಿ ಕಾರ್ಯದರ್ಶಿಗಳಾದಾಗಿನಿಂದ ನನಗೆ ಕೊಡಿಯೇರಿ ಪರಿಚಯವಾಗಿತ್ತು. ನಮ್ಮ ಸುದೀರ್ಘ ಒಡನಾಟವು ಪಾಲಿಟ್ ಬ್ಯೂರೋದಲ್ಲಿ ಒಟ್ಟಿಗೆ ಕೆಲಸ ಮಾಡುವಲ್ಲಿ ಪರಾಕಾಷ್ಠೆಯಾಯಿತು. ಅವರು ನಾಯಕತ್ವದಲ್ಲಿ ಹೆಚ್ಚು ಕಾಲ ಮುಂದುವರಿಯುತ್ತಾರೆ ಎಂದು ನಾವೆಲ್ಲರೂ ನಿರೀಕ್ಷಿಸಿದ್ದೆವು. ಆದರೆ ಅವರು ಅಕಾಲಿಕವಾಗಿ ನಮ್ಮನ್ನು ಅಗಲಿದ್ದಾರೆ. ಅವರ ಅನುಪಸ್ಥಿತಿಯು ಇಡೀ ಪಕ್ಷಕ್ಕೆ ದೊಡ್ಡ ನಷ್ಟವಾಗಿದೆ." ಎಂದು ಕಾರಟ್ ಅವರು ಹೇಳಿದ್ದಾರೆ.

ಎಂ ಎ ಬೇಬಿ:


"ನಾಯಕರಾಗಿ ಕೊಡಿಯೇರಿಯವರ ಅತ್ಯುತ್ತಮ ಗುಣವೆಂದರೆ ಅವರು ಅತ್ಯಂತ ಕಷ್ಟಕರ ಸಂದರ್ಭಗಳಲ್ಲಿ ಪ್ರದರ್ಶಿಸಿದ ವೈಯಕ್ತಿಕ ಧೈರ್ಯ. ಅವರು ಎಂದಿಗೂ ತನ್ನ ಶಾಂತತೆಯನ್ನು ಕಳೆದುಕೊಳ್ಳುವುದಿಲ್ಲ ಮತ್ತು ಯಾವುದೇ ಉದ್ವೇಗಕ್ಕೆ ಒಳಗಾಗದೆ ಬಿಕ್ಕಟ್ಟು ಬಗೆಹರಿಸುವ ಪ್ರಯತ್ನ ಮಾಡುತ್ತಿದ್ದರು. ಅವರು ಶಾಂತವಾಗಿ ಸಾಧಕ–ಬಾಧಕಗಳನ್ನು ಆಳವಾಗಿ ಚರ್ಚಿಸುತ್ತಿದ್ದರು ಮತ್ತು ಬಿಕ್ಕಟ್ಟನ್ನು ಪರಿಹರಿಸಲು ಒಮ್ಮತದ ಪರಿಹಾರಕ್ಕೆ ಬರುತ್ತಿದ್ದರು. ಬಿಕ್ಕಟ್ಟು ನಿರ್ವಹಣೆಯಲ್ಲಿನ ಕೌಶಲ್ಯಕ್ಕಾಗಿ ಕೊಡಿಯೇರಿ ಪಕ್ಷದೊಳಗೆ ಚಿರಪರಿಚಿತರಾಗಿದ್ದರು"

ಎಂದಿರುವ ಕಾಮ್ರೇಡ್ ಎಂ ಎ ಬೇಬಿ ಅವರು, ಕೋಡಿಯೇರಿ ಜೊತೆಗಿನ ತಮ್ಮ ದೀರ್ಘ ಕಾಲದ ಒಡನಾಟವನ್ನು ಹಂಚಿಕೊಂಡಿದ್ದಾರೆ.

"ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ನನಗೆ ಸಹೋದ್ಯೋಗಿಗಿಂತ ಹೆಚ್ಚು. ನನಗಿಂತ ಎರಡು ವರ್ಷ ಸೀನಿಯರ್ ಆಗಿದ್ದ ಅವರು ಐದು ದಶಕಗಳ ಕಾಲದ ಸಂಬಂಧದಲ್ಲಿ ಸಹೋದರರಂತೆ ನನಗೆ ಹತ್ತಿರವಾಗಿದ್ದರು. 1972–73ರಲ್ಲಿ ನಾವು ರಾಜ್ಯ ಮಟ್ಟದಲ್ಲಿ ಎಸ್‌ಎಫ್‌ಐನ ಸಹೋದ್ಯೋಗಿಗಳು ಮತ್ತು ಪದಾಧಿಕಾರಿಗಳಾಗಿ ಒಟ್ಟಿಗೆ ಕೆಲಸ ಮಾಡಿದ್ದೇವೆ. ನಾವು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಏಕಕಾಲದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಿದ್ದ ಅವರ ಅಂತ್ಯವು ಈಗ ಬಂದಿದೆ"

"ಕೊಡಿಯೇರಿ ಅವರು ಸಂಘಟನಾತ್ಮಕವಾಗಿ ಮತ್ತು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದರು. ಈ ವಿಷಯದಲ್ಲಿ ಅವರ ಕೌಶಲ್ಯವು ಅವರ ವಿದ್ಯಾರ್ಥಿ ದಿನಗಳಿಂದಲೂ ಸಾಕಷ್ಟು ಸ್ಪಷ್ಟವಾಗಿದೆ. ಫೆಬ್ರವರಿ 1974 ರಲ್ಲಿ ಎಸ್‌ಎಫ್‌ಐನ ಎರಡನೇ

ಪುಟ 12 ಕ್ಕೆ



ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್: ಒಬ್ಬ ಅಮೂಲ್ಯ ನೇತಾರ, ಒಬ್ಬ ಸೋದರ

ಅವರ ರಾಜಕೀಯ ಜೀವನವು ಧೈರ್ಯ, ಮೃದುತ್ವ ಮತ್ತು ಸೈದ್ಧಾಂತಿಕ ಸ್ಪಷ್ಟತೆಯ ಸಂಗಮವಾಗಿತ್ತು. ಎಂದೂ ರಾಜಿಗಿಳಿಯದ ಸೈದ್ಧಾಂತಿಕ ನಿಲುವು, ಪಕ್ಷಕ್ಕೆ ಅಚಲವಾದ ನಿಷ್ಠೆ, ಸದಾ ಸಾಮೂಹಿಕ ಕಾರ್ಯನಿರ್ವಹಣೆಗೆ ಬದ್ಧತೆ ಮತ್ತು ಪಕ್ಷದ ಸಂಘಟನಾ ವ್ಯವಸ್ಥೆಯನ್ನು ಸದಾ ಸಜ್ಜಾಗಿರುವಂತೆ ಇಟ್ಟುಕೊಳ್ಳುವುದು ಇವೆಲ್ಲವೂ ಕೊಡಿಯೇರಿಯವರಿಂದ ಮುಂದಿನ ತಲೆಮಾರುಗಳವರು ಕಲಿಯಬೇಕಾದ ಎದ್ದುಕಾಣುವ ಗುಣಗಳು.

ಪಿಣರಾಯಿ ವಿಜಯನ್

ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ನಮ್ಮನ್ನು ಅಗಲಿದ್ದಾರೆಂದು ಯೋಚಿಸಲು ಸಾಧ್ಯವಿಲ್ಲ. ಇದು ಆಳವಾದ ನೋವನ್ನು ಉಂಟುಮಾಡುತ್ತದೆ. ಅವರು ಕೇವಲ ಸೋದರನಾಗಿರಲಿಲ್ಲ, ನಮ್ಮ ನಡುವೆ ನಿಜವಾದ ಸೋದರತ್ವವಿತ್ತು. ನಾವಿಬ್ಬರೂ ಒಂದೇ ದಾರಿಯನ್ನು ಆರಿಸಿಕೊಂಡೆವು.

ತೀವ್ರ ಅನಾರೋಗ್ಯದ ಸಂದರ್ಭದಲ್ಲೂ ಪಕ್ಷದ ಬಗ್ಗೆ ಅವರ ಕಾಳಜಿ ಎಲ್ಲಕ್ಕಿಂತ ಹೆಚ್ಚಾಗಿತ್ತು. ತಮ್ಮ ಕೊನೆಯ ದಿನಗಳವರೆಗೂ ಪಕ್ಷದ ವಿರುದ್ಧದ ದಾಳಿಗಳನ್ನು ಹೇಗೆ ನಿಭಾಯಿಸಬೇಕು ಎಂದು ಯೋಚಿಸಿದರು. ಪಕ್ಷದ ಪೂರ್ಣ ಸಮಯದ ಜವಾಬ್ದಾರಿಯನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ಅವರಿಗೆ ಅನಿಸಿದಾಗ ಸ್ವಯಂಪ್ರೇರಣೆಯಿಂದ ಪಕ್ಷದ ಕಾರ್ಯದರ್ಶಿ ಸ್ಥಾನದಿಂದ ಕೆಳಗಿಳಿಯುವ ತನ್ನ ನಿರ್ಧಾರವನ್ನು ಅವರು ಒತ್ತಾಯ ಪೂರ್ವಕ ಹೇಳಿದರು.

ಕಾಮ್ರೇಡ್ ಕೊಡಿಯೇರಿ ಅನಾರೋಗ್ಯವು ಅವರನ್ನು ನಿತ್ರಾಣಗೊಳಿಸಲಾರಂಭಿಸಿದಾಗಲೂ ಅವರು ಪಕ್ಷದ ಸಭೆಗಳಿಗೆ ಹಾಜರಾಗಿದ್ದರು ಮತ್ತು ಸಂಘಟನಾ ಮತ್ತು ಧೋರಣೆಯ ವಿಷಯಗಳಲ್ಲಿ ಮುಂಚೂಣಿಯಲ್ಲಿ ನಿಂತೇ ಮುನ್ನಡೆಸಿದರು. ಅಪಾರವಾದ ದೈಹಿಕ ನೋವಿನ ನಡುವೆಯೂ ಪಕ್ಷಕ್ಕೆ ತಮ್ಮನ್ನು ಅರ್ಪಿಸಿಕೊಂಡರು. ರೋಗದ ವಿರುದ್ಧ ಹೋರಾಡುವಲ್ಲಿ ಅವರು ಅಸಾಧಾರಣ ಧೈರ್ಯವನ್ನು ತೋರಿಸಿದರು. ಅವರ ಅನಾರೋಗ್ಯದ ಬಗ್ಗೆ ಪತ್ರಿಕೆಗಳಿಂದ ಕೇಳಿದ ಪ್ರಶ್ನೆಗಳಿಗೆ ಅವರು 'ದುಃಖಿಸುವುದಕ್ಕಿಂತ ಅದನ್ನು ಎದುರಿಸುತ್ತೇನೆ' ಎಂದು ದೃಢವಾಗಿ ಹೇಳಿದರು. ಸವಾಲುಗಳನ್ನು ನಿಸ್ಸಂದಿಗ್ಧವಾಗಿ ಎದುರಿಸುವುದು ಅವರ ವಿಧಾನವಾಗಿತ್ತು. ಉಕ್ಕಿನ ದೃಢತೆಯಿಂದ ರಾಜಕೀಯ ಸವಾಲುಗಳನ್ನೂ ಮತ್ತು ಕಾಯಿಲೆಯನ್ನೂ ಎದುರಿಸಿ ಹೋರಾಡಿದ ಬದುಕು ಅವರದ್ದು.

ಬಾಲಕೃಷ್ಣನ್ ಅವರು ವಿದ್ಯಾರ್ಥಿಗಳನ್ನು ಸಂಘಟಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಪ್ರೌಢಶಾಲಾ ದಿನಗಳಲ್ಲಿಯೂ ಸ್ಥಳೀಯ ಮಟ್ಟದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅವರ ರಾಜಕೀಯ ಜೀವನವು ಧೈರ್ಯ, ಮೃದುತ್ವ ಮತ್ತು ಸೈದ್ಧಾಂತಿಕ ಸ್ಪಷ್ಟತೆಯ ಸಂಗಮವಾಗಿತ್ತು. ತಲಶ್ಶೇರಿ ಗಲಭೆಗಳ ಸಂದರ್ಭದಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡಿದ ಕಮ್ಯುನಿಸ್ಟರಲ್ಲಿ ಇವರೂ ಒಬ್ಬರು.

ಕೊಡಿಯೇರಿ ಬಾಲಕೃಷ್ಣನ್ 1973 ರಲ್ಲಿ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿಯಾದರು. ಇದು ಎಸ್‌ಎಫ್‌ಐ ತನ್ನ ಇತಿಹಾಸದಲ್ಲೇ ಅತ್ಯಂತ ಕೆಟ್ಟ ಕಿರುಕುಳ ಮತ್ತು ಸಂಕಷ್ಟಗಳನ್ನು ಎದುರಿಸಿದ ಅವಧಿಯಾಗಿತ್ತು. ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಆಳವಾಗಿ ಮೊಟಕುಗೊಂಡ ಪ್ರತಿಕೂಲ ಪರಿಸ್ಥಿತಿಯಲಿಯೂ ಗ್ರಾಮೀಣ ಭಾಗದಲ್ಲೂ ಎಸ್‌ಎಫ್‌ಐ ಯನ್ನು ಸಕ್ರಿಯ ಸಂಘಟನಾ ಶಕ್ತಿಯಾಗಿ ಪರಿವರ್ತಿಸಲು ಕೊಡಿಯೇರಿ ಅವರ ನಾಯಕತ್ವಕ್ಕೆ ಸಾಧ್ಯವಾಯಿತು.

ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಪ್ರಗತಿಶೀಲ ಕ್ರಾಂತಿಕಾರಿ ಚಳುವಳಿಗೆ ವಿದ್ಯಾರ್ಥಿ ಚಳವಳಿಯ ಅಮೂಲ್ಯ ಕೊಡುಗೆ. ಅವರು ಪಕ್ಷದ ವಿಷಯಗಳಲ್ಲಿ ನಿಷ್ಠುರತೆ ಮತ್ತು ಸೈದ್ಧಾಂತಿಕ ಸ್ಪಷ್ಟತೆಯ ಮಿಶ್ರಣವಾಗಿದ್ದರು. ಅವರ ವಿದ್ಯಾರ್ಥಿ ಸಂಘಟನೆಯ ದಿನಗಳಲ್ಲಿಯೂ ಸಹ, ಅವರು ಸಂಘಟನಾ ವಿಷಯಗಳಾಗಲಿ ಅಥವಾ ಸೈದ್ಧಾಂತಿಕ ವಿಷಯಗಳಾಗಲಿ ಸ್ಪಷ್ಟವಾಗಿ ಮಧ್ಯಪ್ರವೇಶಿಸಿ ಒಡನಾಡಿಗಳನ್ನು ಸರಿಯಾದ ಪ್ರಜ್ಞೆಗೆ ಕರೆದೊಯ್ಯಲು ಸಮರ್ಥರಾಗಿದ್ದರು.

ತುರ್ತುಪರಿಸ್ಥಿತಿಯ ವಿರುದ್ಧ ತಲಶ್ಶೇರಿಯಲ್ಲಿ ನಡೆದ ಮೊದಲ ಸ್ವಯಂಪ್ರೇರಿತ ಪ್ರತಿಭಟನಾ ಪ್ರದರ್ಶನ ಅವರ ನೇತೃತ್ವದಲ್ಲಿ ನಡೆಯಿತು. ಅವರನ್ನು ಬಂಧಿಸಲಾಯಿತು ಮತ್ತು ಪೊಲೀಸ್ ಲಾಕ್–ಅಪ್ ಒಳಗೆ ಕ್ರೂರ ದಮನಕ್ಕೆ ಒಳಗಾಗಬೇಕಾಯಿತು. ನಮ್ಮಿಬ್ಬರನ್ನೂ ಏಕಕಾಲಕ್ಕೆ ಬಂಧಿಸಲಾಯಿತು. ಕಣ್ಣೂರು ಸೆಂಟ್ರಲ್ ಜೈಲಿನ 8ನೇ ಬ್ಲಾಕ್‌ನಲ್ಲಿ ಪಕ್ಕದ ಸಿಮೆಂಟ್ ಹಾಸಿಗೆಗಳ ಮೇಲೆ ಮಲಗಿದೆವು. ಪೋಲೀಸರ ದೌರ್ಜನ್ಯವನ್ನು ಅನುಭವಿಸಿದ ನಂತರ ನಾನು ತುಂಬಾ ದುರ್ಬಲನಾಗಿದ್ದೆ. ಬಾಲಕೃಷ್ಣನ್ ಸೋದರ ವಾತ್ಸಲ್ಯದಿಂದ ನನಗೆ ಸಹಾಯ ಮಾಡಿದರು. ಇದು ಸಂಗಾತಿ ಎಂಬುದರ ಆಳವನ್ನು ಮತ್ತು ಅರ್ಥವನ್ನು ಪ್ರಕಟಗೊಳಿಸಿತು. ಇ.ಕೆ.ಇಂಬಿಚ್ಚಿ ಬಾವ, ವಿ.ವಿ.ದಕ್ಷಿಣಾಮೂರ್ತಿ, ಸಂಸದ ವೀರೇಂದ್ರ ಕುಮಾರ್ ಮತ್ತು ಬಾಫಕಿ ತಂಗಳ್ ಸೇರಿದಂತೆ ಇತರರು ಜೈಲಿನಲ್ಲಿ ನಮ್ಮೊಂದಿಗೆ ಇದ್ದರು.

ಕೊಡಿಯೇರಿ ಆ ಜೈಲು ದಿನಗಳನ್ನು ಕಲಿಕೆಯ ದಿನಗಳನ್ನಾಗಿ ಪರಿವರ್ತಿಸಿದರು.

ನಿಸ್ಸಂದೇಹವಾಗಿ, ಕೊಡಿಯೇರಿ ಅವರು ಉತ್ಕೃಷ್ಟ ಸಂಘಟಕ ಕಾಮ್ರೇಡ್ ಸಿಎಚ್ ಕನರನ್ ಅವರ ನೆಲದಿಂದ ಕಮ್ಯುನಿಸ್ಟ್ ಚಳವಳಿಯು ಪಡೆದ ಒಬ್ಬ ಅಮೂಲ್ಯ ನಾಯಕರಾಗಿದ್ದರು. 1990–95ರ ನಡುವೆ ಕಣ್ಣೂರು ಜಿಲ್ಲಾ ಕಾರ್ಯದರ್ಶಿಯಾಗಿ, ಪ್ರಕ್ಷುಬ್ಧ ಸಮಯದಲ್ಲಿ ಜಿಲ್ಲೆಯಲ್ಲಿ ಅವರು ಪಕ್ಷವನ್ನು ಮುನ್ನಡೆಸಿದರು. ಕೂತುಪರಂಬ ಗುಂಡಿನ ದಾಳಿ, ಕೆ.ವಿ.ಸುಧೀಶರು ಹುತಾತ್ಮರಾದದ್ದು ಇತ್ಯಾದಿ ಸವಾಲುಗಳು ಮತ್ತು ಬೆದರಿಕೆಗಳ ಎದುರು ಪಕ್ಷವನ್ನು ಬಲಿಷ್ಠವಾಗಿಡುವಲ್ಲಿ ಕಾರ್ಯದರ್ಶಿಯಾಗಿ ಕೊಡಿಯೇರಿ ನಿರ್ವಹಿಸಿದ ನಾಯಕತ್ವದ ಪಾತ್ರವನ್ನು ವಿಶೇಷವಾಗಿ ಉಲ್ಲೇಖಿಸಬೇಕು.

ಬಾಲಕೃಷ್ಣನ್ ಅವರು ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ಸ್ಥಾನಕ್ಕೆ ಏರಿದಾಗ ಕೇರಳದಲ್ಲಿ ಪಕ್ಷದ ಸಂಪೂರ್ಣ ವ್ಯವಹಾರಗಳನ್ನು ನೋಡಿಕೊಳ್ಳಲು ಮತ್ತು ರಾಜ್ಯಾದ್ಯಂತದ ತಮ್ಮ ಪಕ್ಷದ ಸಹೋದ್ಯೋಗಿಗಳಿಂದ ಸಮಾನವಾಗಿ ಪ್ರೀತಿ ಪಡೆಯಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಸಂಘಟನಾ ಮಟ್ಟದಲ್ಲಿರಲಿ, ಶಾಸಕಾಂಗ ಸಭೆಯಲ್ಲಾಗಲಿ, ಮಂತ್ರಿಯಾಗಿ ಆಡಳಿತಾತ್ಮಕ ನಾಯಕತ್ವದಲ್ಲಾಗಲಿ ಅವರು ಮಧ್ಯಪ್ರವೇಶಿಸಿ ಮನ್ನಣೆ ಗಳಿಸಲು ಸಾಧ್ಯವಾಯಿತು.

ಅವರು ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಮತ್ತು ನಂತರ ಕಾರ್ಯದರ್ಶಿಯಾಗಿ ಪಾತ್ರವನ್ನು ನಿರ್ವಹಿಸುತ್ತಿದ್ದಾಗ ಪಕ್ಷವು ಅನೇಕ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಎದುರಿಸಿತು. ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅವರು ತಮ್ಮ ಶಾಂತ ಮಧ್ಯಪ್ರವೇಶದೊಂದಿಗೆ ಅಪಾರ ಸಾಮರ್ಥ್ಯವನ್ನು ತೋರಿಸಿದರು. ಪಕ್ಷದ ಶತ್ರುಗಳೊಂದಿಗೆ ಕಠಿಣವಾಗಿ ವ್ಯವಹರಿಸುವಾಗ, ಅವರು ಸಾಮಾನ್ಯ ಕಾಳಜಿಯ ವಿಷಯಗಳಲ್ಲಿ ಮಧ್ಯಪ್ರವೇಶಿಸುವ ತಮ್ಮ ಶಾಂತ ಮತ್ತು ಹೃದಯಪೂರ್ವಕವಾದ ವಿಧಾನಕ್ಕೆ ಅಂಟಿಕೊಳ್ಳುತ್ತಿದ್ದರು. ಎಲ್ಲರೊಂದಿಗೂ ಆತ್ಮೀಯ ಸಂಬಂಧ ಇಟ್ಟುಕೊಳ್ಳುತ್ತಲೇ ಅವರು ಪಕ್ಷದ ನಿಲುವುಗಳಿಂದ ಎಂದೂ ವಿಚಲಿತಗೊಳ್ಳಲಿಲ್ಲ.

ಇದು ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗವನ್ನು ಐತಿಹಾಸಿಕ ಸತತ ಎರಡನೇ ಅವಧಿಗೆ ಸರ್ಕಾರಕ್ಕೆ ಮುನ್ನಡೆಸಬಲ್ಲ ಮಟ್ಟಗಳಿಗೆ ಪಕ್ಷದ ಸಂಘಟನೆಯನ್ನು ಸಜ್ಜುಗೊಳಿಸುವಲ್ಲಿ ಕೊಡಿಯೇರಿ ಬಹು ಪ್ರಮುಖ ಪಾತ್ರ ವಹಿಸಿದ್ದಾರೆ. ಹೋರಾಟಗಳಲ್ಲಿ ಪುಟಗೊಂಡ ಬದುಕು ಅವರದು. ಶಿಕ್ಷಣದ ಆರಂಭದ ದಿನಗಳಿಂದಲೂ ಅವರು ಅಸಂಖ್ಯಾತ ಹೋರಾಟಗಳು, ಬಂಧನಗಳು ಮತ್ತು ಲಾಕ್–ಅಪ್‌ಗಳಲ್ಲಿ ಕ್ರೂರ ದಮನಗಳನ್ನು ಎದುರಿಸಿದರು. ಪಕ್ಷಕ್ಕೆ ತಮ್ಮ ಬದುಕನ್ನು ಅರ್ಪಿಸಿರುವ ನಾಯಕರ ಉನ್ನತ ಸಾಲಿನಲ್ಲಿ ನಿಲ್ಲುವವರು ಕೊಡಿಯೇರಿ. ಎಂದೂ ರಾಜಿಗಿಳಿಯದ ಸೈದ್ಧಾಂತಿಕ ನಿಲುವು, ಪಕ್ಷಕ್ಕೆ ಅಚಲವಾದ ನಿಷ್ಠೆ, ಸದಾ ಸಾಮೂಹಿಕ ಕಾರ್ಯನಿರ್ವಹಣೆಗೆ ಅಂಟಿಕೊಳ್ಳುವುದು ಮತ್ತು ಪಕ್ಷದ ಸಂಘಟನಾ ವ್ಯವಸ್ಥೆಯನ್ನು ಸದಾ ಸಜ್ಜಾಗಿರುವಂತೆ ಇಟ್ಟುಕೊಳ್ಳುವುದು ಇವೆಲ್ಲವೂ ಕೊಡಿಯೇರಿಯವರಿಂದ ಮುಂದಿನ ತಲೆಮಾರುಗಳವರು ಕಲಿಯಬೇಕಾದ ಎದ್ದುಕಾಣುವ ಗುಣಗಳು.

ನಾವಿಬ್ಬರೂ ಒಟ್ಟಿಗೆ ಕೆಲಸ ಮಾಡಿದೆವು. ಒಬ್ಬ ಸೋದರನನ್ನು ಕಳೆದುಕೊಳ್ಳುವ ನೋವನ್ನು ವಿವರಿಸಲಾಗದು. ಅವರ ಅನಾರೋಗ್ಯಕ್ಕೆ ಸಾಧ್ಯವಾದಷ್ಟು ಉತ್ತಮ ಚಿಕಿತ್ಸೆಯನ್ನು ನೀಡಬೇಕೆಂಬುದು ನಮ್ಮ ದೃಢ ಪ್ರಯತ್ನವಾಗಿತ್ತು. ಆದರೆ ಇದು ಶೀಘ್ರವಾಗಿ ಗುಣಪಡಿಸಲಾಗದ ಸ್ಥಿತಿಗೆ ಬೆಳೆಯಿತು. ಕೆಟ್ಟದ್ದೇನೂ ಸಂಭವಿಸದಿರಲಿ ಎಂದು ಆಶಿಸಿದ್ದರೂ ಅದು ನಡೆದೇ ಬಿಟ್ಟಿದೆ. ಆದರೆ ಕಾಮ್ರೇಡ್ ಕೊಡಿಯೇರಿ ನಮ್ಮ ನಡುವಿನಿಂದ ಹೋಗುವುದಿಲ್ಲ. ಅವರ ಪ್ರೀತಿಯ ಉಪಸ್ಥಿತಿಯು ಸದಾ ಜನರ ಹೃದಯಗಳಲ್ಲಿ ಉಳಿಯುತ್ತದೆ.



'ಕಲ್ಯಾಣಂ' ಮತ್ತು 'ಸಂಸ್ಕಾರಿಕಂ'

ಸಿಪಿಎಂ ಕೇರಳ ರಾಜ್ಯದ ಮಾಜಿ ಕಾರ್ಯದರ್ಶಿ ಮತ್ತು ಪಾಲಿಟ್ ಬ್ಯೂರೋ ಸದಸ್ಯರಾಗಿದ್ದ ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅಕ್ಟೋಬರ್ ಒಂದರಂದು ಚೆನ್ನೈನ ಆಸ್ಪತ್ರೆ ಒಂದರಲ್ಲಿ ಕ್ಯಾನ್ಸರ್ ಖಾಯಿಲೆಯಿಂದ ಗುಣಮುಖರಾಗದೆ ನಿಧನರಾದರು. ಅವರಿಗೆ 68 ವರ್ಷ ವಯಸ್ಸಾಗಿತ್ತು.

2006–2011ರಲ್ಲಿ ವಿಎಸ್ ಅಚ್ಯುತಾನಂದನ್ ನೇತೃತ್ವದ ಸಂಪುಟದಲ್ಲಿ ಕೊಡಿಯೇರಿ ಅವರು ಗೃಹ ಮತ್ತು ಪ್ರವಾಸೋದ್ಯಮ ಖಾತೆಗಳನ್ನು ಹೊಂದಿದ್ದರು. 2001–2004 ಮತ್ತು 2011–2016ರ ಅವಧಿಯಲ್ಲಿ ರಾಜ್ಯ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪನಾಯಕರೂ ಆಗಿದ್ದರು.

ಈ ವರ್ಷದ ಮಾರ್ಚ್‌ನಲ್ಲಿ ಕೊಚ್ಚಿಯಲ್ಲಿ ನಡೆದ ಸಿಪಿಎಂ ಪಕ್ಷದ ರಾಜ್ಯ ಸಮ್ಮೇಳನವು ಅವರನ್ನು ಸತತ ಮೂರನೇ ಅವಧಿಗೆ ಪಕ್ಷದ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತ್ತು. ಆದರೆ, ನಂತರ ಅನಾರೋಗ್ಯದ ಕಾರಣ ಎಂ.ವಿ.ಗೋವಿಂದನ್ ಅವರಿಗೆ ತಮ್ಮ ಜವಾಬ್ದಾರಿ ವಹಿಸಿದ್ದರು.

ಕಾಮ್ರೇಡ್ ಕೊಡಿಯೇರಿ ಅವರು ರಾಜ್ಯ ವಿಧಾನಸಭೆಯಲ್ಲಿ 1982, 1987, 2001, 2006 ಮತ್ತು 2011 ರಲ್ಲಿ ಐದು ಬಾರಿ ತಲಶ್ಶೇರಿಯನ್ನು ಪ್ರತಿನಿಧಿಸಿದ್ದರು.

ಪುಟ 10 ಕ್ಕೆ

ಕಾರ್ಮೋಡದಲ್ಲೊಂದು ಕೋಲ್ಮಿಂಚು
ವೈದ್ಯಕೀಯ ಗರ್ಭಪಾತ ಕುರಿತ ಸುಪ್ರೀಂ ಕೋರ್ಟ್ ತೀರ್ಪು



ವಿಮಲಾ ಕೆ.ಎಸ್.



ಕಾರ್ಮೋಡದಲ್ಲೊಂದು ಕೋಲ್ಮಿಂಚಿನಂತೆ ಆಗಾಗ ಮಹಿಳೆಯರಿಗೆ ಒಂದಿಷ್ಟಿಷ್ಟು ಸಮಾಧಾನ ಕೊಡುವ ತೀರ್ಪುಗಳನ್ನು ನೋಡುತ್ತೇವೆ. ಅಂತಹ ಒಂದು ತೀರ್ಪು ಸೆಪ್ಟೆಂಬರ್ 29 ರಂದು ವೈದ್ಯಕೀಯ ಗರ್ಭಪಾತದ ಕುರಿತು ಬಂದಿದೆ. ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ಎ. ಎಸ್.ಬೋಪಣ್ಣ, ಹಾಗೂ ಜೆ.ಬಿ.ಪಾರ್ದಿವಾಲಾರನ್ನೊಳಗೊಂಡ ಪೀಠವು ಮಣಿಪುರದ ಮಹಿಳೆಯೊಬ್ಬರ ಪ್ರಕರಣದಲ್ಲಿ ಕೊಟ್ಟ ತೀರ್ಪು ಇದು.

ಏನಿದು ಪ್ರಕರಣ:

ಮಣಿಪುರದ ಅವಿವಾಹಿತ ಮಹಿಳೆಯೊಬ್ಬರು ಒಪ್ಪಿತ ಸಂಬಂಧದಲ್ಲಿ ಧರಿಸಿದ ಬಸಿರನ್ನು, ತಮ್ಮ ಸಂಬಂಧ ಮುರಿದುಬಿದ್ದ ಕಾರಣದಿಂದ, ತೆಗೆದು ಹಾಕಲು ಬಯಸಿದ್ದಳು. ಆದರೆ ಅವಳ ಕೋರಿಕೆಯನ್ನು ಮಾನ್ಯ ಮಾಡದ ದೆಹಲಿ ಹೈಕೋರ್ಟ್ ಆಕೆಯ ಗರ್ಭಪಾತದ ಹಕ್ಕನ್ನು ನಿರಾಕರಿಸಿತ್ತು. ನಿರಾಕರಿಸಲು ಅದು ತನ್ನ ಕಾರಣವನ್ನು ದೇಶದಲ್ಲಿರುವ 1971 ರ ವೈದ್ಯಕೀಯ ಗರ್ಭಪಾತ ಕಾಯ್ದೆ ಯ ಕಲಮು 3(2)(ಬಿ) ಮತ್ತು 2003 ರ ವೈದ್ಯಕೀಯ ಗರ್ಭಪಾತ ಕಾಯ್ದೆ ನಿಯಮಗಳ 3(ಬಿ) ಗಳನ್ನು ಉಲ್ಲೇಖಿಸಿ ದೂರುದಾರರು ಅವಿವಾಹಿತ ಮಹಿಳೆ ಮತ್ತು ಒಪ್ಪಿತ ಸಂಬಂಧದಲ್ಲಿ ಗರ್ಭ ಸಂಭವಿಸಿರುವುದರಿಂದ ಈ ಕಾಯ್ದೆಯ ಅಡಿ ಗರ್ಭಪಾತದ ಹಕ್ಕನ್ನು ಗುರುತಿಸಿಲ್ಲ ಎಂದಿತ್ತು. ಸಾಲದೆಂಬಂತೆ ಮುಖ್ಯ ನ್ಯಾಯಾಧೀಶರೇ ಇದ್ದ ಪೀಠ ದೂರುದಾರಳಿಗೆ ಹೆರಿಗೆಯಾಗುವವರೆಗೆ ಯಾವುದಾದರೂ ಸುರಕ್ಷಿತ ಸ್ಥಳದಲ್ಲಿದ್ದು ನಂತರ ಹುಟ್ಟಿದ ಮಗುವನ್ನು ಯಾರಿಗಾದರೂ ದತ್ತು ಕೊಟ್ಟುಬಿಡುವ ಸಲಹೆಯೂ ಮಾಡಿದ್ದರೆಂದು ಮಾಧ್ಯಮಗಳ ವರದಿಗಳು ಬಂದಿದ್ದವು.!! ಎಂದರೆ ಮಹಿಳೆಯೊಬ್ಬಳ ಮೂಲಭೂತ ಹಕ್ಕು ಅವಳ ದೇಹದ ಮೇಲಿನ ಹಕ್ಕು, ಹೆರುವ ಹೆರದಿರುವ ತೀರ್ಮಾನ ಮಾಡುವ ಹಕ್ಕನ್ನು ನಿರಾಕರಿಸಿದ ಸ್ಪಷ್ಟ ಉದಾಹರಣೆಯಲ್ಲವೇ ಇದು??

ಮುರಿದ ಸಂಬಂಧದ, ತನಗೆ ಅನಗತ್ಯ ಎನಿಸಿದ ಗರ್ಭವನ್ನು ತೆಗೆಸಲು ನಿರ್ಧರಿಸಿದ ಆ ಮಹಿಳೆ ಇದನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದರು. ಆಕೆ ಸಲ್ಲಿಸಿದ ಮೇಲ್ಮನವಿಯನ್ನು ಸ್ವೀಕರಿಸಿದ ಸುಪ್ರೀಂ ಕೋರ್ಟ್ ಕಾಯ್ದೆಯಲ್ಲಿರುವ ಈ ಅಂಶವೇ ಸಂವಿಧಾನದ ಕಲಮು 14 ಮತ್ತು 21ರ ಉಲ್ಲಂಘನೆ ಎಂದೂ ಹೇಳಿ ಆಕೆಗೆ ಗರ್ಭಪಾತ ಮಾಡಿಸಲು ಜುಲೈ 2022 ರಲ್ಲಿ ಅನುಮತಿ ನೀಡಿ, ವಿಷಯವನ್ನು ವಿಸ್ತೃತ ಪರಿಶೀಲನೆಗೆ ಕಾಯ್ದಿರಿಸಿತ್ತು.

ವಿವಿಧ ಕಾರಣಗಳಿಗಾಗಿ ಇದೊಂದು ಐತಿಹಾಸಿಕ ತೀರ್ಪು:

ಸುಪ್ರೀಂ ಕೋರ್ಟ್ ಈಗ ಒಂದು ಐತಿಹಾಸಿಕ ತೀರ್ಪು ನೀಡಿ ಮಹಿಳೆಯ ದೇಹದ ಮೇಲಿನ ಹಕ್ಕು ಅವಳದು, ತನಗೆ ಬೇಡದ ಗರ್ಭವನ್ನು ತೆಗೆಸಲು ಮತ್ತೊಬ್ಬರ ಅನುಮತಿಯ ಅಗತ್ಯವಿಲ್ಲವೆಂದು ಹೆಣ್ಣಿನ ದೇಹದ ಸ್ವಾಯತ್ತ ಹಕ್ಕನ್ನು ಮಾನ್ಯ ಮಾಡಿದ್ದಷ್ಟೇ ಅಲ್ಲದೇ ಬಹು ಚರ್ಚಿತವಾಗಿರುವ ವಿವಾಹದೊಳಗಿನ ಬಲವಂತದ ಗರ್ಭವನ್ನು ತೆಗೆಸಲೂ ಅನುಮತಿ ನೀಡಿ ವೈವಾಹಿಕ ಸಂಬಂಧದಲ್ಲಿನ ಅ ತ್ಯಾ ಚಾ ರ ' ವ ' ನ ' ್ನ ಗುರುತಿಸಬೇಕೆಂಬ ಬೇಡಿಕೆಯನ್ನೂ ಮಾನ್ಯ ಮಾಡಿದೆ.ಇದೊಂದು ಕ್ರಾಂತಿಕಾರಿ ಹೆಜ್ಜೆಯೆಂದೇ ಪರಿಗಣೀಸಬೇಕು. ವಿವಾಹ ಎನ್ನುವುದು ಇಬ್ಬರ ನಡುವಿನ ಬದುಕಿನ ಒಪ್ಪಂದವೆಂಬುದು ನಿಜ. ಆದರೆ ವಿಪರ್ಯಾಸವೆಂದರೆ ನಮ್ಮ ಸಮಾಜ ವಿವಾಹವನ್ನು ಲೈಂಗಿಕ ಕ್ರಿಯೆಯ ಲೈಸೆನ್ಸ್ ಎಂದು ಪರಿಗಣಿಸಿದೆ. ಹಾಗೆಂದೇ ವಿವಾಹದೊಳಗೆ ನಡೆಯುವ ಬಲವಂತದ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರವೆಂದು ಪರಿಗಣಿಸಲು ಅವಕಾಶವಿರಲಿಲ್ಲ. ಇಂಡಿಯನ್ ಪೀನಲ್ ಕೋಡ್ ನ 375 ನೇ ಕಲಮಿನನ್ವಯ? ಮಹಿಳೆಯೊಬ್ಬಳ ಮೇಲೆ ಅವಳ ಇಚ್ಛೆಗೆ ವಿರುದ್ಧವಾಗಿ, ಆಕೆಯ ಸಮ್ಮತಿಯಿಲ್ಲದೇ, ಬಲವಂತ ಮಾಡಿ,ಮೋಸದಿಂದ, ಮತ್ತು ಬರಿಸಿ, ಆಕೆ ಮಾನಸಿಕ ಅಸ್ವಸ್ಥಳಾಗಿದ್ದರೆ, ಇಂಥ ಎಲ್ಲ ಸಂದರ್ಭಗಳಲ್ಲಿಯೂ ಆಕೆಯ ಮೇಲೆ ಲೈಂಗಿಕ ಕ್ರಿಯೆ ನಡೆಸಿದಾಗಲೂ ಆಕೆ ಅಪ್ರಾಪ್ತ ಯುವತಿಯಾಗಿದ್ದಲ್ಲಿ ಮಾತ್ರ ಅದು ಅಪರಾಧವೆಂದು ಪರಿಗಣಿಸಲ್ಪಡುತ್ತದೆ.? ಎಂದರೆ ಹೆಣ್ಣೊಬ್ಬಳ ದೇಹದ ಮೇಲೆ ಗಂಡಿನ ಸರ್ವಾಧಿಕಾರವನ್ನು ಖಾತ್ರಿ ಪಡಿಸುವ ಎಲ್ಲ ಅವಕಾಶಗಳೂ ಇದ್ದ ಸಮಾಜವಿದು. ಇಡೀ ದೇಶವೇ ತಲ್ಲಣಿಸಿದ ನಿರ್ಭಯಾ ಪ್ರಕರಣದ ನಂತರ ಬಂದ ಅತ್ಯಾಚಾರ ಕಾಯ್ದೆಯ ತಿದ್ದುಪಡಿಗಳ ಸಂದರ್ಭದಲ್ಲಿ ಕೂಡಾ ಈ ವಿಷಯ ಮುನ್ನೆಲೆಗೆ ಬಂದಿತ್ತು. ಜಸ್ಟೀಸ್ ವರ್ಮಾ ಆಯೋಗದ ಕೋರಿಕೆಯ ಮೇರೆಗೆ ಬಂದ ಸಾರ್ವಜನಿಕರ ಅಭಿಪ್ರಾಯಗಳಲ್ಲಿ ಕೂಡಾ ವಿವಾಹದೊಳಗಿನ ಒತ್ತಾಯದ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರವೆಂದೇ ಪರಿಗಣಿಸಲು ಒತ್ತಾಯದ ಶಿಫಾರಸ್ಸುಗಳನ್ನು ಸಾರ್ವಜನಿಕರು, ಮಹಿಳಾ ಸಂಘಟಕರು ನೀಡಿದ್ದರು. ಆದರೆ ಶಿಫಾರಸುಗಳನ್ನು ಅಂಗೀಕರಿಸುವಾಗ ಅದನ್ನು ಸರ್ಕಾರ ಪರಿಗಣಿಸಿರಲಿಲ್ಲ. ಅದಕ್ಕೆ ಕಾರಣ ಈ ಸಮಾಜ ವಿವಾಹ ಸಂಬಂಧವನ್ನು ಪರಿಭಾವಿಸುವ ರೀತಿ. ಮತ್ತು ಲೈಂಗಿಕತೆಯ ವಿಷಯದಲ್ಲಿ ಪುರುಷನಿಗೆ ಕೊಟ್ಟಿರುವ ಏಕಸ್ವಾಮ್ಯತೆಯ ಕಾರಣದಿಂದ. ಹೆಣ್ಣಿನ ಹಕ್ಕಿನ ಪ್ರಶ್ನೆಗಳು ಬಂದಾಗೆಲ್ಲ ಅದು ಕುಟುಂಬವನ್ನು ಉಳಿಸುವ ನೆಲೆಯಲ್ಲಿ ಚರ್ಚೆಗೆ ಒಳಪಡುತ್ತದೆ. ಅವಳ ದೇಹದ ಮೇಲಿನ ಹಕ್ಕು, ಅಥವಾ ಹುಟ್ಟಿದ ಕುಟುಂಬದಿಂದ ಪಡೆಯುವ ಆಸ್ತಿ ಸಂಬಂಧಿತ ಹಕ್ಕು, ಕಿರಿಕಿರಿಯ,ಹಿಂಸೆಯ ವಿವಾಹ ಬಂಧನದಿಂದ ಹೊರ ಬರಲು ಅವಕಾಶ ಇರುವ ವಿಚ್ಛೇದನದ ಹಕ್ಕು..ಹೀಗೆ ಯಾವುದೇ ಸಂದರ್ಭಗಳಲ್ಲಿಯೂ ಅವಳ ಅಗತ್ಯವನ್ನು ಮುಖ್ಯವಾಗಿ ಪರಿಗಣಿಸದೇ ಅನಿವಾರ್ಯತೆಗೆ ಅವಳನ್ನು ಒಡ್ಡುವ ಕೆಲಸ ಯಾವ ಮುಜುಗರವೂ ಇಲ್ಲದೇ ನಡೆಯುತ್ತದೆ. ಈ ಮನಃಸ್ಥಿತಿಗೆ ಹಿಡಿದ ಕನ್ನಡಿಯಾಗಿದ್ದ ದೆಹಲಿ ಹೈ ಕೋರ್ಟ್ ತೀರ್ಪಿಗೆ ವ್ಯತಿರಿಕ್ತವಾಗಿ ಸಮಾಜದ ಮನೋಭಾವ ಬದಲಿಕೆಗೆ ಸಣ್ಣದೊಂದು ಅವಕಾಶ ಸೃಷ್ಟಿ ಮಾಡಿದ ತೀರ್ಪು ಇದು ಐತಿಹಾಸಿಕ.

ಮೌನಗರ್ಭದಲ್ಲಿ ಅಡಗಿರುವ ಅದೆಷ್ಟು ನೋವುಗಳು:

ಈ ದೇಶದಲ್ಲಿ ಎನ್ ಎಫ್ ಎಚ್ ಎಸ್ ವರದಿಯೇ ಗುರುತಿಸಿದಂತೆ? ಭಾರತದಲ್ಲಿ ಮೂವರಲ್ಲಿ ಒಬ್ಬ 15 ರಿಂದ 49 ವಯೋಮಾನದ ಮಹಿಳೆಯರು, ಮತ್ತು ಸರಿ ಸುಮಾರು 80% ಮಹಿಳೆಯರು ತಮ್ಮ ಗಂಡಂದಿರಿಂದ ಲೈಂಗಿಕ ದೌರ್ಜನ್ಯವೂ ಸೇರಿದಂತೆ ಹಿಂಸೆಯನ್ನು ಅನುಭವಿಸುತ್ತಾರೆ.? ಇವು ಗಮನಕ್ಕೆ ಬಂದ ಅಂಕಿ ಸಂಕಿಗಳು, ಬೆಳಕಿಗೆ ಬಾರದ ಅದೆಷ್ಟು ಹೆಣ್ಣು ಜೀವಗಳು ಮೌನದಲ್ಲಿ ಈ ಹಿಂಸೆಯನ್ನು ಅನುಭವಿಸುತ್ತ ನಿಡುಸುಯ್ಯುತ್ತಾರೆಂಬ ಕಲ್ಪನೆಯೂ ಈ ಸಮಾಜಕ್ಕೆ ಇರಲಿಕ್ಕಿಲ್ಲ. ಹಾಗಾಗಿಯೇ ವಿವಾಹವೆಂಬ ?ಪವಿತ್ರ? ಬಂಧನದೊಳಗೆ ಚಿರಕಾಲ ಬಂಧಿಯಾಗಿಯೇ ಹೆಣ್ಣು ಇರಬೇಕೆಂಬ ಸನಾತನ ವಾದ ವಿವಾಹಿತ ಸಂಬಂಧದೊಳಗಿನ ಅಸಮ್ಮತಿಯ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರವೆಂದು ಕರೆಯಲು ಸಮ್ಮತಿಸುವುದಿಲ್ಲ. ಈ ಕಾರಣವೂ ಸೇರಿದಂತೆ ಇದುವರೆಗೂ ವಿವಾಹದೊಳಗಿನ ಅತ್ಯಾಚಾರವನ್ನು ಅತ್ಯಾಚಾರವೆಂದು ಒಪ್ಪಿಕೊಂಡಿರಲಿಲ್ಲ. ಈ ಅವಧಿಯಲ್ಲಿಯೇ ಕರ್ನಾಟಕ ಹೈ ಕೋರ್ಟ್ ಒಂದು ಪ್ರಕರಣದಲ್ಲಿ ?ಅ ತ್ಯಾ ಚಾ ರ ' ವ ' ೦ ದ ' ರ ' ಅತ್ಯಾಚಾರವೇ, ಗಂಡ ಮಾಡಿದರೂ ಯಾರೇ ಮಾಡಿದರೂ ಎಂದು ಹೇಳಿದ ತೀರ್ಪೂ ಇದೆ. ಅದೇ ವೇಳೆಗೆ ಇತರ ಉಚ್ಚ ನ್ಯಾಯಾಲಯಗಳಲ್ಲಿ ವಿಭಜಿತ ತೀರ್ಪು–ಸ್ಪ್ಲಿಟ್ ವರ್ಡಿಕ್ಟ್ ಗಳೂ ಬಂದಿವೆ. ಆದರೆ ಇದಮಿತ್ಥಂ ಎಂಬ ಅಭಿಪ್ರಾಯ ಇದುವರೆಗೂ ಬಂದಿಲ್ಲ. ಈಗ ವೈದ್ಯಕೀಯ ಗರ್ಭಪಾತದ ಅಧಿಕಾರವನ್ನು ನಿರ್ಧರಿಸುವಾಗ ಅತ್ಯಂತ ಗಂಭೀರವಾದ ಈ ಸಂಗತಿಯತ್ತಲೂ ಸರ್ವೋಚ್ಚ ನ್ಯಾಯಾಲಯ ಹರಿಸಿದ ಗಮನ ಸ್ವಾಗತಾರ್ಹವಾದುದು.

ಭಾರತದಲ್ಲಿ ವೈದ್ಯಕೀಯ ಗರ್ಭಪಾತ ಕಾನೂನು:

ಭಾರತದಲ್ಲಿ ವೈದ್ಯಕೀಯ ಗರ್ಭಪಾತಕ್ಕೆ ಕಾನೂನಿನ ಮಾನ್ಯತೆ ಇದೆ.1971 ಕ್ಕೂ ಮುನ್ನ ಗರ್ಭಪಾತ ಮಾಡುವುದು 1860ರ ಐ.ಪಿ.ಸಿ 312 ನೇ ಕಲಮಿನ ಪ್ರಕಾರ ಶಿಕ್ಷಾರ್ಹ ಕ್ರಿಮಿನಲ್ ಅಪರಾಧವಾಗಿತ್ತು. 1960 ರಲ್ಲಿ ಇತರ ಹಲವು ದೇಶಗಳಲ್ಲಿ ಗರ್ಭಪಾತವನ್ನು ಕಾನೂನು ಬದ್ಧಗೊಳಿಸಲಾಯಿತು. ಅದೇ ವೇಳೆಗೆ ಭಾರತದಲ್ಲಿಯೂ ಈ ಬಗ್ಗೆ ಆಲೋಚನೆ ಪ್ರಾರಂಭಗೊಂಡಿತು. ಆ ದಿನಗಳಲ್ಲಿ ತೀವ್ರವಾಗಿ ಹೆಚ್ಚಿದ ಅಸುರಕ್ಷ ಗರ್ಭಪಾತಗಳು ಕುಟುಂಬ ಕಲ್ಯಾಣ ಮತ್ತು ಆರೋಗ್ಯ ಸಚಿವಾಲಯವನ್ನು ಕಳವಳಕ್ಕೆ ತಳ್ಳಿತು. ಈ ಸಮಸ್ಯೆಯ ಪರಿಹಾರಕ್ಕೆ 1964 ರಲ್ಲಿ ಶಾಂತಿಲಾಲ್ ಶಾ ನೇತೃತ್ವದಲ್ಲಿ ಗರ್ಭಪಾತ ಕಾನೂನು ತರಲು ಸಲಹೆ ಕೊಡುವಂತೆ ಸಮಿತಿಯೊಂದನ್ನು ರಚಿಸಲಾಯಿತು. ಅವರ ಸಲಹೆಯ ಮೇರೆಗೆ ವೈದ್ಯಕೀಯ ಗರ್ಭಪಾತ ಕಾನೂನು ತರಲು ಮಸೂದೆಯೊಂದನ್ನು ಸಂಸತ್ತಿನಲ್ಲಿ 1970ರಲ್ಲಿ ಮಂಡಿಸಲಾಯಿತು. ಆಗಸ್ಟ್ 1971 ರಲ್ಲಿ ಮಸೂದೆಯನ್ನು ಅಂಗೀಕರಿಸಲಾಯಿತು. ಶಾ ಸಮಿತಿಯು ಭಾರತದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ, ಮಹಿಳೆಯರ ಮತ್ತು ಜೀವಗಳ ಹಾನಿಯನ್ನು ತಡೆಯಲು ಒಂದು ಸೂಕ್ತ ಪರಿಹಾರೋಪಾಯವಾಗಿ ಈ ಕಾನೂನನ್ನು ಪ್ರಸ್ತಾಪ ಮಾಡಿತು. ಆ ವರದಿಯಲ್ಲಿ ಉಲ್ಲೇಖಿಸಿರುವಂತೆ ಆ ಸಮಯದಲ್ಲಿದ್ದ 500 ಮಿಲಿಯನ್ ಜನಸಂಖ್ಯೆಯಲ್ಲಿ 6.5 ಮಿಲಿಯನ್ ಗರ್ಭಪಾತಗಳಾಗುತ್ತಿದ್ದವು. ಅದರಲ್ಲಿ 2.6 ಮಿಲಿಯನ್ ಹಲವು ಕಾರಣಗಳಿಂದ ತಾವಾಗಿಯೇ ಸಂಭವಿಸುವ ಗರ್ಭಪಾತಗಳಾಗಿದ್ದರೆ 3.9 ಮಿಲಿಯನ್ ಮಾಡಿಸಿದ ಗರ್ಭಪಾತಗಳಾಗಿದ್ದವು. ಕಾನೂನಿನ ಮಾನ್ಯತೆ ಇರದಿದ್ದರೂ ನಡೆಯುತ್ತಿದ್ದ ಇವುಗಳು ಎಷ್ಟು ಸುರಕ್ಷಿತವಾಗಿ ನಡೆಯುತ್ತಿದ್ದಿರಬಹುದು ಎಂದು ನಾವು ಊಹಿಸಬಹುದು. ಹಾಗೆಂದೇ ಭಾರತದ ಮಾತೃ ಮರಣಗಳಲ್ಲಿ ಅಸುರಕ್ಷಿತ ಗರ್ಭಪಾತದ ಮರಣಗಳು ದೊಡ್ಡ ಪ್ರಮಾಣದಲ್ಲಿ ಸಂಭವಿಸುತ್ತಿವೆ ಎಂದು 2018 ರ ವರದಿಯೊಂದು ಹೇಳುತ್ತದೆ.

ಎಂ.ಟಿ.ಪಿ ಕಾನೂನು 1971 ಅಥವಾ ವೈದ್ಯಕೀಯ ಗರ್ಭಪಾತ ಕಾನೂನು 1971 ರ ಪ್ರಕಾರ

* ಗರ್ಭದ ಪ್ರಾಯ 20 ವಾರದ ಒಳಗಿರುವಾಗ ಗರ್ಭಪಾತ ಮಾಡಿಸುವ ಅವಕಾಶ.
* ಹಾಗೆ ಮಾಡಿಸಲೂ– ಗರ್ಭವನ್ನು ಮುಂದುವರೆಸುವುದರಿಂದ ಗರ್ಭಿಣಿಯ ದೈಹಿಕ ಅಥವಾ ಮಾನಸಿಕ ಸ್ಥಿತಿಗೆ ತೊಂದರೆಯುಂಟಾಗುವಂತಿದ್ದರೆ, ಅವಳ ಜೀವಕ್ಕೆ ಅಪಾಯವಾಗುವಂತಿದ್ದರೆ
* ಹುಟ್ಟುವ ಮಗು ದೈಹಿಕ ಅಥವಾ ಮಾನಸಿಕ ಅಸಹಜ ಸ್ಥಿತಿಯ ಕಾರಣದಿಂದ ಮಗುವಿಗೆ ಅಪಾಯದ ಸಂದರ್ಭಗಳು ಕಂಡು ಬಂದರೆ
* ಅತ್ಯಾಚಾರದಂಥಹ ಕೃತ್ಯಗಳಿಂದ ಗರ್ಭ ಕಟ್ಟಿದರೆ(ಅದು ಮಹಿಳೆಗೆ ತೀವ್ರ ಮಾನಸಿಕ ಆಘಾತವುಂಟು ಮಾಡುತ್ತದೆ ಎಂದು ಊಹಿಸಿ)
* ಕುಟುಂಬದ ಸಾಮಾಜಿಕ–ಆರ್ಥಿಕ ಸ್ಥಿತಿಯಲ್ಲಿ ತೀವ್ರ ಬಡತನವಿದ್ದು, ಈಗಾಗಲೇ ದಂಪತಿಗಳಿಗೆ 2–3 ಮಕ್ಕಳಿದ್ದಾಗ ವೈದ್ಯಕೀಯ ಗರ್ಭಪಾತ ಮಾಡಬಹುದು.

ಈ ಕಾನೂನಿನ ಪ್ರಕಾರ ನೋಂದಾಯಿತ ವೈದ್ಯರು ಮಾತ್ರವೇ ಗರ್ಭಪಾತ ಮಾಡಬಹುದು.

18 ವರ್ಷ ಮೇಲ್ಪಟ್ಟ ಮಹಿಳೆಗೆ ಅವಳ ಸಮ್ಮತಿಯ ಮೂಲಕ, ಅಪ್ರಾಪ್ತರು ಮತ್ತು ಮಾನಸಿಕ ಅಸ್ವಸ್ಥರಾದರೆ ಪೋಷಕರ ಸಮ್ಮತಿ ಬೇಕು.

12 ವಾರಗಳ ಭ್ರೂಣವಾದರೆ ಒಬ್ಬ ನೊಂದಾಯಿತ ವೈದ್ಯರ ಸಲಹೆ ಸಾಕು.

12 ರಿಂದ 20 ವಾರಗಳಾದರೆ ಇಬ್ಬರ ಸಲಹೆ ಬೇಕು.

ಆ ನಂತರ 2003 ರಲ್ಲಿ ಮತ್ತಿಷ್ಟು ಸುಧಾರಣೆ, 2006 ರಿಂದ 2010 ರ ವರೆಗೆ ತಜ್ಞರ ಜೊತೆ ಹಲವು ಸುತ್ತಿನ ಚರ್ಚೆಗಳು ನಡೆದು 2014 ರಲ್ಲಿ ಮತ್ತಿಷ್ಟು ತಿದ್ದುಪಡಿಗಳನ್ನುತಂದು ಕಾನೂನು ಬದ್ಧ ಸುರಕ್ಷಿತ ಗರ್ಭಪಾತಕ್ಕೆ ಅನುವು ಪುಟ 10 ಕ್ಕೆ

'ಕಲ್ಯಾಣಂ' ಮತ್ತು 'ಸಂಸ್ಕಾರಿಕಂ'

ಪುಟ 8 ರಿಂದ

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಕೊಡಿಯೇರಿ ಅವರು 2019ರ ಅಕ್ಟೋಬರ್‌ನಲ್ಲಿ ಅಮೆರಿಕದಿಂದ ಚಿಕಿತ್ಸೆ ಪಡೆದಿದ್ದರು. ಈ ವರ್ಷದ ಏಪ್ರಿಲ್‌ನಲ್ಲಿ ಚಿಕಿತ್ಸೆಗಾಗಿ ಅವರು ಅಮೇರಿಕಕ್ಕೆ ಭೇಟಿ ನೀಡಿದ್ದರು. 2020 ರಲ್ಲಿ ಪಕ್ಷದಿಂದ ಒಂದು ವರ್ಷ ರಜೆ ಪಡೆಯಲು ಆರೋಗ್ಯ ಕಾರಣಗಳನ್ನು ಕೊಡಿಯೇರಿ ಉಲ್ಲೇಖಿಸಿದ್ದರು. ಕೊಡಿಯೇರಿ ಅವರ ಅನುಪಸ್ಥಿತಿಯಲ್ಲ ಪ್ರಸ್ತುತ ಪಾಲಿಟ್‌ಬ್ಯೂರೋ ಸದಸ್ಯರಾಗಿರುವ ವಿಜಯರಾಘವನ್ ಸಿಪಿಎಂನ ಹಂಗಾಮಿ ರಾಜ್ಯ ಕಾರ್ಯದರ್ಶಿಯಾಗಿದ್ದರು.

ಕೊಡಿಯೇರಿ ಅವರು ಪತ್ನಿ ಎಸ್ ಆರ್ ವಿನೋದಿನಿ, ತಿರುವನಂತಪುರಂನ ಆಡಿಯೋ-ವಿಶುವಲ್ ರಿಪ್ರೊಗ್ರಾಫಿಕ್ ಸೆಂಟರ್‌ನ ಉದ್ಯೋಗಿ ಮತ್ತು ಸಿಪಿಎಂ ನಾಯಕ ಮತ್ತು ತಲಶ್ಶೇರಿಯ ಮಾಜಿ ಶಾಸಕ ಎಂ.ವಿ. ರಾಜಗೋಪಾಲ್ ಅವರ ಪುತ್ರಿ. ಪತ್ನಿ ಮತ್ತು ಪುತ್ರರಾದ ಬಿನೋಯ್ ಮತ್ತು ಬಿನೀಷ್ ಅವರನ್ನು ಕೊಡಿಯೇರಿ ಅಗಲಿದ್ದಾರೆ. ಡಾ ಅಖಿಲಾ ಮತ್ತು ರೆನೀತಾ ಅವರ ಸೊಸೆಯಂದಿರು.

ಬಾಲ್ಯ ಮತ್ತು ಶಿಕ್ಷಣ:

16, ನವೆಂಬರ್ 1953 ರಲ್ಲಿ ಕೊಡಿಯೇರಿಯ ಮೊಟ್ಟುಮ್ಮಲ್‌ನ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ಕುಂಜುಣ್ಣಿ ಕುರುಪ್ ಮತ್ತು ನಾರಾಯಣಿ ಅಮ್ಮ ದಂಪತಿಗಳ ಮಗನಾಗಿ ಕೊಡಿಯೇರಿ ಬಾಲಕೃಷ್ಣನ್ ಜನಿಸಿದರು. ಅವರು ಕೊಡಿಯೇರಿಯ ಜೂನಿಯರ್ ಬೇಸಿಕ್ ಶಾಲೆ ಮತ್ತು ಓಣಿಯನ್ ಸರ್ಕಾರಿ ಪ್ರೌಢಶಾಲೆಯಲ್ಲಿ ತಮ್ಮ ಶಾಲಾ ಶಿಕ್ಷಣವನ್ನು ಪಡೆದರು.

ಅವರು ತಮ್ಮ ಪೂರ್ವ-ಪದವಿ ಮಾಹೆಯ ಮಹಾತ್ಮ ಗಾಂಧಿ ಕಾಲೇಜಿನಲ್ಲಿ ಮತ್ತು ಪದವಿ ಶಿಕ್ಷಣವನ್ನು ತಿರುವನಂತಪುರದ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಪೂರ್ಣಗೊಳಿಸಿದರು.

ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೇ ರಾಜಕೀಯ ಪ್ರವೇಶ:

ಕೊಡಿಯೇರಿ ಬಾಲಕೃಷ್ಣನ್ ಅವರು ಓಣಿಯನ್ ಸರ್ಕಾರಿ ಪ್ರೌಢಶಾಲೆಯಲ್ಲಿ ಭಾರತೀಯ ವಿದ್ಯಾರ್ಥಿಗಳ ಒಕ್ಕೂಟದ (ಎಸ್‌ಎಫ್‌ಐ) ಪೂರ್ವವರ್ತಿಯಾದ ಕೇರಳ ವಿದ್ಯಾರ್ಥಿಗಳ ಒಕ್ಕೂಟದ (ಕೆಎಸ್‌ಎಫ್) ಘಟಕವನ್ನು ಸ್ಥಾಪಿಸುವ ಮೂಲಕ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. ಆಗ ಅವರು ಒಂಬತ್ತನೇ ತರಗತಿ ವಿದ್ಯಾರ್ಥಿ. ಅದೇ ಶಾಲೆಯಲ್ಲಿ ಹತ್ತನೆಯ ತರಗತಿ ಓದುತ್ತಿದ್ದಾಗ ಕೆಎಸ್ ಎಫ್ ಸಂಘಟನೆಯ ಕಾರ್ಯದರ್ಶಿ ಆಗಿದ್ದರು.

ಅವರು 1970 ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು ಮತ್ತು ಪಕ್ಷದ ಈಂಗಾಯಿಲ್ ಪೀಡಿಕ ಶಾಖೆಯ ಕಾರ್ಯದರ್ಶಿಯಾಗಿದ್ದರು. ಅದೇ ವರ್ಷ ಮಹಾತ್ಮ ಗಾಂಧಿ ಕಾಲೇಜು ವಿದ್ಯಾರ್ಥಿಗಳ ಒಕ್ಕೂಟದ ಅಧ್ಯಕ್ಷರಾಗಿಯೂ ಆಯ್ಕೆಯಾದರು.

1973 ರಿಂದ 1979ರ ವರೆಗೆ ಎಸ್‌ಎಫ್‌ಐ ಸಂಘಟನೆಯ ಅಖಿಲ ಭಾರತ ಜಂಟಿ ಕಾರ್ಯದರ್ಶಿಯಾಗಿದ್ದರು. 1973 ರಲ್ಲಿ ಸಿಪಿಎಂನ ಕೊಡಿಯೇರಿ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಆಗಿದ್ದರು. ಮತ್ತು ಅದೇ ವರ್ಷ ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1980-82ರ ಅವಧಿಯಲ್ಲಿ ಡಿವೈಎಫ್‌ಐನ ಕಣ್ಣೂರು ಜಿಲ್ಲಾಧ್ಯಕ್ಷರಾಗಿದ್ದರು. 1988 ರಲ್ಲಿ ಅಲಪ್ಪುಳದಲ್ಲಿ ನಡೆದ ಸಿಪಿಎಂ ಪಕ್ಷದ ರಾಜ್ಯ ಸಮ್ಮೇಳನವು ಅವರನ್ನು ಪಕ್ಷದ ರಾಜ್ಯ ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಿತು. ಅವರು 1990-95ರ ಅವಧಿಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಕಣ್ಣೂರಿನಲ್ಲಿ ಪಕ್ಷವನ್ನು ಮುನ್ನಡೆಸಿದರು. 1995 ರಲ್ಲಿ ಕೊಲ್ಲಂ ನಲ್ಲಿ ನಡೆದ ರಾಜ್ಯ ಸಮ್ಮೇಳನದಲ್ಲಿ ಸಿಪಿಎಂ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿ ಆಯ್ಕೆಯಾದರು. 2002ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಪಕ್ಷದ ಕಾಂಗ್ರೆಸ್ ಅವರನ್ನು ಸಿಪಿಎಂನ ಕೇಂದ್ರ ಸಮಿತಿಗೆ ಆಯ್ಕೆ ಮಾಡಿತು. 2008 ರಲ್ಲಿ ಕೊಯಮತ್ತೂರಿನಲ್ಲಿ ನಡೆದ ಪಕ್ಷದ ಕಾಂಗ್ರೆಸ್ ಕೊಡಿಯೇರಿ ಅವರನ್ನು ಪಾಲಿಟ್‌ಬ್ಯೂರೋ ಸದಸ್ಯರನ್ನಾಗಿ ಮಾಡಿತು, ಅದು ಅವರ ಮರಣದವರೆಗೂ ಇತ್ತು.

2015ರ ಫೆಬ್ರವರಿಯಲ್ಲಿ ಆಲಪ್ಪುಳದಲ್ಲಿ ನಡೆದ ಸಿಪಿಎಂ ಕೇರಳ ರಾಜ್ಯ ಸಮ್ಮೇಳನವು ಕಾಮ್ರೇಡ್ ಪಿಣರಾಯಿ ವಿಜಯನ್ ಅವರ ಉತ್ತರಾಧಿಕಾರಿಯಾಗಿ ಕೊಡಿಯೇರಿ ಅವರನ್ನು ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಿಸಿತು. ಅವರು ಫೆಬ್ರವರಿ 23, 2015 ರಂದು ಅಧಿಕಾರ ವಹಿಸಿಕೊಂಡರು. ಅವರು 2018 ಮತ್ತು 2022 ರಲ್ಲಿ ಕ್ರಮವಾಗಿ ಕಣ್ಣೂರು ಮತ್ತು ಕೊಚ್ಚಿಯಲ್ಲಿ ನಡೆದ ರಾಜ್ಯ ಸಮ್ಮೇಳನಗಳಿಂದ ಈ ಹುದ್ದೆಗೆ ಮರು ಆಯ್ಕೆಯಾದರು. ಅನಾರೋಗ್ಯದ ಕಾರಣದಿಂದ 2022ರ ಆಗಸ್ಟ್ 28ರಂದು ಕಾರ್ಯದರ್ಶಿ ಹುದ್ದೆಯ ಜವಾಬ್ದಾರಿಯನ್ನು ಬಿಟ್ಟುಕೊಟ್ಟರು.

ಕೊಡಿಯೇರಿ ಅವರು ಕೇರಳ ರೈತ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ ಮತ್ತು ಖಜಾಂಚಿ ಮತ್ತು ಅಖಿಲ ಭಾರತ ಕಿಸಾನ್ ಸಭಾ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು.

ದೇಶಾಭಿಮಾನಿ ಪತ್ರಿಕೆಯ ಸಂಪಾದಕರಾಗಿ 2021ರ ಮೇ ತಿಂಗಳಲ್ಲಿ ಜವಾಬ್ದಾರಿ ಹೊತ್ತರು.

ಜೈಲುವಾಸ:

ದೇಶದಲ್ಲಿ 1975 ರಲ್ಲಿ ತುರ್ತು ಪರಿಸ್ಥಿತಿಯ ಅವಧಿಯಲ್ಲಿ 16 ತಿಂಗಳ ಕಾಲ ಕಣ್ಣೂರಿನ ಕೇಂದ್ರ ಕಾರಾಗೃಹದಲ್ಲಿ ಆಂತರಿಕ ಭದ್ರತಾ ಕಾಯಿದೆ (ಮಿಸಾ) ನಿರ್ವಹಣೆಯ ಅಡಿಯಲ್ಲಿ ಕೊಡಿಯೇರಿ ಬಾಲಕೃಷ್ಣನ್ ಬಂಧಿತರಾಗಿ ಜೈಲಿನಲ್ಲಿದ್ದರು.

ಅವರು ಜೈಲಿನಲ್ಲಿದ್ದಾಗ ಸಿಪಿಎಂ ನಾಯಕ ಹಾಗೂ ಮಾಜಿ ಸ್ಪೀಕರ್ ಕಾಮ್ರೇಡ್ ಎಂ ವಿಜಯಕುಮಾರ್ ಅವರಿಗೆ ಬರೆದ ಪತ್ರಗಳು ವಿಜಯಕುಮಾರ್ ಅವರ ಬಳಿ ಇಂದಿಗೂ ಸಂಗ್ರಹವಿದೆ, ಅದನ್ನು ಅವರು ಅಮೂಲ್ಯ ಆಸ್ತಿ ಎಂದು ಪರಿಗಣಿಸಿದ್ದಾರೆ. ಕಣ್ಣೂರು ಜೈಲಿನಲ್ಲಿದ್ದ ಸಂದರ್ಭದಲ್ಲಿ ಕೊಡಿಯೇರಿ ಅವರಿಗೆ ಕಳುಹಿಸಿದ್ದ ಹಲವು ರಹಸ್ಯ ಮಿಸ್ಸಿವ್‌ಗಳ ಭಾಗವಾಗಿ ಆ ಪತ್ರಗಳು ರೂಪುಗೊಂಡಿವೆ.

ಕಾಂ. ವಿಜಯಕುಮಾರ್ ಅಂದಿನ ದಿನಗಳಲ್ಲಿ ನಡೆದ ಒಂದೆರಡು ಘಟನೆಗಳನ್ನು ಇತ್ತೀಚೆಗೆ ಹೇಳಿದ್ದಾರೆ.

ಕಾಮ್ರೇಡ್ ಕೊಡಿಯೇರಿ ಅವರು ಜೈಲು ಪಾಲಾದಾಗ ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿಯಾಗಿದ್ದರೆ, ಕಾಮ್ರೇಡ್ ವಿಜಯಕುಮಾರ್ ಜಂಟಿ ಕಾರ್ಯದರ್ಶಿಯಾಗಿದ್ದರು. ಕೊಡಿಯೇರಿ ಜೈಲು ಪಾಲಾದ ನಂತರ, ಅವರ ಅನುಪಸ್ಥಿತಿಯಲ್ಲಿ ವಿಜಯಕುಮಾರ್ ಅವರಿಗೆ ಪಕ್ಷದ ಕಾರ್ಯಗಳನ್ನು ನಿರ್ವಹಿಸಲು ಹಂಗಾಮಿ ಕಾರ್ಯದರ್ಶಿಯಾಗಿ ಜವಾಬ್ದಾರಿ ನೀಡಲಾಯಿತು.

ವಿಜಯಕುಮಾರ್ ಅವರು ತಿರುವನಂತಪುರಂ ಮತ್ತು ಕೊಡಿಯೇರಿಯವರು ಕಣ್ಣೂರು ಜೈಲಿನಲ್ಲಿದ್ದಾಗ, ಪಕ್ಷದ ಯಂತ್ರವನ್ನು ನಡೆಸಲು ಇಬ್ಬರೂ ನಿಯಮಿತವಾಗಿ ಪರಸ್ಪರ ಸಂಪರ್ಕದಲ್ಲಿರಬೇಕಾಗಿತ್ತು. ಇವರಿಬ್ಬರ ಪತ್ರಗಳು ಜೈಲು ಅಧಿಕಾರಿಗಳ ಕೈಗೆ ಹೋಗುವುದರಿಂದ ಪತ್ರಗಳನ್ನು ಬರೆಯುವುದು ಅಪಾಯದಿಂದ ಕೂಡಿತ್ತು. ಆದರೆ ಬೇರೆ ದಾರಿ ಇರಲಿಲ್ಲ. ಅಂತಿಮವಾಗಿ, ಅವರು ಪಕ್ಷದ ಗೌಪ್ಯತೆಯನ್ನು ರಕ್ಷಿಸಲು ಮತ್ತು ಅಧಿಕಾರಿಗಳನ್ನು ದಾರಿ ತಪ್ಪಿಸಲು ಕೋಡೆಡ್ ಪತ್ರಗಳ ಮೂಲಕ ಸಂವಹನ ನಡೆಸಲು ನಿರ್ಧರಿಸಿದರು.

ವಿಜಯಕುಮಾರ್ ಅವರು ಪತ್ರಗಳಲ್ಲಿ 'ಕಲ್ಯಾಣಂ' ಮತ್ತು 'ಸಂಸ್ಕಾರಿಕಂ' ಎಂಬ ಪದಗಳನ್ನು ಆಗಾಗ್ಗೆ ಉಲ್ಲೇಖಿಸಿದ್ದು ಜೈಲು ಅಧಿಕಾರಿಗಳನ್ನು ಗೊಂದಲಕ್ಕೀಡುಮಾಡಿತು. "ಕಲ್ಯಾಣ ಅಥವಾ ಮದುವೆ ಎಂದರೆ ಸಭೆಗಳು. ಸಂಸ್ಕಾರಿಕಂ ಎಂದರೆ ಉಡುಪಿನ ಸಾಮಾನ್ಯ ಸಭೆ. ಈ ಕೋಡೆಡ್ ಪದಗಳು ನಮ್ಮ ಸಂದೇಶವನ್ನು ತಿಳಿಸಲು ಮತ್ತು ಅಧಿಕಾರಿಗಳನ್ನು ಜಾಡು ಹಿಡಿದು ಎಸೆಯಲು ಉದ್ದೇಶಿಸಲಾಗಿತ್ತು" ಎಂದು ವಿಜಯಕುಮಾರ್ ಹೇಳುತ್ತಾರೆ.

ಕಾರ್ಮೋಡದಲ್ಲೊಂದು ಕೋಲ್ಮಿಂಚು-ವೈದ್ಯಕೀಯ ಗರ್ಭಪಾತ ಕುರಿತ ಸುಪ್ರೀಂ ಕೋರ್ಟ್-ಸ್ವಾಗತಾರ್ಹ ತೀರ್ಪು

ಪುಟ 9 ರಿಂದ

ಮಾಡಿಕೊಡಲಾಯಿತು. ಇದರಲ್ಲಿ ಬಹು ಮುಖ್ಯವಾದುದು ಭ್ರೂಣವು ಅಸಹಜ ರೀತಿಯ ಬೆಳವಣಿಗೆಯಲ್ಲಿದ್ದರೆ 20 ವಾರದ ನಂತರವೂ ಗರ್ಭಪಾತ ಮಾಡಲು ಅವಕಾಶ ಕಲ್ಪಿಸಲಾಯಿತು. ಜೊತೆಗೇ ಈ ಅವಧಿಯ ವಿಸ್ತರಣೆಯ ಅವಕಾಶವನ್ನು ಇತರ ವಿಭಾಗದ ಎಂದರೆ ಅತ್ಯಾಚಾರಕ್ಕೆ ಒಳಗಾಗಿ ಧರಿಸಿದ ಗರ್ಭ, ಗರ್ಭ ಧರಿಸಿದ ಮೇಲೆ ಬದಲಾಗಬಹುದಾದ ವೈವಾಹಿಕ ಸ್ಥಿತಿ ಎಂದರೆ ಗಂಡ ಸತ್ತರೆ, ವಿವಾಹ ವಿಚ್ಛೇದನ ಮುಂತಾಗಿ ಒಂಟಿ ಮಹಿಳೆಯಾಗಬೇಕಾಗಿ ಬಂದಾಗ, ವಿವಾಹಿತ ಮಹಿಳೆ ಗರ್ಭನಿರೋಧಕಗಳನ್ನು ಬಳಸಿಯೂ ಅವು ವಿಫಲವಾಗಿ ಗರ್ಭಿಣಿಯಾದರೆ, ಎಂದು ವಿಸ್ತರಿಸಲಾಯಿತು. ಇಲ್ಲಿದ್ದ ಸಮಸ್ಯೆಯೇ ಅತಿ ಮುಖ್ಯವಾಗಿ ಗಮನಿಸಬೇಕಾದ್ದು. ಅದೆಂದರೆ ಲೈಂಗಿಕ ಸಂಬಂಧ ಕೇವಲ ವಿವಾಹಿತರ ಮಧ್ಯೆ ಮಾತ್ರವೇ ನಡೆಯಬೇಕು ಅಥವಾ ನಡೆಯುತ್ತದೆ ಎಂಬ ಅಭಿಪ್ರಾಯ. ಆದರೆ ವಿವಾಹೇತರ ಸಂಬಂಧಗಳ ಕಾರಣದಿಂದಲೂ ಸಂಭವಿಸಬಹುದಾದ ಗರ್ಭಧಾರಣೆ, ಒಪ್ಪಿತ ಸಂಬಂಧದಲ್ಲಿ ಸಂಭವಿಸುವ ಗರ್ಭಧಾರಣೆಗಳ ಸಂದರ್ಭದಲ್ಲಿ ಅದನ್ನು ತೆಗೆದು ಹಾಕಲು ಅವಕಾಶವಿಲ್ಲದಿರುವುದು. ಈ ಅಂಶವನ್ನೇ ಪ್ರಶ್ನಿಸಿ ಸಹಮತದ ಸಂಬಂಧದಲ್ಲಿ ಧರಿಸಿದ ಗರ್ಭವನ್ನು ಆ ಸಂಬಂಧ ಮುರಿದ ಕಾರಣದಿಂದ ತೆಗೆಸಲು ಬಯಸಿದ್ದ 25ರ ಮಹಿಳೆಗೆ ಸಿಕ್ಕ ಜಯ ಸಂವಿಧಾನದ ಅಡಿಯಲ್ಲಿ ಘನತೆಯ,ಮತ್ತು ಸಂತಾನೋತ್ಪತ್ತಿ ಸ್ವಾಯತ್ತತೆಯನ್ನು ಬಯಸುವ ಎಲ್ಲರಿಗೂ ಸಿಕ್ಕ ಜಯವಾಗಿದೆ.

ಈ ತೀರ್ಪುಕೊಡುವಾಗ ಎಂ.ಟಿ.ಪಿ.ಕಾನೂನಿನ 3(ಬಿ) ಯ ಔಚಿತ್ಯವನ್ನೇ ಸುಪ್ರೀಂಕೋರ್ಟ್ ಪ್ರಶ್ನಿಸಿ ಅದು ಸಂವಿಧಾನದ ಮೂಲಭೂತ ಹಕ್ಕುಗಳನ್ನೇ ಉಲ್ಲಂಘಿಸುತ್ತದೆ ಎಂದೂ ಹೇಳಿದೆ.

ನಮ್ಮ ಪರಿಸರ ಮತ್ತು ಮಹಿಳೆಯರ ಪರಿಸ್ಥಿತಿ:

ನಮ್ಮ ಸುತ್ತಲಿನ ಜಗತ್ತು ಬಹಳ ಸುಲಭವಾಗಿ ಹೆಣ್ಣನ್ನು ಅಧೀನತೆಯ ಮನೋಭಾವಕ್ಕೆ ಒಗ್ಗಿಸುತ್ತದೆ. ಮತ್ತು ಪುರುಷ ಕೇಂದ್ರಿತ ಹಾಗೂ ಪುರುಷ ಪ್ರಮುಖ ಆಲೋಚನಾ ಕ್ರಮವನ್ನು ಇಡೀ ಸಮಾಜ ಒಪ್ಪಬೇಕೆಂದೂ ಒತ್ತಾಯಿಸುತ್ತದೆ. ಇದಕ್ಕೆ ಪುರಾಣಗಳಲ್ಲಿಯೂ ಉದಾಹರಣೆಗಳು ಸಿಗುತ್ತವೆ ಮತ್ತು ವಾಸ್ತವ ಬದುಕಿನಲ್ಲಂತೂ ಕಣ್ಣಿಗೆ ರಾಚುವಂತೆ ಕಾಣುತ್ತವೆ. ಉದಾಹರಣೆಗೆ ನಾವು ಮಹಾಭಾರತದ ಕಥೆಗಳನ್ನು ಕೇಳಿದ್ದೇವೆ. ದ್ರೌಪದಿ ಐದು ಗಂಡರ ಮಡದಿ. ಒಬ್ಬರಿಗಿಂತ ಒಬ್ಬರು ಶೂರ ಧೀರ ಪರಾಕ್ರಮಿಗಳು.ಆದರೆ ತಾವು ಸೋತಮೇಲೆ ಅವಳನ್ನೂ ಪಣಕ್ಕಿಟ್ಟು ದ್ಯೂತದಲ್ಲಿ ಸೋಲುತ್ತಾರೆ. ದ್ರೌಪದಿಯನ್ನು ತುಂಬಿದ ಸಭೆಗೆ ಎಳೆದು ತಂದು ಆಕೆಯ ಸೀರೆ ಸೆಳೆಯಲಾಗುತ್ತದೆ.ಹೆಣ್ಣೊಬ್ಬಳ ಘನತೆಯನ್ನು ಆಕೆಯ ದೇಹವನ್ನೇ ಗುರಿಯಾಗಿಸಿಕೊಂಡು ಗುರುತಿಸುವ ಒಂದು ಮನೋಭಾವ ಇದು. ಇಲ್ಲಿ ನನಗೆ ಯಾವತ್ತೂ ಎದ್ದ ಪ್ರಶ್ನೆ ಕೌರವರಿಗೆ ಪಾಂಡವರ ಮೇಲೆ ಹಗೆ ತೀರಿಸಿಕೊಳ್ಳಲಿದ್ದರೆ ಅವರನ್ನು ವಿವಸ್ತ್ರರನ್ನಾಗಿ ಸಭೆಯಲ್ಲಿ ನಿಲ್ಲಿಸಿ ಅವಮಾನಿಸಬಹುದಿತ್ತಲ್ಲ!!. ಅದು ಹಾಗಾಗಲು ಸಾಧ್ಯವೇ ಇಲ್ಲ. ಯಾಕೆಂದರೆ ಮಾನಾಪಮಾನಗಳನ್ನು ಕಾಪಾಡುವುದು ಹೆಣ್ಣಿನ ಮೂಲಕ ಮಾತ್ರ. ಇನ್ನು ಕಥೆ ಮುಂದುವರೆದು ಸೆಳೆಯುತ್ತಿದ್ದ ಸೀರೆ, ತಾನು ವಿವಸ್ತ್ರಳಾಗಿ ತುಂಬಿದ ಸಭೆಯಲ್ಲಿ ನಿಲ್ಲಬೇಕು ಎಂಬ ಸ್ಥಿತಿಯಲ್ಲಿ ಕೃಷ್ಣನ ಮೊರೆ ಹೋಗುತ್ತಾಳೆ. ಅಲ್ಲಿಯೂ ದುಶ್ಯಾಸನ ಸೆಳೆಯುತ್ತಿದ್ದ ಸೀರೆಯನ್ನು ತನ್ನ ಶಕ್ತಿ ಮೀರಿ ತಡೆಯಲು ಹಿಡಿದ ಕೈ ಸಡಿಲಿಸಿ ಎರಡನ್ನೂ ಮೇಲೆತ್ತಿ ಕೃಷ್ಣಾ ಎಂದೊರಲಿದಾಗ ಕೃಷ್ಣ ಅಕ್ಷಯ ವಸ್ತ್ರವನ್ನು ದಯಪಾಲಿಸಿದ ಎಂದು ಹೇಳುತ್ತಾರೆ. ಇಲ್ಲಿ ಕೂಡಾ ?ದೇವರೆಂಬ ಪಟ್ಟ ಕಟ್ಟಿಕೊಂಡ ಆ ಕೃಷ್ಣ.. ಜಗನ್ನಿಯಾಮಕನೆನಿಸಿಕೊಂಡವ? ಹೆಣ್ಣೊಬ್ಬಳ ಮೇಲೆ ನಡೆಯುವ ಆಕ್ರಮಣಕ್ಕೆ ತಾನಾಗಿಯೇ ಸಹಾಯವಾಗಿ ಒದಗಿ ಬರಲಿಲ್ಲ. ಬದಲಿಗೆ ಆಕ್ರಂದನ, ನೀನಲ್ಲದೇ ಅನ್ಯರಿಲ್ಲ ನನ್ನ ಕಾಪಾಡುವವರು ಎಂಬ ಅಸಹಾಯಕ ಮೊರೆಗಾಗಿ ಕಾದನಂತೆ. ಅಲ್ಲವೇ ಇದೇ ಪುರುಷ ಪೌರುಷದ ಹೆಣ್ಣಿನ ಅಧೀನತೆಯ ಮಾದರಿ??

ಎರಗಬಹುದಾದ ಅಪಾಯಗಳು-ವಹಿಸಬೇಕಾದ ಕಾಳಜಿಗಳು:

ಇದೇ ಸಂದರ್ಭದಲ್ಲಿ ಕಾಳಜಿ ವಹಿಸಬೇಕಾದ ಕೆಲವು ಅಗತ್ಯಗಳಿವೆ. ಅವೆಂದರೆ ವೈದ್ಯಕೀಯ ಗರ್ಭಪಾತ ಕಾನೂನು ಬದ್ಧವೆಂಬುದರ ನೆರಳಿನಲ್ಲಿಯೇ ಸ್ತ್ರೀ ಭ್ರೂಣ ಹತ್ಯೆ ವ್ಯಾಪಕವಾಗಿ ಬಿಡುವ ಸಂದರ್ಭಗಳು.1971 ರ ಕಾನೂನಿನ ನೆರಳಲ್ಲಿ ಸಂಭವಿಸಿದ ಲಿಂಗ ಪತ್ತೆ ಭ್ರೂಣ ಹತ್ಯೆಗಳ ಕಾರಣದಿಂದ ತೀವ್ರವಾಗಿ ಕುಸಿದ ಲಿಂಗಾನುಪಾತವನ್ನು ಗಮನಿಸಿಯೇ ಗರ್ಭಪಾತದ ಕಾಯ್ದೆಗೆ ಹಲವು ಕಠಿಣ ಕ್ರಮಗಳನ್ನೂ ಸೇರಿಸಲಾಗಿತ್ತು ಎಂಬುದನ್ನು ಮರೆಯಲಾಗದು. ಮತ್ತು ಆ ಕಠಿಣ ಕ್ರಮಗಳ ಕಾರಣದಿಂದ ಯಾವುದೇ ಕಾರಣಕ್ಕೆ ಗರ್ಭಪಾತದ ಅಗತ್ಯವಿದ್ದವರೂ ಅನಿವಾರ್ಯವಾಗಿ ನ್ಯಾಯಾಲಯದ ಮೊರೆ ಹೋಗುವ ವಿಪರೀತ ಸ್ಥಿತಿಯೂ ನಿರ್ಮಾಣವಾಗಿದ್ದೂ ಅಷ್ಟೇ ಸತ್ಯ.

ಹಾಗಿದ್ದೂ ಲಿಂಗಾಧಾರಿತ ಗರ್ಭಪಾತಗಳನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಪಿ.ಸಿ.& ಪಿ.ಎನ್.ಡಿ.ಟಿ ಕಾನೂನು ಸಮರ್ಪಕ ಜಾರಿಯಾಗುವಂತೆ ಗಮನ ವಹಿಸಬೇಕೇ ಹೊರತೂ ವೈದ್ಯಕೀಯ ಗರ್ಭಪಾತದ ಅವಕಾಶವನ್ನು ಕ್ಷೀಣಗೊಳಿಸುವುದಾಗಬಾರದು. ಮತ್ತು ಈ ತೀರ್ಪು ಮಹಿಳೆಯರ ಲೈಂಗಿಕತೆಯ ಸ್ವಾತಂತ್ರ್ಯವನ್ನೂ ಎತ್ತಿ ಹಿಡಿದಿದ್ದನ್ನು ಗುರುತಿಸಬೇಕು. ಮಹಿಳೆಯೊಬ್ಬಳು ವಿವಾಹಿತಳಲ್ಲ ಎಂಬ ಕಾರಣಕ್ಕೆ ಸಹಜ ದೈಹಿಕ ಕಾಮನೆಗಳನ್ನು ಹೊಂದಬಾರದು ಎಂಬುದು ಪ್ರಕೃತಿಗೆ ವಿರುದ್ಧವಾಗಿರುವುದು. ಹಾಗೆಂದ ಮಾತ್ರಕ್ಕೆ ಸ್ವಚ್ಛಂದ ಬದುಕಿನ ರಹದಾರಿ ಎಂದು ಭಾವಿಸದೇ ಮನುಷ್ಯ ಸಹಜವಾದ ಕಾಮ,ರಾಗ ದ್ವೇಷಗಳು ಸ್ತ್ರೀ ಪುರುಷರಲ್ಲಿ ಸಹಜವಾಗಿಯೇ ಇರುವುದನ್ನು ದೇಹ ವಿಜ್ಞಾನದ ಭಾಷೆಯಲ್ಲಿ ಗುರುತಿಸಬೇಕು. ಈ ಸೂಕ್ಷ್ಮ ತಿಳುವಳಿಕೆಯೂ ಸಮಾಜದಲ್ಲಿ ಎಲ್ಲರಿಗೂ ಮೂಡಬೇಕು. ಅದಕ್ಕೆ ಶೀಲದ ಪಟ್ಟ ಕಟ್ಟಬಾರದು ಎಂಬ ಸೂಕ್ಷ್ಮ ಸೂಚನೆಯನ್ನು ಸುಪ್ರೀಂ ಕೋರ್ಟ್ ತನ್ನ ಈ ತೀರ್ಪಿನ ಮೂಲಕ ಕೊಟ್ಟಿದೆ ಎನ್ನಬಹುದು. ಈ ತೀರ್ಪನ್ನು ಸಹಜ ಮಾನವ ಸಂಬಂಧ ಮತ್ತು ಬದುಕನ್ನು ಗೌರವಿಸುವ ಎಲ್ಲರೂ ಸ್ವಾಗತಿಸಿದ್ದಾರೆ. ದೇಶದ ಅತಿ ದೊಡ್ಡ ಮಹಿಳಾ ಸಂಘಟನೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಈಗಾಗಲೇ ಸುಪ್ರೀಂ ಕೋರ್ಟಿನಲ್ಲಿ ದೆಹಲಿ ಹೈ ಕೋರ್ಟ್ ನಲ್ಲಿ ವಿವಾಹ ಸಂಬಂಧದಲ್ಲಿ ಸಂಭವಿಸುವ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಬಂದ ವಿಭಜಿತ ತೀರ್ಪಿನ ವಿಷಯದಲ್ಲಿ ವಿವಾಹ ಸಂಬಂಧದೊಳಗಿನ ಅಸಮ್ಮತಿಯ ಲೈಂಗಿಕ ಕ್ರಿಯೆಯನ್ನು ಅತ್ಯಾಚಾರವೆಂದು ಪರಿಗಣಿಸಬೇಕೆಂದು ಮೇಲ್ಮನವಿ ಸಲ್ಲಿಸಿದೆ ಎಂಬುದನ್ನಿಲ್ಲಿ ನೆನಪಿಸಿಕೊಳ್ಳೋಣ. 90 ರ ದಶಕದಿಂದಲೇ ಜನವಾದಿ ಈ ವಿಷಯ ಕುರಿತು ಒತ್ತಾಯ ಮಾಡುತ್ತಲೇ ಬಂದಿದ್ದು ಈಗ ಬಂದಿರುವ ತೀರ್ಪು ಸ್ವಾಗತಾರ್ಹ ತೀರ್ಪು ಎಂಬುದರಲ್ಲಿ ಸಂದೇಹವೇ ಇಲ್ಲ.

ರಾಜಕೀಯ ಪಕ್ಷಗಳ ಹಕ್ಕುಗಳ ಉಲ್ಲಂಘನೆ

ಪ್ರಕಾಶ್ ಕಾರತ್

ಚುನಾವಣಾ ಪ್ರಣಾಳಿಕೆಗಳಲ್ಲಿ ನೀಡಿದ ಆಶ್ವಾಸನೆಗಳ ಆರ್ಥಿಕ ಪರಿಣಾಮಗಳ ಕುರಿತ ವಿಸ್ತ್ರತ ಮಾಹಿತಿಯನ್ನು ರಾಜಕೀಯ ಪಕ್ಷಗಳು ತನಗೆ ಸಲ್ಲಿಸಬೇಕೆಂದು ಭಾರತ ಚುನಾವಣಾ ಆಯೋಗ ಹೇಳಿದೆ. ಇಂಥ ಆಶ್ವಾಸನೆಗಳಿಂದ ರಾಜ್ಯಗಳು ಮತ್ತು ಕೇಂದ್ರ ಸರ್ಕಾರದ ಆರ್ಥಿಕ ಸುಸ್ಥಿರತೆ ಮೇಲೆ ಬೀರುವ ಪರಿಣಾಮಗಳ ಬಗ್ಗೆಯೂ ಮಾಹಿತಿ ಕೊಡಬೇಕೆಂಬುದು ಆಯೋಗದ ಸೂಚನೆಯಾಗಿದೆ. ಇದಕ್ಕಾಗಿ, ಮಾದರಿ ನೀತಿ ಸಂಹಿತೆಯನ್ನು ತಿದ್ದುಪಡಿ ಮಾಡುವ ಪ್ರಸ್ತಾಪನೆಯನ್ನು ಅದು ಮಂಡಿಸಿದೆ. ಪಕ್ಷಗಳು ನೀಡುವ ಆಶ್ವಾಸನೆಗಳು ಮತ್ತು ಅದರ ಆರ್ಥಿಕ ಪರಿಣಾಮಗಳ ಕುರಿತು ಎರಡು ಭಾಗಗಳ ಅರ್ಜಿ ನಮೂನೆಗಳನ್ನು ತುಂಬಬೇಕೆನ್ನುವುದೇ ಆ ಪ್ರಸ್ತಾಪನೆಯಾಗಿದೆ.

ಇದು ಆಯೋಗದ ಅಸಾಧಾರಣ ಹಾಗೂ ತೀರಾ ವಿಚಿತ್ರ ಪ್ರಸ್ತಾಪವಾಗಿದೆ. "ಆಶ್ವಾಸನೆಗಳ ಸ್ವರೂಪದ ಬಗ್ಗೆ ಆಯೋಗಕ್ಕೆ ನಂಬಿಕೆಯಿಲ್ಲವಾದರೂ (ಅಗ್ನಾಸ್ಟಿಕ್) ಅಂಥ ಆಶ್ವಾಸನೆಗಳು ಬೀರಬಹುದಾದ ಹಣಕಾಸಿನ ಪರಿಣಾಮಗಳ ಬಗ್ಗೆ ಆರೋಗ್ಯಕರ ಚರ್ಚೆ ಆಗಬೇಕೆಂಬ ಉದ್ದೇಶದಿಂದ ಇಂಥ ಆಶ್ವಾಸನೆಗಳನ್ನು ಬಹಿರಂಗಪಡಿಸಲು ನಿಯಮ ರೂಪಿಸುವುದು ಅಗತ್ಯ. ತಕ್ಷಣದಲ್ಲಿ ಹಾಗೂ ಭವಿಷ್ಯದಲ್ಲಿ ದೀರ್ಘಕಾಲೀನ ಆರ್ಥಿಕ ಸುಸ್ಥಿರತೆ ಮೇಲೆ ಪರಿಣಾಮ ಬೀರುವ ವಿಚಾರದಲ್ಲಿ ಇದು ಅಗತ್ಯವಾಗಿದ್ದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗೆ ಇದು ಅನಿವಾರ್ಯ" ಎಂದು ಆಯೋಗ ತನ್ನ ಈ ಹೆಜ್ಜೆಗೆ ಕಾರಣವೇನೆಂದು ಸಮರ್ಥನೆ ನೀಡಿದೆ.

ಇಂಥ ವಿವರಣೆಗಳಿಗೆ ಯಾವುದೇ ಸಮರ್ಥನೆಯಿರಲಾರದು. ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳಿಗೆ ಉಚಿತ ಶಾಲಾ ಯುನಿಫಾರ್ಮ್ ನೀಡಬೇಕೆಂದು ರಾಜಕೀಯ ಪಕ್ಷವೊಂದು ನಿರ್ಧರಿಸಿದರೆ ಅದು ಎಷ್ಟು ಮೌಲ್ಯಯುತ ಎನ್ನುವುದನ್ನು ಚುನಾವಣೆಗಳಲ್ಲಿ ಮತ ಹಾಕುವ ಜನರು ನಿರ್ಧರಿಸಬೇಕು. ಸಮವಸ್ತ್ರಕ್ಕೆ ಎಷ್ಟು ವೆಚ್ಚವಾಗುತ್ತದೆ ಹಾಗೂ ಹಣಕಾಸನ್ನು ಹೇಗೆ ಹೊಂದಿಸುವುದು ಎನ್ನುವುದನ್ನು ಹೊಸದಾಗಿ ಆಯ್ಕೆಯಾಗುವ ಸರ್ಕಾರ ನಿರ್ಧರಿಸಬೇಕು. ಹಾಗಿದ್ದಲ್ಲಿ ಚುನಾವಣೆ ಆಯೋಗಕ್ಕೆ ಇಲ್ಲೇನು ಕೆಲಸ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆಯೋಗದ ಪ್ರಕಾರ, ಅರ್ಜಿ ನಮೂನೆಯ ಎರಡನೇ ಭಾಗದಲ್ಲಿ ಕೆಲವು ಆರ್ಥಿಕ ಮಾಹಿತಿಗಳನ್ನು ಆಯಾ ರಾಜ್ಯ/ಕೇಂದ್ರ ಸರ್ಕಾರದ ಈಚಿನ ಬಜೆಟ್ ಅಂದಾಜು/ಪರಿಷ್ಕೃತ ಅಂದಾಜಿನ ಆಧಾರದಲ್ಲಿ ಪೂರ್ವಭರ್ತಿ (ಪ್ರೀಫಿಲ್) ಮಾಡಲಾಗಿರುತ್ತದೆ. ರಾಜಕೀಯ ಪಕ್ಷಗಳು ಅರ್ಜಿ ನಮೂನೆಯ ಬಲಭಾಗವನ್ನು ತುಂಬಿ ಈಚಿನ ಬಜೆಟ್ ಅಥವಾ ಪರಿಷ್ಕೃತ ಬಜೆಟ್ ಅಂದಾಜಿಗೆ ಇರುವ ಅಂತರವನ್ನು ಹೇಗೆ ತುಂಬಿಸಬಹುದು ಎಂದು ತಿಳಿಸಬೇಕು. ಇಂಥದ್ದೊಂದು ಕ್ರಮಕ್ಕೆ ಅಧಿಕೃತ ಬಜೆಟ್ ರೂಪಿಸುವ ಆರ್ಥಿಕ ತಜ್ಞರ ತಂಡದ ನೆರವೇ ಬೇಕಾಗುತ್ತದೆ.

ಅದಕ್ಕಿಂತ ಹೆಚ್ಚಾಗಿ, ಭರವಸೆಗಳನ್ನು ಈಡೇರಿಸಲು ಅಗತ್ಯವಾದ ಹೆಚ್ಚುವರಿ ಸಂಪನ್ಮೂಲದ ಪರಿಣಾಮವನ್ನು ಅಂದಾಜು ಮಾಡುವ ಆಯೋಗದ ಬಯಕೆಯು ಅಪಾಯಕಾರಿ ಕ್ಷೇತ್ರದ ಪ್ರವೇಶವಾಗುತ್ತದೆ. ಹಣಕಾಸು ಸಂರಕ್ಷಣೆ ಮತ್ತು ಆರ್ಥಿಕ ಸುಸ್ಥಿರತೆ ಎಂಬ ನವ-ಉದಾರವಾದಿ ನಂಬಿಕೆಗಳನ್ನು ಆಯೋಗ ಅಂಗೀಕರಿಸಿದಂತೆ ಕಾಣುತ್ತದೆ. ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ಮ್ಯಾನೇಜ್‌ಮೆಂಟ್ ಕಾನೂನನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸಿದೆ. ಆ ಕಾನೂನು ಆರ್ಥಿಕ ಕೊರತೆ ಮಿತಿಯನ್ನು ಜಿಡಿಪಿಯ ಶೇಕಡ 3ಕ್ಕೆ ನಿಗದಿಪಡಿಸಿದೆ. ಆರ್ಥಿಕ ಸ್ಥಿರತೆ ಎಂದರೇನೆಂಬುದನ್ನು ತಿಳಿಸಲು ಚುನಾವಣೆ ಆಯೋಗ ತೀರ್ಪುಗಾರ (ಆರ್ಬಿಟರ್) ಆಗಿ ಕಾರ್ಯ ನಿರ್ವಹಿಸುತ್ತದೆಯೇ? ಚುನಾವಣೆ ಆಯೋಗದ ಪ್ರಸ್ತುತ ಕ್ರಮ ತೀರಾ ಆಶ್ಚರ್ಯಕರವಾಗಿದೆ. ಯಾಕೆಂದರೆ ಇದೇ ಚುನಾವಣೆ ಆಯೋಗ ಕೆಲವೇ ತಿಂಗಳ ಹಿಂದೆ; ಅಂದರೆ ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ಹೀಗೆ ಹೇಳಿತ್ತು: 'ಚುನಾವಣೆ ವೇಳೆ ಅಥವಾ ನಂತರ ಯಾವುದೇ ಉಚಿತ ಉಡುಗೊರೆ ನೀಡುವ/ವಿತರಿಸುವ ಆಶ್ವಾಸನೆಯು ಆಯಾ ಪಕ್ಷದ ನೀತಿ ನಿರ್ಧಾರಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದು ಹೇಳಲಾಗಿದೆ. ಇಂಥ ನೀತಿಗಳು ಆರ್ಥಿಕವಾಗಿ ಕಾರ್ಯಸಾಧುವಾದರೆ ಅಥವಾ ರಾಜ್ಯದ ಹಣಕಾಸು ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವಂತಿದ್ದರೆ ರಾಜ್ಯದ ಮತದಾರರು ಅದನ್ನು ಪರಿಶೀಲಿಸಬಹುದು ಮತ್ತು ನಿರ್ಧಾರ ಕೈಗೊಳ್ಳಬಹುದು'.

ರಾಜ್ಯದ ನೀತಿಗಳು ಮತ್ತು ಗೆದ್ದ ಪಕ್ಷ ಸರಕಾರ ರಚಿಸಿದ ನಂತರ ಕೈಗೊಳ್ಳುವ ನಿರ್ಧಾರಗಳನ್ನು ಚುನಾವಣೆ ಆಯೋಗ ನಿಯಂತ್ರಿಸಲಾಗದು ಎಂದೂ ಆಯೋಗ ಸುಪ್ರೀಂ ಕೋರ್ಟ್‌ಗೆ ಹೇಳಿತ್ತು. ಸಂಬಂಧಪಟ್ಟಂತೆ ಯಾವುದೇ ಕಾನೂನು ಇಲ್ಲದೆ ಹಾಗೆ ಮಾಡುವುದು ಅಧಿಕಾರವನ್ನು ಮೀರಿ ವರ್ತಿಸಿದಂತಾಗುತ್ತದೆ ಎಂದು ಆಯೋಗ ಅಭಿಪ್ರಾಯ ಪಟ್ಟಿತ್ತು.

ಹಾಗಿರುವಾಗ ಕೆಲವೇ ತಿಂಗಳ ಅಂತರದಲ್ಲಿ ಆಯೋಗ ಈ ಪರಿಯಾಗಿ ಮನಸ್ಸು ಬದಲಿಸಿದ್ದು ಯಾಕೆ? ಪ್ರಧಾನಿ ಮೋದಿ ಜುಲೈ ಭಾಷಣವೊಂದರಲ್ಲಿ 'ರೇವ್ಡಿ' ಸಂಸ್ಕೃತಿಯನ್ನು ಟೀಕಿಸಿದ್ದು ಹಾಗೂ ಅದಕ್ಕೆ ಪ್ರತಿಪಕ್ಷಗಳನ್ನು ಹೊಣೆಯಾಗಿ ಮಾಡಿದ್ದು ಚುನಾವಣೆ ಆಯೋಗ ತನ್ನ ಹಿಂದಿನ ನಿಲುವನ್ನು ಬದಲಾಯಿಸಲು ಕಾರಣವಾಯಿತೇ? 'ಉಚಿತ ಕೊಡುಗೆಗಳು' (ಫ್ರೀಬೀ) ಬಗ್ಗೆ ಹುಟ್ಟು ಹಾಕಿದ ಚರ್ಚೆಯು ಆಹಾರ, ರಸಗೊಬ್ಬರ ಮತ್ತು ವಿದ್ಯುಚ್ಛಕ್ತಿಗೆ ನೀಡುವ ಸಬ್ಸಿಡಿ ಮತ್ತಿತರ ಸಬ್ಸಿಡಿಗಳು ಸಾರ್ವಜನಿಕ ಸಂಪನ್ಮೂಲದ ಅಪವ್ಯಯ ಹಾಗೂ ಅವು ಫ್ರೀಬೀಗಳು ಎಂಬ ನವ-ಉದಾರವಾದಿ ಆಕ್ಷೇಪಗಳನ್ನೇ ಧ್ವನಿಸುತ್ತದೆ. ದುಡಿಯುವ ವರ್ಗಕ್ಕೆ ವರ್ಗಾಯಿಸುವುದನ್ನು ಬೆಳವಣಿಗೆಗಾಗಿ ದೊಡ್ಡ ಬಂಡವಾಳಶಾಹಿಗಳಿಗೆ ವರ್ಗಾಯಿಸಬೇಕೆನ್ನುವುದು ಈಗಿನ ನವ-ಉದಾರವಾದಿ ವಿವೇಕವಾಗಿದೆ!

ಆ ಕಾರಣಕ್ಕಾಗಿಯೇ 'ಫ್ರೀಬೀಗಳ' ವಿರುದ್ಧದ ಬಿಜೆಪಿ ನಾಯಕರೊಬ್ಬರ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆಗೆ ಕೈಗೆತ್ತಿಕೊಂಡಾಗ, ರಾಜಕೀಯ ಪಕ್ಷಗಳು ಕೊಡುವ ಭರವಸೆಗಳು ಫ್ರೀಬೀಗಳೇ ಅಲ್ಲವೇ ಎಂಬುದು ಸುಪ್ರೀಂ ಕೋರ್ಟ್ ಪರಿಶೀಲಿಸಬೇಕಾದ ಹಾಗೂ ನಿರ್ಧರಿಸಬೇಕಾದ ವಿಚಾರವಲ್ಲ ಎಂದು ಸಿಪಿಐ (ಎಂ) ಸ್ಪಷ್ಟವಾಗಿ ಅಭಿಪ್ರಾಯಪಟ್ಟಿತ್ತು. ಪಕ್ಷದ ಅಭಿಪ್ರಾಯ ಹೀಗಿತ್ತು: ಈ ವಿಚಾರವು ಸಂಪೂರ್ಣವಾಗಿ ರಾಜಕೀಯ ಪಕ್ಷಗಳಿಗೆ ಸೇರಿದ್ದಾಗಿದೆ. ಪ್ರಜಾಪ್ರಭುತ್ವದಲ್ಲಿ, ಚುನಾವಣಾ ಪ್ರಣಾಳಿಕೆಯಲ್ಲಿ ತಮ್ಮ ವೇದಿಕೆಯನ್ನು ನಿಗದಿಪಡಿಸಲು ಹಾಗೂ ಆಶ್ವಾಸನೆ ನೀಡಲು ರಾಜಕೀಯ ಪಕ್ಷಗಳು ಸ್ವತಂತ್ರವಾಗಿರುತ್ತವೆ. ಅವುಗಳನ್ನು ಪರಿಶೀಲಿಸಿ ಅಂಗೀಕರಿಸುವುದು ಅಥವಾ ತಿರಸ್ಕರಿಸುವುದು ಜನರಿಗೆ ಬಿಟ್ಟಿದ್ದು. ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ತಾನು ನೀಡಿದ್ದ ಆಶ್ವಾಸನೆಗಳನ್ನು ಅನುಷ್ಠಾನಗೊಳಿಸುವುದು ಚುನಾವಣೆಯಲ್ಲಿ ಜಯಿಸಿದ ರಾಜಕೀಯ ಪಕ್ಷದ ಅಧಿಕಾರವಾಗಿದೆ.



ಸುಬ್ರಮಣಿಯಂ ಬಾಲಾಜಿ ಕೇಸ್ ಸಂಬಂಧ 2013ರಲ್ಲಿ ಎರಡು ಸದಸ್ಯರ ನ್ಯಾಯ ಪೀಠ ನೀಡಿದ್ದ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯೊಂದನ್ನು ಅಂದಿನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ನೇತೃತ್ವದ ಪೀಠವೊಂದು ಆಲಿಸಿತ್ತು. 2022 ಆಗಸ್ಟ್ 26 ರಂದು ತಮ್ಮ ಅಧಿಕಾರಾವಧಿಯ ಕೊನೆ ದಿನದಂದು ಸಿಜೆಐ ರಮಣ, ಮೂವರು ಸದಸ್ಯರು ವಿಚಾರಣೆ ನಡೆಸುತ್ತಿರುವ ಪ್ರಕರಣದ ಬಗ್ಗೆ ನೂತನ ಸಿಜೆಐ ನಿರ್ಧರಿಸಬೇಕೆಂದು ನಿರ್ದೇಶಿಸಿದ್ದರು. ಹಾಗಾಗಿ, 'ಫ್ರೀಬೀಗಳ' ಚುನಾವಣಾ ಆಶ್ವಾಸನೆಯ ವಿಚಾರ ಇನ್ನೂ ಸುಪ್ರೀಂ ಕೋರ್ಟ್ ಮುಂದೆ ಬಾಕಿಯಿದೆ.

ಆದ್ದರಿಂದ ಚುನಾವಣಾ ಆಯೋಗವು ಮಾದರಿ ನೀತಿ ಸಂಹಿತೆಯಲ್ಲಿ ತರಾತುರಿಯಿಂದ ಹೊಸ ಮಾರ್ಗಸೂಚಿಗಳನ್ನು ಸೇರಿಸುವುದು ಒಂದು ಒಳಸಂಚಿನಂತೆ ಕಾಣುತ್ತದೆ. ಅದು ವಿವಿಧ ರಾಜ್ಯ ಸರಕಾರಗಳ ಕಲ್ಯಾಣ ಯೋಜನೆಗಳು ಮತ್ತು ನೇರ ನಗದು ವರ್ಗಾವಣೆ ವಿರುದ್ಧ ಟಾರ್ಗೆಟ್ ಮಾಡಿದೆಯೇ? ಕೇಂದ್ರ ಸರಕಾರದ ಎಲ್ಲ ಕಲ್ಯಾಣ ಯೋಜನೆಗಳು ನ್ಯಾಯಸಮ್ಮತ ಎನ್ನುವುದು ಪ್ರಧಾನಿಯ ಅಭಿಪ್ರಾಯವಾಗಿದೆ. ಆದರೆ, ಪ್ರತಿಪಕ್ಷಗಳ ಆಡಳಿತವಿರುವ ರಾಜ್ಯಗಳ ಅದೇ ಬಗೆಯ ಕಲ್ಯಾಣ ಯೋಜನೆಗಳನ್ನು 'ಫ್ರೀಬೀ' ಎಂದವರು ಬ್ರಾಂಡ್ ಮಾಡುತ್ತಾರೆ. ಚುನಾವಣಾ ಆಯೋಗದ ಇತ್ತೀಚಿನ ಕ್ರಮವು ಪ್ರಧಾನ ಮಂತ್ರಿಯ ಅಭಿಪ್ರಾಯದ ಅನುಮೋದನೆಯಂತಿದೆ.

ರಾಜಕೀಯ ಪಕ್ಷಗಳ ಚುನಾವಣಾ ಆಶ್ವಾಸನೆಗಳ ಹಣಕಾಸು ಪರಿಣಾಮಗಳ ಬಗ್ಗೆ ಚುನಾವಣೆ ಆಯೋಗದ ಮಧ್ಯಪ್ರವೇಶವು ಜನರ ಪ್ರಮುಖ ಸಮಸ್ಯೆಗಳನ್ನು ಎದುರಿಸಿ ಅವುಗಳಿಗೆ ಪ್ರಜಾಸತ್ತಾತ್ಮಕವಾಗಿ ಪ್ರತಿಸ್ಪಂದಿಸುವುದಕ್ಕೆ ಸಂಬಂಧಿಸಿ ರಾಜಕೀಯ ಪಕ್ಷಗಳ ಹಕ್ಕಿನ ಗಂಭೀರ ಉಲ್ಲಂಘನೆಯಾಗಿದೆ. ಚುನಾವಣೆ ಆಯೋಗದ ಈ ಈ ಕ್ರಮವನ್ನು ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ ವಿರೋಧಿಸಬೇಕು.

ಅನು: ವಿಶ್ವ

ರಾಜಕೀಯ ಪಕ್ಷಗಳ ಹಕ್ಕುಗಳಲ್ಲಿ ಹಸ್ತಕ್ಷೇಪ ಬೇಡ– ಸಿಪಿಐ(ಎಂ) ಪೊಲಿಟ್‌ಬ್ಯುರೊ

"ತನ್ನದೇ ಅಫಿಡವಿಟ್‌ಗೆ ವ್ಯತಿರಿಕ್ತವಾದ ಚುನಾವಣಾ ಆಯೋಗದ ಅನಗತ್ಯ ನಡೆ ಈಗೇಕೆ?"

ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳಿಗೆ ಹಣಕಾಸು ಒದಗಿಸುವ ಯೋಜನೆ ಮತ್ತು ಇದು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಅಥವಾ ಕೇಂದ್ರ ಸರ್ಕಾರದ ಆರ್ಥಿಕ ಪರಿಸ್ಥಿತಿಯ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಬಹಿರಂಗಪಡಿಸುವುದಕ್ಕೆ ಮಾರ್ಗದರ್ಶನ ನೀಡಲು ಮಾದರಿ ನೀತಿ ಸಂಹಿತೆಯನ್ನು ತಿದ್ದುಪಡಿ ಮಾಡುವ ಚುನಾವಣಾ ಆಯೋಗದ ಪ್ರಸ್ತಾಪವು ಸಂಪೂರ್ಣವಾಗಿ ಅನಗತ್ಯ ಕ್ರಮವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಂವಿಧಾನವು ಚುನಾವಣಾ ಆಯೋಗಕ್ಕೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸುವ ಆದೇಶವನ್ನು ನೀಡಿದೆ. ರಾಜಕೀಯ ಪಕ್ಷಗಳು ಜನರಿಗೆ ನೀಡುವ ಆಶ್ವಾಸನೆಗಳಲ್ಲಿನ ತಮ್ಮ ನೀತಿ ನಿರೂಪಣೆಗಳು ಮತ್ತು ಕಲ್ಯಾಣ ಕ್ರಮಗಳನ್ನು ನಿಯಂತ್ರಿಸುವುದು ಚುನಾವಣಾ ಆಯೋಗದ ಕೆಲಸವಲ್ಲ. ಇದು ಒಂದು ಪ್ರಜಾಪ್ರಭುತ್ವದಲ್ಲಿ ಕೇವಲ ರಾಜಕೀಯ ಪಕ್ಷಗಳ ವ್ಯಾಪ್ತಿಗೆ ಮಾತ್ರವೇ ಸೇರಿರುವ ಕ್ಷೇತ್ರ ಎಂದು ಪೊಲಿಟ್‌ಬ್ಯುರೊ ನೆನಪಿಸಿದೆ.

ಚುನಾವಣಾ ಆಯೋಗವು ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ, ಆಯೋಗವು ರಾಜಕೀಯ ಪಕ್ಷಗಳ ನೀತಿ ನಿರ್ಧಾರಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲ ಮತ್ತು ಅದು ಅಧಿಕಾರಗಳ ಒಂದು ಅತಿಕ್ರಮಣವಾಗುತ್ತದೆ ಎಂದು ಹೇಳಿತ್ತು. ಇದೀಗ ಚುನಾವಣಾ ಆಯೋಗ ವ್ಯತಿರಿಕ್ತ ನಿಲುವು ತಳೆದಿರುವುದು ಅಚ್ಚರಿ ಮೂಡಿಸಿದೆ. ಇದು ಈ ವಿಷಯದಲ್ಲಿ ಕಾರ್ಯಾಂಗ ಹಾಕುತ್ತಿರುವ ಒತ್ತಡದಿಂದಾಗಿಯೇನು ಎಂದು ಪೊಲಿಟ್‌ಬ್ಯುರೊ ಖಾರವಾಗಿ ಪ್ರಶ್ನಿಸಿದೆ.

ಜನಗಳ ಕಾಳಜಿಗಳನ್ನು ಕೈಗೆತ್ತಿಕೊಳ್ಳುವ, ಅವರ ಸಮಸ್ಯೆಗಳನ್ನು ನೀಗಿಸಲು ನೀತಿ ಕ್ರಮಗಳನ್ನು ಮುಂದಿಡುವ ರಾಜಕೀಯ ಪಕ್ಷಗಳ ಹಕ್ಕನ್ನು ಮಿತಿಗೊಳಿಸುವ ಅಥವಾ ನಿಯಂತ್ರಿಸುವ ಯಾವುದೇ ಪ್ರಯತ್ನವನ್ನು ತಮ್ಮ ಪಕ್ಷ ಬಲವಾಗಿ ವಿರೋಧಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.



ಲಾಲ್ ಸಲಾಮ್ ಕಾಮ್ರೇಡ್ ಕೊಡಿಯೇರಿ

ಸೀತಾರಾಂ ಯೆಚೂರಿ

ಪಾಲಿಟ್ ಬ್ಯೂರೊ ಸದಸ್ಯ ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಇನ್ನಿಲ್ಲ. ಮೂರು ವರ್ಷಗಳ ಕಾಲ ಧೈರ್ಯದಿಂದ ಕ್ಯಾನ್ಸರ್ ವಿರುದ್ಧ ಹೋರಾಡಿದರು. ಇದರ ಹೊರತಾಗಿಯೂ, ಈ ಅವಧಿಯಲ್ಲಿ ಅವರು ಕೇರಳದಲ್ಲಿ ರಾಜ್ಯ ಕಾರ್ಯದರ್ಶಿಯಾಗಿ ವಿಧಾನ ಸಭಾ ಚುನಾವಣೆಯಲ್ಲಿ ಗಮನಾರ್ಹವಾದ ಅಭೂತಪೂರ್ವ ಎಲ್‌ಡಿಎಫ್ ಗೆಲುವಿಗೆ ಪಕ್ಷವನ್ನು ಮುನ್ನೆಡೆಸಿದರು. ಅಧಿಕಾರ ದಲ್ಲಿರುವ ಸರ್ಕಾರವು ಆಡಳಿತ ವಿರೋಧಿ ಅಲೆ ಇಲ್ಲದಿದ್ದರೂ ಸಹಾ, ಎರಡನೇ ಅವಧಿಗೆ ಪುನರಾಯ್ಕೆಯಾಗದ ದಶಕಗಳ ಚುನಾವಣಾ ಇತಿಹಾಸವನ್ನು ಮುರಿದ ಕೀರ್ತಿ ಅವರದ್ದು.

ಇದರ ನಂತರ, ಅವರ ನೇತೃತ್ವದಲ್ಲಿ ಪಕ್ಷದ ರಾಜ್ಯ ಸಮಿತಿಯು ಏಪ್ರಿಲ್ 2022 ರಲ್ಲಿ ಸಿಪಿಐ(ಎಂ) ನ 23 ನೇ ಕಾಂಗ್ರೆಸ್ ಮಹಾ ಅಧಿವೇಶನವನ್ನು ಕಣ್ಣೂರಿನಲ್ಲಿ ಯಶಸ್ವಿಯಾಗಿ ಆಯೋಜಿಸಿತು. ಅದರ ಏರ್ಪಾಡುಗಳನ್ನು ನಿಖರವಾದ ವಿಧಾನ ಮತ್ತು ಒಟ್ಟಾರೆ ಜವಾಬ್ದಾರಿಗಳನ್ನು ಹೊತ್ತು ಆರು ದಿನಗಳ ಕಾಲ ಪಕ್ಷದ ಕಾಂಗ್ರೇಸ್ ಅನ್ನು ನಡೆಸುವಲ್ಲಿ ಸಲೀಸಾಗಿ ಮತ್ತು ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದರು.

ಪಕ್ಷದ ಕಾಂಗ್ರೆಸ್‌ನ ಸಮಾರೋಪ ಸಮಾರಂಭದ ಆಯೋಜನೆ ಬೃಹತ್ ಮೆರವಣಿಗೆಯಲ್ಲಿ ಭಾಗವಹಿಸಿದ್ದವರ ಕಣ್ಣನ ಸೆಳೆದಿತ್ತು. ಮಾನವೀಯತೆಯ ಮಿಲನದ ಮಹಾಸಮುದ್ರದ ಅಲೆಗಳ ಮೆರೆತ ಅಲ್ಲಿ ಸಂಭ್ರಮಿಸಿತ್ತು.

ಅಂತಹ ಜನಪ್ರಿಯ ಉತ್ಸಾಹವನ್ನು ಉಂಟುಮಾಡಿದ ಪಕ್ಷದ ಸಮಿತಿಗಳ ಒಟ್ಟಾರೆ ಕಾರ್ಯಕ್ಕೆ ಕಾಮ್ರೇಡ್ ಕೊಡಿಯೇರಿ ಸಾಕ್ಷಿಯಾಗಿದ್ದರು.

ಅಕ್ಟೋಬರ್ 3, 2022 ರಂದು ಕಣ್ಣೂರಿನಲ್ಲಿ ಮತ್ತೊಮ್ಮೆ, ತಮ್ಮ ಪ್ರೀತಿಪಾತ್ರರಾದ ಕಾಮ್ರೇಡ್ ಕೊಡಿಯೇರಿಯವರ ಅಂತಿಮ ಪಯಣಕ್ಕೆ ಗೌರವ ಸಲ್ಲಿಸಲು ದುಃಖ ಆವರಿಸಿದ್ದ ಭಾವನಾತ್ಮಕ ಮಾನವೀಯತೆಯ ಸಮುದ್ರದ ಮುಖಗಳು ಮತ್ತೊಮ್ಮೆ ಸಂಗಮಿಸಿದ್ದವು.

ಹೋರಾಟಗಳಲ್ಲಿ ಮಿಂದು- ಮುಳುಗಿ ಗೆದ್ದ ಸಂಗಾತಿ

1973-74ರಲ್ಲಿ ನಾನು ಎಸ್ಎಫ್ಐ ಗೆ ಸೇರಿದಾಗ ಕಾಮ್ರೇಡ್ ಕೊಡಿಯೇರಿ ಕೇರಳ ಎಸ್ಎಫ್ಐನ ರಾಜ್ಯ ಕಾರ್ಯದರ್ಶಿ ಆಗಿದ್ದರು. 1979 ರಲ್ಲಿ ಮೂರನೇ ಎಸ್ಎಫ್ಐ ರಾಷ್ಟ್ರೀಯ ಸಮ್ಮೇಳನದಲ್ಲಿ ನಾನು ಅಖಿಲ ಭಾರತ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾಗುವವರೆಗೂ ಅವರು ಈ ಜವಾಬ್ದಾರಿಯನ್ನು ದೃಢ ಸಂಕಲ್ಪದಿಂದ ನಿರ್ವಹಿಸಿದ್ದರು. ಈ ಅವಧಿಯಲ್ಲಿ, ಎಸ್ಎಫ್ಐ ಕೇರಳ ರಾಜ್ಯದಲ್ಲಿ ಅತ್ಯಂತ ಬಲಿಷ್ಠ ಮತ್ತು ಶಕ್ತಿಶಾಲಿ ಎಡಪಂಥೀಯ ವಿದ್ಯಾರ್ಥಿ ಸಂಘಟನೆಯಾಗಿ ಹೊರಹೊಮ್ಮಿತು.

1975 ರಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಹೇರುವುದ ರೊಂದಿಗೆ ಕಾಮ್ರೇಡ್ ಕೊಡಿಯೇರಿಯನ್ನು ಭಯಂಕರ ಒಖಖಂ ಕಾಯಿದೆ ಅಡಿಯಲ್ಲಿ ಬಂಧಿಸಲಾಯಿತು. ಕರಾಳ ತುರ್ತು ಪರಿಸ್ಥಿತಿಯನ್ನು ಸೋಲಿಸುವವರೆಗೆ 18 ತಿಂಗಳ ಕಾಲ ಜೈಲಿನಲ್ಲಿಯೇ ಇದ್ದರು. ಕೇರಳದಲ್ಲಿ ಪಕ್ಷದ ನೇತೃತ್ವದ ತುರ್ತು ಪರಿಸ್ಥಿತಿಯ ಪ್ರತಿರೋಧ ಮತ್ತು ಎಸ್ಎಫ್ಐನ ವೀರೋಚಿತ ಪಾತ್ರವನ್ನು ದಾಖಲಿಸಲಾಗಿದೆ ಮತ್ತು ಖಂಡಿತವಾಗಿಯೂ ಹೆಚ್ಚಿನ ವಿವರಗಳನ್ನು ಮುಂದಿನ ದಿನಗಳಲ್ಲಿ ಪೂರಕಗೊಳಿಸಲಾಗುವುದು.

ಅಪ್ಪಟ-ಚೊಕ್ಕ ಅನುಪಮ ಗುಣಗಳುಳ್ಳ ಅಪರೂಪದ ಸಂಗಾತಿ

ಕಾಮ್ರೇಡ್ ಕೊಡಿಯೇರಿಯವರ ಕೆಲಸ ಕಾರ್ಯ ಮತ್ತು ಅನುಪಮ ಜೀವನದ ವಿವಿಧ ವೈಶಿಷ್ಟ್ಯಗಳಲ್ಲಿ ಮೂರು ಪ್ರಾಮುಖ್ಯತೆ ಯುಳ್ಳ ಗುಣಗಳನ್ನು ಪ್ರಸ್ತುತ ಪೀಳಿಗೆಯ ಕಮ್ಯೂನಿಸ್ಟರು ಕೇರಳದಲ್ಲಿ ಮಾತ್ರವಲ್ಲದೆ ದೇಶದಾದ್ಯಂತ ಅನುಕರಿಸಬೇಕಾಗಿದೆ.

ಮೊದಲನೆಯದು, ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣ ನ್ನವರ ವ್ಯಕ್ತಿತ್ವವು, ಮಾರ್ಕ್ಸ್ ವಾದ-ಲೆನಿನ್ ವಾದದ ಕ್ರಾಂತಿಕಾರಿ ತತ್ವಗಳಿಗೆ ದೃಢವಾದ ಬದ್ಧತೆ ಹೊಂದಿತ್ತು.

ಅವರು ಪ್ರಜ್ಞಾಪೂರ್ವಕವಾಗಿ ಎಲ್ಲಾ ರೀತಿಯ ವಿಚಲನಗಳನ್ನು ಎದುರಿಸಿದರು. ಅವರ ಯಶಸ್ಸಿಗೆ ಯಾವುದೇ ಸೀಮಿತ ರೇಖೆಗಳಿರಲಿಲ್ಲ. ಶೋಷಣೆ ಮುಕ್ತ ಸಮಾಜ ನಿರ್ಮಾಣದ ಅಂತಿಮ ಗುರಿ ಸಮಾಜವಾದ ಸಾಕಾರಗೊಳಿಸುವ ಹೋರಾಟಗಳಲ್ಲಿ ಈ ದೃಢತೆಯು ಅವರ ವ್ಯಕ್ತಿತ್ವದಲ್ಲಿ ಬೇರೂರಿತ್ತು.

ಎರಡನೆಯದು, ಯಾವುದೇ ಪ್ರತಿಕೂಲ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸುವ ಅಸಾಧಾರಣ ಧೈರ್ಯದ ಗುಣಗಳನ್ನು ಅವರು ಹೊಂದಿದ್ದರು ತುರ್ತು ಪರಿಸ್ಥಿತಿಯ ಸಮಯದಲ್ಲಿ ತೀವ್ರವಾದ ಪೊಲೀಸ್ ದಬ್ಬಾಳಿಕೆ ಮತ್ತು ನಿರಂಕುಶ ಆಕ್ರಮಣಗಳು ಮತ್ತು ನಂತರದ ಆರ್‌ಎಸ್‌ಎಸ್ ನಂತಹ ಪ್ರತಿಗಾಮಿ ಶಕ್ತಿಗಳ ದಾಳಿಗಳು ಕಾಮ್ರೇಡ್ ಕೊಡಿಯೇರಿಯನ್ನು ಕೇರಳ ರಾಜ್ಯದಾದ್ಯಂತ ಸಾಮೂಹಿಕ ಚಟುವಟಿಕೆಗಳನ್ನು ಯೋಜಿಸುವ, ಸಂಘಟಿಸುವ ಮತ್ತು ಮುನ್ನಡೆಸುವಲ್ಲಿ ಎಂದಿಗೂ, ಯಾವ ಪ್ರತಿಗಾಮಿ ಶಕ್ತಿಗಳಿಂದಲೂ ತಡೆಯಲು ಸಾಧ್ಯವಾಗಲಿಲ್ಲ.

ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವ ವನ್ನು ಎತ್ತಿಹಿಡಿಯುವುದು, ಕೋಮು ಸೌಹಾರ್ದತೆಯನ್ನು ಕಾಪಾಡುವುದು ಮತ್ತು ಒಡನಾಡಿಯಾಗಿ ಉಳಿಯುವ ಮಾನವ ಸಂಪರ್ಕ- ಸಂಬಂಧಗಳ ನಿರಂತರ ಅಭಿವೃದ್ಧಿ ಸ್ಥಾಪಿಸುವುದು ಇವರ ಜೀವಾಳದ ಗುಣಗಳಾಗಿದ್ದವು.

ಮೂರನೆಯದಾಗಿ, ವೈಯಕ್ತಿಕ ಜವಾಬ್ದಾರಿಯೊಂದಿಗೆ ಸಾಮೂಹಿಕ ಕಾರ್ಯನಿರ್ವಹಣೆಯ ತತ್ವವನ್ನು ಎತ್ತಿಹಿಡಿಯುವ ಅಸಾಧಾರಣ ಕೌಶಲ್ಯಗಳು. ಇದು ಪಕ್ಷದ ಸಂಘಟನೆಯನ್ನು ಬಲಪಡಿಸುವಲ್ಲಿ ಮಾತ್ರವಲ್ಲದೆ, ಪ್ರಮುಖವಾಗಿ ಕೇರಳದ ಜನರೊಂದಿಗೆ ಪಕ್ಷದ ಸಂಪರ್ಕವನ್ನು ಬಲಪಡಿಸುವಲ್ಲಿ ಸಹಾಯ ಮಾಡಿತು.

ಇಂತಹ ಅಪರೂಪದ ಗುಣಗಳುಳ್ಳ ಇವರ ಅಗಲಿಕೆಯ ನಿರ್ಗಮನವು ಕ್ರಾಂತಿಕಾರಿ ಚಳುವಳಿಗೆ ತುಂಬಲಾರದ ನಷ್ಟವುಂಟು ಮಾಡಿದೆ. ಅವರ ಕೊನೆಯ ಪಯಣದಲ್ಲಿ ದುಃಖ ತುಂಬಿದ ಮನಕಲಕುವ ಸುರಿಮಳೆಯ ವಾತವರಣವು, ಅವರು ಬಿಟ್ಟು ಹೋಗಿರುವ ಹೋರಟಮಯ ತ್ಯಾಗ-ಬಲಿದಾನಗಳ ಪರಂಪರೆಯನ್ನು ಮುಂದಕ್ಕೆ ಸಾಗಿಸಲು ಮತ್ತು ಪಕ್ಷವನ್ನು ಮತ್ತಷ್ಟು ಬಲಪಡಿಸಲು ಶ್ರಮಿಸುವ ಉಕ್ಕಿನ ಸಂಕಲ್ಪದ ಸಂದೇಶ ಸಾರಿತ್ತು.

ವೈದ್ಯಕೀಯ ವರದಿಯು ಕಾಮ್ರೇಡ್ ಕೊಡಿಯೇರಿ ಅವರ ಸ್ಥಿತಿ ಹದಗೆಟ್ಟಿದೆ ಎಂದು ತಿಳಿಸಿದಾಗ ಆಗಸ್ಟ್ 28 ರಂದು ಕೇರಳ ರಾಜ್ಯ ಸಮಿತಿ ಸಭೆ ನಡೆಸಲಾಯಿತು. ಅದರಲ್ಲಿ, ನಾನು ಮತ್ತು ಕಾಮ್ರೇಡ್ ಪ್ರಕಾಶ್ ಕಾರತ್ ಪಾಲ್ಗೊಂಡಿದ್ದವು. ಅನಂತರ ಪೊಲಿಟ್ ಬ್ಯೂರೊ ಸದಸ್ಯ ಮತ್ತು ಮುಖ್ಯಮಂತ್ರಿ ಕಾಮ್ರೇಡ್ ಪಿಣರಾಯಿ ವಿಜಯನ್, ನಾನು, ಕಾಮ್ರೇಡ್ ಕೊಡಿಯೇರಿ ಮತ್ತು ಅವರ ಕುಟುಂಬವನ್ನು ಅವರ ಮನೆಯಲ್ಲಿ ಭೇಟಿ ಮಾಡಿದೆವು. ವೈದ್ಯಕೀಯ ಮೇಲ್ವಿಚಾರಣೆ ಮತ್ತು ಆರೈಕೆಗಾಗಿ ಅವರನ್ನು ಚೆನ್ನೈನ ಅಪೋಲೋ ಆಸ್ಪತ್ರೆಗೆ ಸ್ಥಳಾಂತರಿಸುವಂತೆ ಸೂಚಿಸಿದೆವು. ಎಂದಿನಂತೆ ಪಕ್ಷದ ನಿಷ್ಠಾವಂತ ಸಿಪಾಯಿ ಕಾಮ್ರೇಡ್ ಕೊಡಿಯೇರಿ ಒಪ್ಪಿಕೊಂಡರು ಮತ್ತು ಮರುದಿನ ಬೆಳಿಗ್ಗೆ ಏರ್ ಆಂಬುಲೆನ್ಸ್ ಮೂಲಕ ತೆರಳಿದರು.

ಒಂದು ತಿಂಗಳಿಗೂ ಹೆಚ್ಚು ಕಾಲ ಅವರು ಭಯಾನಕ ಕಾಯಿಲೆಯ ವಿರುದ್ಧ ಹೋರಾಡಿದರು. "ಕ್ಯಾನ್ಸರ್ ಬೆಳವಣಿಗೆ ಮೌನವಾಗಿ ಕೊಲ್ಲುತ್ತದೆ" ಎಂಬ ಹಳೆಯ ಗಾದೆಯಂತೆ ರೋಗವು ಅಂತಿಮವಾಗಿ ಗೆದ್ದಿತು.

ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ರವರಿಗೆ ಕೆಂಪು ವಂದನೆಗಳು.



ಪುಟ 7 ರಿಂದ


ಕಾಮ್ರೇಡ್ ಕೊಡಿಯೇರಿ ಬಾಲಕೃಷ್ಣನ್ ಅವರಿಗೆ ಅಂತಿಮ ನಮನ...........

ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ನಾವು ಕಲ್ಕತ್ತಾಕ್ಕೆ ಮೊದಲ ಭೇಟಿ ನೀಡಿದ್ದು ನನಗೆ ನೆನಪಿದೆ. ಪಶ್ಚಿಮ ಬಂಗಾಳವು ಆಗ ತನ್ನ ಕಾನೂನುಬಾಹಿರತೆಗೆ ಕುಖ್ಯಾತವಾಗಿತ್ತು, ಅಲ್ಲಿ ಅರೆ-ಫ್ಯಾಸಿಸ್ಟ್ ಸಶಸ್ತ್ರ ಗುಂಪುಗಳು ಮೆರೆದಾಡುತ್ತಿದ್ದವು. ಕಾಂಗ್ರೆಸ್‌ನ ವಿದ್ಯಾರ್ಥಿ ವಿಭಾಗವಾದ ಛತ್ರ ಪರಿಷತ್‌ನ ಸೈನಿಕರು ತಮ್ಮ ಗೂಂಡಾಗಿರಿಗೆ ವಿಶೇಷವಾಗಿ ಕಲ್ಕತ್ತಾದಲ್ಲಿ ಕುಖ್ಯಾತರಾಗಿದ್ದರು. ಪಕ್ಷದ ನಾಯಕತ್ವವು ಈ ಬಗ್ಗೆ ನಮಗೆ ಎಚ್ಚರಿಕೆ ನೀಡಿತ್ತು. ಮಿನಿಬಸ್‌ನಲ್ಲಿ ಸಮ್ಮೇಳನದ ಸ್ಥಳಕ್ಕೆ ನಾವು ಹೋಗುವಾಗ, ನಾವುಗಳಿದ್ದ ಬಸ್ ಗೆ ಕಲ್ಲುಗಳನ್ನು ತೂರುವ ಮೂಲಕ ನಮ್ಮನ್ನು ಕೆರಳಿಸುವ ಪ್ರಯತ್ನ ಮಾಡಿದರು. ಸಮ್ಮೇಳನಕ್ಕೆ ಅಡ್ಡಿಪಡಿಸುವ ಪ್ರಯತ್ನವಾಗಿ ಪೂರ್ವನಿರ್ಧಾರಿತ ಯೋಜನೆಯಂತೆ ಅವರು ಉದ್ದೇಶಪೂರ್ವಕವಾಗಿ ನಮ್ಮನ್ನು ಕೆರಳಿಸಲು ಪ್ರಚೋದಿಸುತ್ತಿದ್ದಾರೆ ಎಂದು ಕೊಡಿಯೇರಿ ಸುಲಭವಾಗಿ ಗ್ರಹಿಸಬಹುದು. ಕೊಡಿಯೇರಿ ಅವರು ತಕ್ಷಣವೇ ಪರಿಸ್ಥಿತಿಯ ಉಸ್ತುವಾರಿ ವಹಿಸಿಕೊಂಡರು ಮತ್ತು ನಮ್ಮ ಪ್ರತಿನಿಧಿಗಳಲ್ಲಿ ಕಟ್ಟುನಿಟ್ಟಾದ ಶಿಸ್ತನ್ನು ಜಾರಿಗೊಳಿಸಿದರು. ಈ ಕಾರ್ಯತಂತ್ರದ ಮೂಲಕ ಛಾತ್ರ ಪರಿಷತ್ತು ಸಮ್ಮೇಳನವನ್ನು ಅಡ್ಡಿಪಡಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ.

1978 ರಲ್ಲಿ ಹವಾನಾದಲ್ಲಿ ನಡೆದ ಅಂತರರಾಷ್ಟ್ರೀಯ ಯುವ ಮತ್ತು ವಿದ್ಯಾರ್ಥಿ ಉತ್ಸವಕ್ಕೆ 'ಸಾಮ್ರಾಜ್ಯಶಾಹಿ ವಿರೋಧಿ ಒಗ್ಗಟ್ಟಿಗಾಗಿ, ಶಾಂತಿ ಮತ್ತು ಸೌಹಾರ್ದಕ್ಕಾಗಿ' ಎಂಬ ಘೋಷಣೆಯೊಂದಿಗೆ ಎಸ್ಎಫ್ಐ ಅನ್ನು ಆಹ್ವಾನಿಸಲಾಯಿತು. ಕೊಡಿಯೇರಿ ಮತ್ತು ನಾನು ಯುವಜನ ಮತ್ತು ವಿದ್ಯಾರ್ಥಿ ಸಂಘಟನೆಗಳ ಪ್ರತಿನಿಧಿಗಳಾಗಿ ಆ ಸಮಾವೇಶದಲ್ಲಿ ಭಾಗವಹಿಸಿದ್ದೆವು. ನಮ್ಮ ನಿಯೋಗವನ್ನು ಪ್ರಕಾಶ್ ಕಾರಟ್ ನೇತೃತ್ವ ವಹಿಸಿದ್ದರು. ಎಡಪಕ್ಷಗಳ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಇದು ನಮ್ಮ ಮೊದಲ ಮಾನ್ಯತೆಯಾಗಿದೆ.

ಕೊಡಿಯೇರಿ ಮತ್ತು ನಾನು 2006 ರಿಂದ 2011 ರವರೆಗೆ ವಿ.ಎಸ್. ಅಚ್ಯುತಾನಂದನ್ ನೇತೃತ್ವದ ಸಚಿವಾಲಯದಲ್ಲಿ ಸಹೋದ್ಯೋಗಿಗಳಾಗಿದ್ದೇವೆ. ಗೃಹ ಮತ್ತು ಪ್ರವಾಸೋದ್ಯಮದ ಉಸ್ತುವಾರಿ ಸಚಿವರಾಗಿ, ಕೊಡಿಯೇರಿ ಅವರು ಜನಸ್ನೇಹಿ ಪೊಲೀಸ್ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮದಂತಹ ಅನೇಕ ಜನಪ್ರಿಯ ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದರು. ಸ್ಟೂಡೆಂಟ್ ಪೋಲೀಸ್ ನ ವಿನೂತನ ಕಾರ್ಯಕ್ರಮವನ್ನು ತಮ್ಮ ಇಲಾಖೆಯಿಂದ ಪ್ರಾರಂಭಿಸಲಾಯಿತು ಮತ್ತು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಯಿತು" ಎಂದು ಕಾಮ್ರೇಡ್ ಎಂ ಎ ಬೇಬಿ ಅವರು ಕೊಡಿಯೇರಿ ಒಡನಾಟದ ಅನುಭವಗಳನ್ನು ಹಂಚಿಕೊಂಡಿದ್ದಾರೆ.

– ಸಿ.ಸಿದ್ದಯ್ಯ



ರೂಪಾಯಿಯ ಮೌಲ್ಯ ಡಾಲರಿಗೆದುರಾಗಿ ಇಳಿಯುತ್ತಲೇ ಇದೆ, ರಿಝರ್ವ್ ಬ್ಯಾಂಕ್ ಅದನ್ನು ತಡೆಯಲು ತನ್ನ ಡಾಲರ್ ಸಂಗ್ರಹಕ್ಕೆ ಕೈಹಾಕಿದರೂ, ಅದೂ ಇನ್ನಷ್ಟು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗುತ್ತಿದೆ. ವಾಸ್ತವವಾಗಿ ಈ ಪರಿಸ್ಥಿತಿಯು ಒಂದು ಆಳವಾದ ಒಳಬೇನೆಯು ಅರ್ಥವ್ಯವಸ್ಥೆಯನ್ನು ಬಾಧಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ. ಈ ನಡುವೆ ದೇಶದ ಅರ್ಥವ್ಯವಸ್ಥೆ ಸಿಕ್ಕಿಹಾಕಿಕೊಂಡಿರುವ ಎರಡು ಸುರುಳಿಗಳು ದೇಶದ ದುಡಿಯುವ ಜನರನ್ನು ಹಿಗ್ಗಾ ಮುಗ್ಗಾ ತುಳಿಯುತ್ತವೆ. ಜನರು ಅಪ್ಪಚ್ಚಿಯಾಗುತ್ತಾರೆ.


ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ರೂಪಾಯಿ ಮೌಲ್ಯ ಇಳಿಕೆಯ ಹಿಂದಿದೆ ಆಳವಾದ ಕಾಯಿಲೆ ವಿದೇಶಿ ವಿನಿಮಯ ರಂಗದಲ್ಲಿ ಬರಲಿದೆ ಹೊಸ ಅಪಾಯ

ಡಾಲರ್ ಎದುರು ರೂಪಾಯಿ ಮೌಲ್ಯವು ತೀರಾ ಕೆಳ ಮಟ್ಟಕ್ಕೆ ಇಳಿದಿದೆ. ಕೆಲವು ವಾರಗಳ ಕಾಲ 79 ಮತ್ತು 80 ರೂಗಳ ನಡುವೆ ಹೊಯ್ದಾಡಿದ ನಂತರ ತುಸು ಸ್ಥಿರವಾಗಿ ಕಂಡ ರೂಪಾಯಿಯು ಸೆಪ್ಟೆಂಬರ್ 23 ರಂದು ಡಾಲರ್‌ಗೆ 81 ರೂಪಾಯಿಗಳ ಮಟ್ಟವನ್ನು ದಾಟಿದೆ. ರೂಪಾಯಿಯ ಮೌಲ್ಯವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ರಿಸರ್ವ್ ಬ್ಯಾಂಕ್ ತನ್ನ ಮೀಸಲು ಸಂಗ್ರಹದ ಡಾಲರ್‌ಗಳನ್ನು ಮಾರಾಟಮಾಡಿದ್ದರ ಹೊರತಾಗಿಯೂ ಅದರ ಮೌಲ್ಯವು ಕುಸಿದಿದೆ. ಹಿಂದಿನ ವರ್ಷದ ಅಕ್ಟೋಬರ್‌ನಲ್ಲಿ ಒಂದು ಗರಿಷ್ಠ ಮಟ್ಟವನ್ನು ತಲುಪಿದ್ದ ವಿದೇಶಿ ವಿನಿಮಯದ ಸಂಗ್ರಹವು, ಅಂದಿನಿಂದ ಈ ಸೆಪ್ಟೆಂಬರ್ 23 ರವರೆಗೆ ಸುಮಾರು 90 ಬಿಲಿಯನ್ ಡಾಲರ್‌ಗಳಷ್ಟು ಕಡಿಮೆಯಾಗಿ, ಈಗ 550 ಬಿಲಿಯನ್ ಮಟ್ಟದಲ್ಲಿದೆ. ವಿದೇಶಿ ವಿನಿಮಯದ ಮರು-ಮೌಲ್ಯಮಾಪನದ ಪರಿಣಾಮವಾಗಿ ಮೀಸಲು ಸಂಗ್ರಹವು ಒಂದಿಷ್ಟು ಕುಸಿತವನ್ನು ಅನುಭವಿಸಿದೆ. ಈ ಮೀಸಲು ಸಂಗ್ರಹವನ್ನು ಡಾಲರ್ ಸೇರಿದಂತೆ ಹಲವು ಕರೆನ್ಸಿಗಳಲ್ಲಿ ಇಟ್ಟುಕೊಳ್ಳಲಾಗುತ್ತದೆ. ಯುರೋ, ಪೌಂಡ್ ಮುಂತಾದ ಕೆಲವು ಕರೆನ್ಸಿಗಳ ಮೌಲ್ಯದ ಕುಸಿತವು ನಮ್ಮ ವಿದೇಶಿ ವಿನಿಮಯದ ಮೀಸಲು ಸಂಗ್ರಹದ ಮೌಲ್ಯದ ಕುಸಿತದ ಕಾರಣಗಳಲ್ಲಿ ಒಂದು ಅಂಶವಾಗಿದೆ. ರೂಪಾಯಿಯ ಮೌಲ್ಯವನ್ನು ಸ್ಥಿರವಾಗಿಡುವ ಉದ್ದೇಶದಿಂದಲೇ ಮಾಡಿದ ಡಾಲರ್‌ಗಳ ಮಾರಾಟವೂ ರೂಪಾಯಿಯ ಕುಸಿತಕ್ಕೆ ಹೆಚ್ಚಿನ ಕೊಡುಗೆ ನೀಡಿದೆ.

ರೂಪಾಯಿಯ ಕುಸಿತದಿಂದಾಗಿ ನಮ್ಮ ಆಮದುಗಳು ಅದರಲ್ಲೂ ವಿಶೇಷವಾಗಿ ತೈಲದಂತಹ ಸಾರ್ವತ್ರಿಕ ಮಧ್ಯವರ್ತಿ-ವಸ್ತುಗಳು ದುಬಾರಿಯಾಗುತ್ತವೆ. ರಷ್ಯಾದ ಮೇಲೆ ಪಾಶ್ಚಾತ್ಯ ದೇಶಗಳು ನಿರ್ಬಂಧಗಳನ್ನು ಹೇರಿದ ಪರಿಣಾಮವಾಗಿ ವಿಶ್ವ ಮಾರುಕಟ್ಟೆಯಲ್ಲಿ ಡಾಲರ್ ಬೆಲೆ ಏರಿಕೆಯಾಗಿದೆ. ಆದ್ದರಿಂದ ರೂಪಾಯಿಯ ಕುಸಿತವು ತೈಲದ ಆಮದು ವೆಚ್ಚವನ್ನು ಹೆಚ್ಚಿಸುತ್ತದೆ. ಇದು ದೇಶದಲ್ಲಿ ಹಣದುಬ್ಬರವನ್ನು ಉಲ್ಬಣಗೊಳಿಸುತ್ತದೆ. ಈ ಹಣದುಬ್ಬರವು ರೂಪಾಯಿಯ ಬಾಹ್ಯ ಮೌಲ್ಯದಲ್ಲಿ (ಅಂದರೆ, ಡಾಲರ್ ಎದುರಾಗಿ) ಮತ್ತಷ್ಟು ಇಳಿಕೆಯಾಗಲು ಕಾರಣವಾಗುತ್ತದೆ. ಈ ರೀತಿಯಲ್ಲಿ, ಹಣದುಬ್ಬರ ಮತ್ತು ರೂಪಾಯಿ ಮೌಲ್ಯದ ಇಳಿಕೆಗಳು ಒಂದು ಸುರುಳಿಯ ಆಕಾರದಲ್ಲಿ ಒಂದನ್ನೊಂದು ಅನುಸರಿಸುತ್ತವೆ. ಈ ಸುರುಳಿಯನ್ನು ಬಂಡವಾಳಶಾಹಿ ಅರ್ಥವ್ಯವಸ್ಥೆಯು ಕಾರ್ಮಿಕರನ್ನು ಹಿಂಡುವ ಮೂಲಕ ಮುರಿಯುತ್ತದೆ. ಅಂದರೆ, ಕಾರ್ಮಿಕರ ಹಣ-ವೇತನವು ಬೆಲೆ ಏರಿಕೆಗೆ ಸಮನಾಗಿ ಏರದಂತೆ ನೋಡಿಕೊಳ್ಳುವ ಮೂಲಕ ಅಥವಾ ವ್ಯವಸ್ಥೆಯ ದೃಷ್ಟಿಕೋನದಲ್ಲಿ ಹೇಳುವುದಾದರೆ, ಕಾರ್ಮಿಕರ ವೇತನದಲ್ಲಿ ಒಂದು ಬಿಡಿಗಾಸೂ ಏರದಂತೆ ನೋಡಿಕೊಳ್ಳುವ ಮೂಲಕ ಈ ಸುರುಳಿಯನ್ನು ಮುರಿಯಲಾಗುತ್ತದೆ. ಈ ಎಲ್ಲಾ ಹಣದುಬ್ಬರ ವಿರೋಧಿ ಕ್ರಮಗಳು ಅಂತಿಮವಾಗಿ ಹಣ-ವೇತನಗಳು ಹೆಚ್ಚಾಗದಂತೆ ತಡೆಯುವ ಒಂದೇ ಒಂದು ಅಂಶಕ್ಕೆ ಇಳಿಯುತ್ತವೆ. ಹಾಗಾಗಿ, ರೂಪಾಯಿಯ ಮೌಲ್ಯದ ಇಳಿಕೆಯು ಕಾರ್ಮಿಕರ ಮೇಲೆ ಹೆಚ್ಚು ಹಾನಿಯನ್ನು ಉಂಟುಮಾಡುತ್ತದೆ.

ಇನ್ನೂ ಒಂದು ಸಮಸ್ಯೆ ಇದೆ. ರೂಪಾಯಿಯ ಮೌಲ್ಯದ ಕುಸಿತದಿಂದಾಗಿ ಹಣದುಬ್ಬರ ಉಲ್ಬಣವಾಗದಿದ್ದರೂ ಸಹ, ಅಂದರೆ, ವಿನಿಮಯ ದರ ಇಳಿಕೆಯಿಂದಾಗಿ ಹೆಚ್ಚಳವಾದ ಆಮದುಗಳ ಬೆಲೆಗಳನ್ನು ಸ್ಥಿರವಾಗಿಡುವ ಸಲುವಾಗಿ ತತ್‌ಕ್ಷಣವೇ ಕಾರ್ಮಿಕರ ಹಣ-ವೇತನಗಳನ್ನು ಇಳಿಕೆ ಮಾಡುವ ಮೂಲಕ ಸರಿದೂಗಿಸಲಾಗಿದೆ ಎಂದು ವಾದದ ಸಲುವಾಗಿ ಊಹಿಸಿಕೊಂಡರೂ ಸಹ, ಆಗಲೂ ಸಹ, ರೂಪಾಯಿಯು ಇದೇ ರೀತಿಯಲ್ಲಿ ಮತ್ತಷ್ಟು ಇಳಿಯಬಹುದು ಎಂಬ ನಿರೀಕ್ಷೆಯನ್ನು ಸಟ್ಟಾಕೋರರ



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್ ಬುಕ್

ಮನಸ್ಸಿನಲ್ಲಿ ಸೃಷ್ಟಿಸುತ್ತದೆ. ಆಗ, ಅವರು ರೂಪಾಯಿಯಿಂದ ಮತ್ತಷ್ಟು ಜಿಗಿಯುತ್ತಾರೆ (ಅಂದರೆ, ಡಾಲರ್‌ಗಳನ್ನು ಕೊಳ್ಳುತ್ತಾರೆ). ಆ ಮೂಲಕ ತಮ್ಮ ಈ ನಿರೀಕ್ಷೆಗಳು ಈಡೇರುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾರೆ. ರೂಪಾಯಿಯನ್ನು ರಕ್ಷಿಸಲು ಆರ್‌ಬಿಐ ಬಳಿ ಉಳಿದಿರುವ ಡಾಲರ್ ಸಂಗ್ರಹ ಕುಸಿಯುತ್ತಿದೆ ಎಂಬ ಅಂಶವು ಮತ್ತಷ್ಟು ಕುಸಿತದ ನಿರೀಕ್ಷೆಗಳನ್ನು ಬಲಪಡಿಸುತ್ತದೆ. ಈ ರೀತಿಯಲ್ಲಿ, ಹಣದುಬ್ಬರ-ರೂಪಾಯಿ ಮೌಲ್ಯದ ಇಳಿಕೆಯ ಒಂದೇ ಸುರುಳಿಯು ಸಕ್ರಿಯವಾಗಿರುವುದು ಮಾತ್ರವಲ್ಲದೆ, ಮತ್ತೊಂದು ಸ್ವತಂತ್ರ ಸುರುಳಿಯೂ ಕಾರ್ಯಪ್ರವೃತ್ತವಾಗಿರುತ್ತದೆ: ರೂಪಾಯಿಯ ಇಳಿಕೆಯು ಮತ್ತಷ್ಟು ಇಳಿಕೆಯಾಗುತ್ತದೆ ಎಂಬ ನಿರೀಕ್ಷೆಗಳಿಗೆ ಪ್ರೇರಣೆಯಾಗುತ್ತದೆ. ವಾಸ್ತವವಾಗಿ, ರೂಪಾಯಿ ಮತ್ತಷ್ಟು ಇಳಿಯುತ್ತದೆ. ಅರ್ಥವ್ಯವಸ್ಥೆಯು ಈ ಎರಡೂ ಸುರುಳಿಗಳಲ್ಲೂ ಸಿಕ್ಕಿಹಾಕಿಕೊಳ್ಳುತ್ತದೆ. ಈ ಸುರುಳಿಗಳು ದೇಶದ ದುಡಿಯುವ ಜನರನ್ನು ಹಿಗ್ಗಾ ಮುಗ್ಗಾ ತುಳಿಯುತ್ತವೆ. ಜನರು ಅಪ್ಪಚ್ಚಿಯಾಗುತ್ತಾರೆ.

ಎರಡು ಕಾರಣಗಳು

ರೂಪಾಯಿಯು ಕೆಲದಿನಗಳ ಮಟ್ಟಿಗೆ ಇಳಿಯುವ ಮತ್ತೆ ಕೆಲವು ದಿನಗಳನಂತರ ಏರುವ ಕಾರಣವು ಒಂದು ತತ್ಕಾಲಿಕ ಅಂಶದಿಂದ ಉಂಟಾಗಿದ್ದರೆ, ಪರಿಸ್ಥಿತಿ ಹೀಗಿರುತ್ತಿರಲಿಲ್ಲ. ಇಂದಿನ ದಿನಗಳಲ್ಲಿ ಕಂಡುಬರುತ್ತಿರುವ ಕುಸಿತದ ಸ್ವರೂಪವು ರಾಚನಿಕವಾದದ್ದು, ತತ್ಕಾಲಿಕ ಸ್ವರೂಪದ್ದಲ್ಲ. ಎರಡು ನಿರ್ದಿಷ್ಟ ಕಾರಣಗಳಿಂದ ರೂಪಾಯಿ ಕುಸಿಯುತ್ತಿದೆ. ಈ ಎರಡೂ ಕಾರಣಗಳು ಅಥವಾ ಸಮಸ್ಯೆಗಳು ತಾತ್ಕಾಲಿಕವಾದವುಗಳಲ್ಲ. ಅವುಗಳೆಂದರೆ, ಚಾಲ್ತಿ ಖಾತೆ ಕೊರತೆಯ ಹೆಚ್ಚಳ ಮತ್ತು ಅರ್ಥವ್ಯವಸ್ಥೆಯಿಂದ ಹೊರ ಹರಿಯುತ್ತಿರುವ ಡಾಲರ್ ಅಥವಾ ಹಣಕಾಸು ಬಂಡವಾಳ.

ಚಾಲ್ತಿ ಖಾತೆಯಲ್ಲಿ ಕೊರತೆಯ ಹೆಚ್ಚಳದ ಕಾರಣವೆಂದರೆ, ವಿದೇಶ ವ್ಯಾಪಾರದಲ್ಲಿ ಉಂಟಾದ ಕೊರತೆಯ ಹೆಚ್ಚಳವೇ. ಭಾರತದ ಆಮದುಗಳು ಅದರ ರಫ್ತಿಗಿಂತ ವೇಗವಾಗಿ ಬೆಳೆಯುತ್ತಿವೆ. ಕೋವಿಡ್-19ರ ಪರಿಣಾಮಗಳಿಂದ ಅರ್ಥವ್ಯವಸ್ಥೆಯು ವೇಗವಾಗಿ ಚೇತರಿಕೆ ಹೊಂದುತ್ತಿರುವುದರಿಂದಾಗಿ ಆಮದುಗಳು ಏರಿಕೆಯಾಗಿವೆ ಎಂದು ಸರ್ಕಾರ ವಾದಿಸುತ್ತದೆ. ಆದರೆ, ಇದು ಆಧಾರರಹಿತವಾಗಿದೆ. 2019-20ರ ಮೊದಲ ತ್ರೈಮಾಸಿಕವನ್ನು 2022-23ರ ಮೊದಲ ತ್ರೈಮಾಸಿಕದೊಂದಿಗೆ, ಅಂದರೆ, ಸಾಂಕ್ರಾಮಿಕ ಪೂರ್ವದ "ಸಾಮಾನ್ಯ" ತ್ರೈಮಾಸಿಕವನ್ನು ಸಾಂಕ್ರಾಮಿಕದ ನಂತರದ "ಸಾಮಾನ್ಯ" ತ್ರೈಮಾಸಿಕದೊಂದಿಗೆ ಹೋಲಿಕೆ ಮಾಡಿದರೆ, ವ್ಯಾಪಾರ ಕೊರತೆಯು ಜಿಡಿಪಿಯ ಶೇ. 4ರಿಂದ ಶೇ. 5.3ಕ್ಕೆ ಏರಿಕೆಯಾಗಿದೆ. ಆದರೆ, ಈ ಎರಡು ತ್ರೈಮಾಸಿಕಗಳ ನಡುವಿನ ಅವಧಿಯಲ್ಲಿ ಜಿಡಿಪಿಯು ಕೇವಲ ಶೇ. 2.8ರಷ್ಟು ಮಾತ್ರ ಹೆಚ್ಚಿದೆ. ಈ ಹೋಲಿಕೆಯು ಸಾಧ್ಯವಾದಷ್ಟು ಮಟ್ಟಿಗೆ ವಾಸ್ತವಕ್ಕೆ ಹತ್ತಿರದಲ್ಲಿದೆ. ಮತ್ತು, ಇದೇ ಅವಧಿಗೆ ಸಂಬಂಧಿಸಿದ ಜಾಗತಿಕ ಅರ್ಥವ್ಯವಸ್ಥೆಯ ಬೆಳವಣಿಗೆಗಳು ಹೆಚ್ಚುತ್ತಿರುವ ವ್ಯಾಪಾರ ಕೊರತೆಯು ಅರ್ಥವ್ಯವಸ್ಥೆಯ ವೇಗದ ಚೇತರಿಕೆಯ ಫಲಿತಾಂಶವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆದ್ದರಿಂದ, ಹೆಚ್ಚುತ್ತಿರುವ ವ್ಯಾಪಾರ ಕೊರತೆಯು, ವಾಸ್ತವವಾಗಿ, ವಿದೇಶಗಳಿಗೆ ನಮ್ಮ ಬೇಡಿಕೆಯ "ಸೋರಿಕೆ"ಯ ಮೂಲಕ ಅರ್ಥವ್ಯವಸ್ಥೆಯ ವೇಗದ ಬೆಳವಣಿಗೆಯನ್ನು ತಡೆದ ಒಂದು ಸ್ವಾಯತ್ತ ಅಂಶವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಅದೇ ರೀತಿಯಲ್ಲಿ, ಉಕ್ರೇನ್ ಯುದ್ಧದ ನಂತರ ತೈಲದ ಮತ್ತು ಇತರ ಸರಕುಗಳ ಜಾಗತಿಕ ಬೆಲೆಗಳು ಏರಿಕೆಯಾದುದೇ ವ್ಯಾಪಾರ ಕೊರತೆಯ ಹೆಚ್ಚಳಕ್ಕೆ ಕಾರಣವೆಂದು ಹೇಳಲಾಗದು. ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿನ ವ್ಯಾಪಾರ ಕೊರತೆಯು ಏಪ್ರಿಲ್-ಜೂನ್ ತ್ರೈಮಾಸಿಕದ ತಿಂಗಳುಗಳ ಸರಾಸರಿಗಿಂತಲೂ ಹೆಚ್ಚಿಗೆ ಇದೆ. ಈ ಕೊರತೆಯು ಜುಲೈನಲ್ಲಿ 28.7 ಬಿಲಿಯನ್ ಡಾಲರ್ ಮತ್ತು ಆಗಸ್ಟ್‌ನಲ್ಲಿ 28.68 ಬಿಲಿಯನ್ ಡಾಲರ್ ಇತ್ತು. ಆದರೆ ಏಪ್ರಿಲ್-ಜೂನ್ ತ್ರೈಮಾಸಿಕದ ಸರಾಸರಿ ಮಾಸಿಕ ವ್ಯಾಪಾರ ಕೊರತೆಯು 22.6 ಬಿಲಿಯನ್ ಡಾಲರ್ ಇತ್ತು. ತೈಲ ಬೆಲೆ ಏರಿಕೆಯ ಹೆಚ್ಚಿನ ಅಂಶವು ಏಪ್ರಿಲ್-ಜೂನ್ ತ್ರೈಮಾಸಿಕದ ವೇಳೆಗಾಗಲೇ ಸಂಭವಿಸಿದ್ದುದರಿಂದ, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿನ ಕೊರತೆಯ ಏರಿಕೆಯನ್ನು ತೈಲದ ಅಥವಾ ಇತರ ಸರಕುಗಳ ಬೆಲೆ-ಏರಿಕೆಯ ಮೂಲಕ ವಿವರಿಸಲಾಗದು. ಆದ್ದರಿಂದ, ಕೆಲವು ಬಿಡಿ-ಬಿಡಿ ಅಂಶಗಳಿಂದ ವಿವರಿಸಲಾಗದ, ಆದರೆ ಅರ್ಥವ್ಯವಸ್ಥೆಯಲ್ಲಿ ಬೇರೂರಿರುವ ಪ್ರಸ್ತುತ ದುಃಸ್ಥಿತಿಯ ಒಂದು ವಿದ್ಯಮಾನವನ್ನು ನಾವೀಗ ನೋಡುತ್ತಿದ್ದೇವೆ.

ಬಂಡವಾಳದ ಹೊರ-ಹರಿವು

ನಾವೀಗ ಎರಡನೆಯ ಅಂಶಕ್ಕೆ, ಅಂದರೆ ಬಂಡವಾಳದ (ಹಣಕಾಸಿನ) ನಿವ್ವಳ ಹೊರಹರಿವಿನ ಅಂಶಕ್ಕೆ ಬರೋಣ. ಅಮೆರಿಕದ ಫೆಡರಲ್ ರಿಸರ್ವ್ ಬೋರ್ಡ್ ಅನೇಕ ವರ್ಷಗಳವರೆಗೆ ತನ್ನ ಬಡ್ಡಿ ದರಗಳನ್ನು ಶೂನ್ಯಕ್ಕೆ ಹತ್ತಿರದ ಮಟ್ಟದಲ್ಲಿ ಇರಿಸಿತ್ತು ಮತ್ತು ಅಷ್ಟೇ ಸಾಲದು ಎಂಬಂತೆ ಅದರ ಮೇಲೆ "ಸುಲಭ ಹಣ ಲಭ್ಯತೆ"ಯ("quantitative easing") ನೀತಿಯನ್ನು, ಅಂದರೆ, ಸರ್ಕಾರದ ಸಾಲ ಪತ್ರಗಳನ್ನು ಕೊಳ್ಳುವ ಮೂಲಕ ಮಾರುಕಟ್ಟೆಯಲ್ಲಿ ಹಣ ಸುಲಭವಾಗಿ ಲಭಿಸುವಂತೆ ಮಾಡುವ ಕ್ರಮವನ್ನು ಅನುಸರಿಸುತ್ತಿತ್ತು. "ವಸತಿ ಗುಳ್ಳೆ" ಒಡೆದ ನಂತರ ಸ್ಥಗಿತತೆಗೆ ಒಳಗಾಗಿದ್ದ ಅಮೆರಿಕಾದ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವುದೇ ಈ ಕ್ರಮಗಳ ಉದ್ದೇಶವಾಗಿತ್ತು. ಆದರೆ, ಈ ಪ್ರಕ್ರಿಯೆಯಲ್ಲಿ ಸೃಷ್ಟಿಯಾದ ಅಪಾರ ಪ್ರಮಾಣದ ಸುಲಭ-ಲಭ್ಯತೆಯ ಹಣವು "ಉದಯೋನ್ಮುಖ ಮಾರುಕಟ್ಟೆಗಳು" ಎಂದು ಕರೆಯಲ್ಪಡುವ ಮೂರನೆಯ ಜಗತ್ತಿನ ಭಾರತದಂತಹ ಕೆಲವು ದೇಶಗಳಿಗೆ ಸ್ಥಳಾಂತರಗೊಂಡಿತು, ಹೆಚ್ಚಿನ ಬಡ್ಡಿ ದರದ ಆಕರ್ಷಣೆಯಿಂದಾಗಿ. ಹಾಗಾಗಿ, ಈ ದೇಶಗಳಿಗೆ ತಮ್ಮ ಚಾಲ್ತಿ ಖಾತೆಯ ಕೊರತೆಗಳಿಗೆ ಹಣ ಒದಗಿಸಿಕೊಳ್ಳುವುದು ಸುಲಭವಾಯಿತು. ಈ ದೇಶಗಳಿಗೆ ಒಳಹರಿದ ಬಂಡವಾಳದ ನಿವ್ವಳ ಮೊತ್ತವು ಎಷ್ಟು ದೊಡ್ಡದಿತ್ತೆಂದರೆ, ವಾಸ್ತವವಾಗಿ, ಬೃಹತ್ ಪ್ರಮಾಣದ ವಿದೇಶಿ ವಿನಿಮಯ ಮೀಸಲುಗಳು ಸಂಗ್ರಹಗೊಂಡವು. ಆದರೆ, ಅಮೆರಿಕಾ ಮತ್ತು ಉಳಿದ ಬಂಡವಾಳಶಾಹಿ ಜಗತ್ತನ್ನು ಸಧ್ಯದಲ್ಲಿ ಕಾಡುತ್ತಿರುವ ಹಣದುಬ್ಬರವು, ಉಕ್ರೇನ್ ಯುದ್ಧಕ್ಕೆ

ಪುಟ 15ಕ್ಕೆ

ಬಹಳ ಕುತೂಹಲ ಕೆರಳಿಸಿರುವ ಅಕ್ಟೋಬರ್ 2 ರಂದು ನಡೆದ ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡ ಅಭ್ಯರ್ಥಿ ಲುಲಾ ಡಿ ಸಿಲ್ವಾ ಅತಿ ಹೆಚ್ಚು ಮತ ಪಡೆದು ಮೊದಲ ಸುತ್ತಿನಲ್ಲಿ ಗೆದ್ದಿದ್ದಾರೆ. ಅವರು ಶೇ.48.4 ಮತ ಗಳಿಸಿದ್ದು ಅವರ ಹತ್ತಿರದ ಪ್ರತಿಸ್ಪರ್ಧಿ ಜೈರ್ ಬೊಲ್ಸನಾರೊ ಶೇ.43.20 ಮತ ಗಳಿಸಿದ್ದಾರೆ. ಲುಲಾ ಶೇ. 50ಕ್ಕಿಂತ ಹೆಚ್ಚು ಮತ ಗಳಿಸದೆ ಇರುವುದರಿಂದ ಬ್ರೆಜಿಲ್ ಸಂವಿಧಾನದ ಪ್ರಕಾರ ಮೊದಲ ಎರಡು ಸ್ಥಾನ ಗಳಿಸಿದ ಇವರಿಬ್ಬರ ನಡುವೆ ಎರಡನೆಯ ಸುತ್ತಿನ ಚುನಾವಣೆ ಅಕ್ಟೋಬರ್ 30 ರಂದು ನಡೆಯಲಿದೆ. ಲುಲಾ ಮೊದಲನೆಯ ಸುತ್ತಿನಲ್ಲೇ ಆಯ್ಕೆಯಾಗುತ್ತಾರೆ ಎಂಬ ನಿರೀಕ್ಷೆ ಈಡೇರಿಲ್ಲ. ಅವರು ಎರಡನೆಯ ಸುತ್ತಿನಲ್ಲಿ ಬಹುಶಃ ಗೆಲ್ಲಬಹುದು. ಆದರೆ ಉಗ್ರ ಬಲಪಂಥ ಸೋತಿಲ್ಲ. ಅಧ್ಯಕ್ಷೀಯ, ಪಾರ್ಲಿಮೆಂಟರಿ ಮತ್ತು ರಾಜ್ಯಗಳಿಗೆ ನಡೆದ ಈ ಸಾರ್ವತ್ರಿಕ ಚುನಾವಣೆಗಳಲ್ಲಿ ನಿರೀಕ್ಷೆಗೆ ಮೀರಿ ಉತ್ತಮ ಪ್ರದರ್ಶನ ನೀಡಿದೆ. ವಿವರಗಳು ಮತ್ತು ವಿಶ್ಲೇಷಣೆ ಇಲ್ಲಿವೆ.



ಬ್ರೆಜಿಲ್: ಲುಲಾ ಮೊದಲ ಸುತ್ತಿನಲ್ಲಿ ಗೆದ್ದಿದ್ದಾರೆ, ಆದರೆ ಉಗ್ರ ಬಲಪಂಥ ಸೋತಿಲ್ಲ

ಜಗದ ಸುತ್ತ

ವಸಂತರಾಜ ಎನ್.ಕೆ.

ಬಹಳ ಕುತೂಹಲ ಕೆರಳಿಸಿರುವ ಅಕ್ಟೋಬರ್ 2 ರಂದು ನಡೆದ ಬ್ರೆಜಿಲ್ ಅಧ್ಯಕ್ಷೀಯ ಚುನಾವಣೆಯಲ್ಲಿ ಎಡ ಅಭ್ಯರ್ಥಿ ಲುಲಾ ಡಿ ಸಿಲ್ವಾ ಅತಿ ಹೆಚ್ಚು ಮತ ಪಡೆದು ಮೊದಲ ಸುತ್ತಿನಲ್ಲಿ ಗೆದ್ದಿದ್ದಾರೆ. ಅವರು ಶೇ.48.4 ಮತ ಗಳಿಸಿದ್ದು ಅವರ ಹತ್ತಿರದ ಪ್ರತಿಸ್ಪರ್ಧಿ ಜೈರ್ ಬೊಲ್ಸನಾರೊ ಶೇ.43.20 ಮತ ಗಳಿಸಿದ್ದಾರೆ. ಲುಲಾ ಶೇ.50 ಕ್ಕಿಂತ ಹೆಚ್ಚು ಮತ ಗಳಿಸುವ ಮೂಲಕ ಮೊದಲ ಸುತ್ತಿನಲ್ಲೇ ಆಯ್ಕೆಯಾಗುವ ನಿರೀಕ್ಷೆಯಿತ್ತು. ಚುನಾವಣಾ-ಪೂರ್ವ ಸಮೀಕ್ಷೆಗಳು ಲುಲಾ ಬೊಲ್ಸನಾರೊಗಿಂತ ಶೇ.6–14ರಷ್ಟು ಅಂತರದಲ್ಲಿ ಮುಂದಿರುತ್ತಾರೆ ಎಂದು ತಿಳಿಸಿದ್ದವು. ಇಕನೊಮಿಸ್ಟ್ ಸಮೀಕ್ಷೆ ಲುಲಾ ಶೇ.51 ಮತ ಗಳಿಸಿ ಮೊದಲ ಸುತ್ತಿನಲ್ಲಿ ಗೆಲ್ಲುತ್ತಾರೆ ಎಂದು ಹೇಳಿತ್ತು. ಆದರೆ ಸಮೀಕ್ಷೆಗಳ ನಿರೀಕ್ಷೆ ಮೀರಿ ಬೊಲ್ಸನಾರೊ ಉತ್ತಮ ಪ್ರದರ್ಶನ ನೀಡಿದ್ದಾರೆ. ಹಾಗೂ ಮೂರನೆಯ ಮತ್ತು ನಾಲ್ಕನೆಯ ಸ್ಥಾನದಲ್ಲಿದ್ದ ನಡು–ಬಲಪಂಥೀಯ ಅಭ್ಯರ್ಥಿಗಳಾದ ಸಿಮೊನ್ ಟೆಬೆಟ್ ಮತ್ತು ಸಿರೊ ಗೋಮ್ಸ್ ನಿರೀಕ್ಷೆಗೂ ಬಹಳ ಕಡಿಮೆ ಅಂದರೆ ಅನುಕ್ರಮವಾಗಿ ಶೇ.4.2 ಮತ್ತು ಶೇ.3 ಮತ ಗಳಿಸಿದ್ದಾರೆ. ಗೋಮ್ಸ್ ಹಿರಿಯ ರಾಜಕಾರಣಿಯಾಗಿದ್ದು, ಹಿಂದೆ ಲುಲಾ ಮಂತ್ರಿಮಂಡಲದಲ್ಲಿದ್ದರು. 2018ರಲ್ಲಿ ಅವರು ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ಶೇ.12 ಮತ ಗಳಿಸಿದ್ದರು. ಒಟ್ಟು 12 ಅಭ್ಯರ್ಥಿಗಳು ಕಣದಲ್ಲಿದ್ದು ಉಳಿದ 8 ಅಭ್ಯರ್ಥಿಗಳು ಅತ್ಯಂತ (ಶೇ. 0.5ಕ್ಕಿಂತಲೂ) ಕಡಿಮೆ ಮತ ಗಳಿಸಿದ್ದಾರೆ. ಎಡ ಮತ್ತು ಉಗ್ರ ಬಲಪಂಥಗಳ ನಡುವೆ ನಿರೀಕ್ಷೆಗಿಂತಲೂ ಹೆಚ್ಚಿನ ಧ್ರುವೀಕರಣ ಆಯ್ತು ಎಂಬುದು ಇದರರ್ಥ ಎನ್ನಲಾಗಿದೆ. ಉಗ್ರಬಲಪಂಥ ವಿಶೇಷವಾಗಿ ಮತ್ತು ಒಟ್ಟಾರೆಯಾಗಿ ಬಲಪಂಥ ಪಾರ್ಲಿಮೆಂಟರಿ ಮತ್ತು ರಾಜ್ಯಗಳ ಗವರ್ನರ್ ಚುನಾವಣೆಗಳಲ್ಲೂ ನಿರೀಕ್ಷೆಗಿಂತಲೂ ಹೆಚ್ಚು ಪ್ರಬಲವಾಗಿ ಹೊಮ್ಮಿದೆ.

ಬಲಪಂಥದ ಬಲ ಹೆಚ್ಚಿದೆ

ಬೊಲ್ಸೆನಾರೊ ಬೆಂಬಲಿಸಿದ ಪಕ್ಷಗಳು ಒಟ್ಟು 26 ರಾಜ್ಯ (ಮತ್ತು ಫೆಡೆರಲ್ ಜಿಲ್ಲೆ) ಗಳ ಗವರ್ನರ್ ಚುನಾವಣೆಗಳಲ್ಲಿ 4 ರಲ್ಲಿ ಮೊದಲ ಸುತ್ತಿನಲ್ಲಿ ಜಯ ಗಳಿಸಿವೆ. ಪ್ರಮುಖ ರಾಜ್ಯ ಸಾವೊ ಪೊಲೊ ಸೇರಿದಂತೆ ಇತರ 4 ರಾಜ್ಯಗಳಲ್ಲಿ ಮೊದಲ ಸ್ಥಾನದಲ್ಲಿದ್ದು, ಭಾರೀ ಅಂತರದೊಂದಿಗೆ ಎರಡನೆಯ ಸುತ್ತಿಗೆ ಹೋಗಿವೆ. ಈ ಹೆಚ್ಚಿನ ರಾಜ್ಯಗಳಲ್ಲಿ ನಡು–ಬಲಪಂಥೀಯ ಅಥವಾ ಬಲಪಂಥೀಯ ಪಕ್ಷಗಳು ಎರಡನೆಯ ಸ್ಥಾನದಲ್ಲಿವೆ. ಲುಲಾ ಅವರ ವರ್ಕರ್ಸ್ ಪಾರ್ಟಿ 3 ರಾಜ್ಯಗಳಲ್ಲಿ ಗೆದ್ದಿದ್ದು ಇನ್ನೂ 2 ರಲ್ಲಿ ಮೊದಲ ಸ್ಥಾನಗಳಿಸಿ ಎರಡನೆಯ ಸುತ್ತಿಗೆ ಹೋಗುತ್ತಿದೆ. ಇನ್ನೊಂದು ಎಡಪಂಥೀಯ ಸೋಶಲಿಸ್ಟ್ ಪಕ್ಷ 3 ರಾಜ್ಯಗಳಲ್ಲಿ ಮೊದಲ ಸ್ಥಾನಗಳಿಸಿ ಎರಡನೆಯ ಸುತ್ತಿಗೆ ಹೋಗುತ್ತಿದೆ. ಆದರೆ ನಡು–ಬಲಪಂಥೀಯ ಪಕ್ಷಗಳು 5ರಲ್ಲಿ ಗೆದ್ದಿದ್ದು, 3 ರಲ್ಲಿ ಮೊದಲ ಸ್ಥಾನ ಪಡೆದು ಎರಡನೆಯ ಸುತ್ತಿಗೆ ಹೋಗುತ್ತಿವೆ.

ಪಾರ್ಲಿಮೆಂಟ್ ಚುನಾವಣೆಗಳಲ್ಲೂ ಬೊಲ್ಸೆನಾರೊ ಬೆಂಬಲಿಸುವ ಪಕ್ಷಗಳು 513 ಸೀಟುಗಳಿರುವ ಪಾರ್ಲಿಮೆಂಟಿನ ಕೆಳಸದನದಲ್ಲಿ 193 ಸೀಟುಗಳನ್ನು ಗಳಿಸಿವೆ. ಕಳೆದ ಚುನಾವಣೆಗೆ ಹೋಲಿಸಿದರೆ 85 ಹೆಚ್ಚು ಸೀಟುಗಳನ್ನು ಗಳಿಸಿದೆ. ಲುಲಾ ಬೆಂಬಲಿಸುವ ಪಕ್ಷಗಳು 122 ಸೀಟುಗಳನ್ನು ಗಳಿಸಿವೆ. ಆದರೆ ಕಳೆದ ಬಾರಿಗೆ ಹೋಲಿಸಿದರೆ 13 ಸೀಟುಗಳನ್ನು ಕಳೆದುಕೊಂಡಿವೆ. ಸೀಮೊನ್ ಟೆಬೆಟ್ ಬೆಂಬಲಿಸಿದ ನಡು–ಬಲಪಂಥೀಯ ಪಕ್ಷಗಳು 10 ಸೀಟುಗಳನ್ನು ಕಳೆದುಕೊಂಡು 72 ಸೀಟುಗಳನ್ನು ಗಳಿಸಿವೆ. ಮೇಲ್ ಸದನದ 81 ಸೀಟುಗಳಲ್ಲಿ ಚುನಾವಣೆ ನಡೆದ 27 ಸೀಟುಗಳಲ್ಲಿ 14 ಸೀಟುಗಳನ್ನು ಬೊಲ್ಸೆನಾರೊ ಬೆಂಬಲಿಸುವ ಪಕ್ಷಗಳು ಪಡೆದಿವೆ. ಲುಲಾ ಬೆಂಬಲಿಸುವ ಪಕ್ಷಗಳು ಕೇವಲ 5 ಸೀಟು ಗಳಿಸಿವೆ.



ಲುಲಾ ಅವರ ವಿಶಾಲ ಕೂಟ

ಸಮರಶೀಲ ಟ್ರೇಡ್ ಯೂನಿಯನ್ ನಾಯಕ ಮತ್ತು ಸ್ಪಷ್ಟ ದಿಟ್ಟ ಎಡ ಕಾರ್ಯಕ್ರಮವಿದ್ದ 1998ರ ಮೊದಲ ಅಧ್ಯೀಕ್ಷೀಯ ಚುನಾವಣಾ ಅಭ್ಯರ್ಥಿಯಿಂದ ಲುಲಾ ಬಹಳ ದೂರ ಬಂದಿದ್ದಾರೆ. 2002ರಲ್ಲಿ ಮೊದಲ ಬಾರಿ ಅಧ್ಯೀಕ್ಷರಾಗಿ ಚುನಾಯಿತರಾಗಿ ಎರಡು ಅವಧಿಗಳಲ್ಲಿ ಮುಂದುವರೆದಿದ್ದು 2011ರಲ್ಲಿ ಎರಡನೆಯ ಅವಧಿ ಮುಗಿಯುವ ಹೊತ್ತಿಗೆ ಅವರ ಅಧ್ಯಕ್ಷೀಯ ಅನುಮೋದನೆ ಶೇ.87ರಷ್ಟು ಇತ್ತು. ಅವರು ಬ್ರೆಜಿಲ್ ನ ಚರಿತ್ರೆಯಲ್ಲೇ ಅತ್ಯಂತ ಜನಪ್ರಿಯ ಅಧ್ಯಕ್ಷರಾಗಿದ್ದರು. ಬಡತನ ನಿರ್ಮೂಲನದ ಹಲವು ದಿಟ್ಟ ಹೊಸ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದರು. ಆದರೆ ಆರ್ಥಿಕ ನೀತಿಗಳಲ್ಲಿ ನಡು–ಎಡ ಪಂಥೀಯ ನಿಲುವಿನತ್ತ ಸರಿದಿದ್ದರು. ಅವರ ನಂತರ ವರ್ಕರ್ಸ್ ಪಾರ್ಟಿಯ ದಿಲ್ಮಾ ರೌಸೆಫ್ ಅಧ್ಯಕ್ಷರಾಗಿ ಆಯ್ಕೆಯಾಗಿ ಈ ನೀತಿಗಳನ್ನು ಮುಂದುವರೆಸಿದ್ದರು. ಸತತ ಮೂರು ಬಾರಿ ವರ್ಕರ್ಸ್ ಪಾರ್ಟಿ ಗೆದ್ದಿದ್ದು ಬಲಪಂಥ ಮತ್ತು ಯು.ಎಸ್ ಗೆ ಇರುಸು ಮುರುಸಾಗಿದ್ದು ಅದರ ವಿರುದ್ಧ ಪಿತೂರಿ ರೂಪಿಸಿದರು.

ವರ್ಕರ್ಸ್ ಪಾರ್ಟಿ ವಿರುದ್ಧ ಅಪಪ್ರಚಾರದ ಸುರಿಮಳೆ ಆರಂಭವಾಯಿತು. ಸುಳ್ಳು ಆಪಾದನೆಗಳನ್ನು ಹಾಕಿ ಅಧ್ಯಕ್ಷೀಯ ದೋಷಾರೋಪಣೆ ಪ್ರಕ್ರಿಯೆಯ ಮೂಲಕ ದಿಲ್ಮಾ ಸರಕಾರವನ್ನು 2016ರಲ್ಲಿ ಉರುಳಿಸಿದ್ದರು. ಇದನ್ನು ಸಂವಿಧಾನಿಕ ಕ್ಷಿಪ್ರಕ್ರಾಂತಿ ಎಂದು ಕರೆಯಲಾಗಿದೆ. ಸಂವಿಧಾನಿಕ ಪ್ರಕ್ರಿಯೆಗಳು ಮತ್ತು ಸ್ಥಾನಗಳ ಅತ್ಯಂತ ಹೇಯ ದುರ್ಬಳಕೆ ಮಾಡಿ ಇದನ್ನು ಸಾಧಿಸಲಾಯಿತು. 2018ರಲ್ಲಿ ಲುಲಾ ಅವರ ಮೇಲೆ ಸುಳ್ಳು ಭ್ರಷ್ಟಾಚಾರ ಆಪಾದನೆಗಳನ್ನು ಹಾಕಿ ಅವರು 2018ರ ಅಧ್ಯಕ್ಷೀಯ ಸ್ಥಾನಕ್ಕೆ ಸ್ಪರ್ಧಿಸದಂತೆ ಮಾಡಲಾಯಿತು. ಆ ಚುನಾವಣೆಗಳಲ್ಲಿ ಲುಲಾ ಅವರಿಗೆ 12 ವರ್ಷಗಳ ಜೈಲುಶಿಕ್ಷೆ ವಿಧಿಸಲಾಯಿತು. ಆದರೆ ಅವರ ಜೈಲುಶಿಕ್ಷೆಯ ವಿರುದ್ಧ ದಿನಾ ಜೈಲಿನ ಎದುರು ಪ್ರತಿಭಟನಾ ಪ್ರದರ್ಶನದ ಮೂಲಕ ದೀರ್ಘ ಪ್ರಚಾರಾಂದೋಲನ ರೂಪಿಸಲಾಯಿತು. ಜತೆಗೆ ಕಾನೂನು ಹೋರಾಟ ನಡೆಸಲಾಯಿತು. ಇವುಗಳ ಫಲವಾಗಿ ಸುಪ್ರೀಂ ಕೋರ್ಟು ಲುಲಾ ವಿರುದ್ಧ ಕೇಸನ್ನು ವಜಾ ಮಾಡಿತು. ಲುಲಾ 580 ದಿನಗಳ ಕಾಲದ ಜೈಲುವಾಸದ ನಂತರ 2019ರಲ್ಲಿ ಬಿಡುಗಡೆಯಾದರು.

ಜೈಲಿನಿಂದ ಬಿಡುಗಡೆಯಾದ ಕೂಡಲೇ ಬೊಲ್ಸೆನಾರೊ ಅವರ ದುರಾಡಳಿತದ ವಿರುದ್ಧ ಲುಲಾ ತೀವ್ರ ಪ್ರಚಾರಾಂದೋಲನ ಆರಂಭಿಸಿದ್ದರು. ಬೊಲ್ಸೆನಾರೊ ಅವರ ಲಕ್ಷಾಂತರ ಸಾವು–ನೋವುಗಳಿಗೆ, ಭಾರಿ ಬೆಲೆ ಏರಿಕೆ ಕಾರಣವಾದ ಕೊವಿಡ್ ಮತ್ತು ಆರ್ಥಿಕ ನಿರ್ವಹಣೆಯಲ್ಲಿ ತೀವ್ರ ವೈಫಲ್ಯ, ಅಮೆಝೂನ್ ಕಾಡುನಾಶಕ್ಕೆ ಕಾರಣವಾದ ಪರಿಸರ–ಮಾರಕ ಕ್ರಮಗಳು, ಸಾಮಾಜಿಕ ಪ್ರತಿಗಾಮಿ ಕ್ರಮಗಳು, ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ವಿರುದ್ಧ ಸರಣಿ ಪ್ರತಿಭಟನೆ ಪ್ರತಿರೋಧಗಳನ್ನು ಸಂಘಟಿಸಲಾಯಿತು. ಟ್ರಂಪ್–ಮೋದಿ ಮಾದರಿಯ ಬೊಲ್ಸೆನಾರೊ ಅವರ ಉಗ್ರ ಬಲಪಂಥೀಯ ರಾಜಕಾರಣ ದೇಶದ ಮುಂದಿರುವ ದೊಡ್ಡ ಅಪಾಯ ಎಂದು ಭಾವಿಸಲಾಯಿತು. ಬೊಲ್ಸೆನಾರೊ ಅವರು ಸಾರ್ವತ್ರಿಕವಾಗಿ ಟೀಕೆಗೆ ಒಳಗಾಗಿರುವ ದೇಶದ ಹಿಂದಿನ ಮಿಲಿಟರಿ ಸರ್ವಾಧಿಕಾರವನ್ನು ಮೆಚ್ಚಿಕೊಳ್ಳುವುದು, ಪ್ರಜಾಪ್ರಭುತ್ವ ಸಂಸ್ಥೆಗಳ ಅವಹೇಳನ, ಚುನಾವಣಾ ವ್ಯವಸ್ಥೆಯನ್ನು ಪದೇ ಪದೇ ಶಂಕಿಸಿ ಟೀಕಿಸುವುದು, ಇತ್ಯಾದಿಗಳಿಂದ ತಮ್ಮ ಪ್ರಜಾಪ್ರಭುತ್ವ–ವಿರೋಧಿ ಸರ್ವಾಧಿಕಾರಿ ಧೋರಣೆಯನ್ನು ಸ್ಪಷ್ಟ ಪಡಿಸಿದ್ದರು. ತಾವು ಚುನಾವಣೆ ಸೋಲುವ ಪ್ರಶ್ನೆಯೇ ಇಲ್ಲ, ಒಂದೊಮ್ಮೆ ಸೋತರೆ ಅದರರ್ಥ ಚುನಾವಣಾ ಅಕ್ರಮವಾಗಿದೆ ಅಂತ. ಸೋತರೂ ಅಧಿಕಾರ ಬಿಟ್ಟುಕೊಡುವುದಿಲ್ಲ ಎಂಬ ಇತ್ತೀಚಿನವರೆಗಿನ ಹೇಳಿಕೆಗಳು, ಮತ್ತೆ ಮಿಲಿಟರಿ ಸರ್ವಾಧಿಕಾರದ ಅಪಾಯವನ್ನು ಸೃಷ್ಟಿಸಿದ್ದವು. ಕಳೆದ ಚುನಾವಣೆಯಿಂದಲೇ ಬೊಲ್ಸೆನಾರೋ ಗೆ ಭಾರೀ ದೇಶಿ/ವಿದೇಶಿ ಕಾರ್ಪೊರೇಟುಗಳು, ಸಾಮೂಹಿಕ ಮಾಧ್ಯಮಗಳು, ಮಿಲಿಟರಿ ಅಧಿಕಾರಿಗಳು, ಅಮೆರಿಕನ್ ಸರಕಾರಗಳ ಬೆಂಬಲವಿರುವ ಹಿನ್ನೆಲೆಯಲ್ಲಿ ಈ ಅಪಾಯ ಗಂಭೀರವಾದದ್ದೇ.



ಈ ಸನ್ನಿವೇಶದಲ್ಲಿ ಪ್ರಜಾಪ್ರಭುತ್ವ ರಕ್ಷಿಸುವುದು ಮುಖ್ಯವೆಂದು ಭಾವಿಸಿ ಬೊಲ್ಸೆನಾರೊ ವಿರುದ್ಧ ಲುಲಾ ವಿಶಾಲ ಕೂಟ ನಿರ್ಮಿಸಿದ್ದರು. ಎಡ–ನಡುಪಂಥೀಯ ಅಲ್ಲದೆ ಕೆಲವು ಪ್ರಜಾಪ್ರಭುತ್ವವಾದಿ ಬಲಪಂಥೀಯ ಪಕ್ಷಗಳು ಶಕ್ತಿಗಳನ್ನೂ ಕೂಟಕ್ಕೆ ಸೇರಿಸಿದ್ದರು. ವರ್ಕರ್ಸ್ ಪಾರ್ಟಿ ಹಾಗೂ ಕಮ್ಯುನಿಸ್ಟ್, ಗ್ರೀನ್ ಪಾರ್ಟಿಗಳು ಅಧ್ಯಕ್ಷೀಯ ಮತ್ತು ಪಾರ್ಲಿಮೆಂಟರಿ ಚುನಾವಣೆಗಳಿಗೂ ಮೈತ್ರಿಕೂಟ ರಚಿಸಿದ್ದವು. ಅಧ್ಯಕ್ಷೀಯ ಚುನಾವಣೆಗೆ 11 ಪಕ್ಷಗಳ ವಿಶಾಲ ಕೂಟ ರಚಿಸಿದರು. ತಮ್ಮ ಉಪಾಧ್ಯಕ್ಷ ಅಭ್ಯರ್ಥಿಯಾಗಿ ಅವರು ಹಿಂದೆ ಸೋಶಿಯಲ್ ಡೆಮೊಕ್ರಾಟಿಕ್ ಪಾರ್ಟಿ ಯ ನಾಯಕರಾಗಿದ್ದ ಗೆರಾಲ್ಡೊ ಅಲ್ಕ್ ಮಿನ್ ನ್ನು ಆಯ್ಕೆ ಮಾಡಿದರು. ಅವರು 2006 ಅಧ್ಯಕ್ಷೀಯ ಚುನಾವಣೆಯಲ್ಲಿ ಲುಲಾ ವಿರುದ್ಧ ಸ್ಪರ್ಧಿಸಿದ್ದರು. 2018ರಲ್ಲಿ ಸಹ ಲುಲಾ ಭ್ರಷ್ಟರು ಎಂದು ಆಪಾದಿಸಿ ಅವರಿಗೆ ಜೈಲುಶಿಕ್ಷೆಯನ್ನು ಬೆಂಬಲಿಸಿದ್ದರು. ಆದರೆ ಅಭ್ಯರ್ಥಿಯಾದ ಮೇಲೆ ಈ ವಿಶಾಲ ಕೂಟದ ಸ್ತಂಭವಾದರು.

ವಿಶಾಲ ಕೂಟವೇ ಮುಳುವಾಯಿತೇ?

ಆದರೆ ಈ ವಿಶಾಲ ಕೂಟ ಎಡ–ನಡು–ಬಲ ಶಕ್ತಿಗಳನ್ನು ಅಣಿ ನೆರೆಸಿ ಮೊದಲ ಸ್ಥಾನ ಗಳಿಸಲು ಸಾಧ್ಯವಾದರೂ, ಲುಲಾ ಮತ್ತು ಎಡ ಶಕ್ತಿಗಳು ಇದಕ್ಕೆ ಬೆಲೆ ಸಹ ತೆರಬೇಕಾಗಿದೆ. ಪ್ರಜಾಪ್ರಭುತ್ವಕ್ಕೆ ಅಪಾಯ ಮುಖ್ಯ ಘೋಷಣೆಯಾದ್ದರಿಂದ ಮುಂಬರುವ ಅವಧಿಯಲ್ಲಿ ನವಉದಾರವಾದ–ವಿರೋಧಿ ಎಡ ಜನಪರ ನೀತಿಗಳನ್ನು, ಹೊಸ ಕಲ್ಯಾಣ ಯೋಜನೆಗಳನ್ನು ಪ್ರಸ್ತುತಪಡಿಸುವುದು ಸಾಧ್ಯವಾಗಿಲ್ಲ. ಪ್ರಚಾರದಲ್ಲಿ ಲುಲಾ ತನ್ನ ಹಿಂದಿನ ಅಧ್ಯಕ್ಷೀಯ ಅವಧಿಗಳ ಜನಪರ ಕಲ್ಯಾಣ ಯೋಜನೆಗಳ ಕುರಿತು ಮಾತ್ರ ಮಾತನಾಡುವುದು ಸಾಧ್ಯವಾಯಿತು. ರಾಜಕೀಯವಾಗಿ ಹಿಂದುಳಿದ ಜನತೆಯ ಹಲವು ವಿಭಾಗಗಳಿಗೆ ಜನಪರ ಕಲ್ಯಾಣ ಯೋಜನೆಗಳು ತಟ್ಟಿದಷ್ಟು ಪ್ರಜಾಪ್ರಭುತ್ವಕ್ಕೆ ಅಪಾಯ ಇತ್ಯಾದಿ ತಟ್ಟುವುದಿಲ್ಲ. ಬ್ರೆಜಿಲ್ ನ ಕ್ಯಾಥೊಲಿಕ್ ಹಿನ್ನೆಲೆ ಮತ್ತು ಸಾಮಾಜಿಕ ಸಾಂಪ್ರದಾಯಿಕತೆ ಪ್ರಬಲವಾಗಿರುವ ಹಿನ್ನೆಲೆಯಲ್ಲಿ ಮಹಿಳೆಯರ ಗರ್ಭಪಾತ ಹಕ್ಕಿನ ಅಪಾಯಗಳು, ಅಪರಾಧದ ವಿರುದ್ಧ ಕಟು ಕ್ರಮಗಳ ಅಗತ್ಯತೆ ಗಳನ್ನು ಮುನ್ನೆಲೆಗೆ ತಂದು ಜನರನ್ನು ದಾರಿತಪ್ಪಿಸುವ ಬೊಲ್ಸೆನಾರೊ ಉಗ್ರ ಬಲಪಂಥೀಯ ಕ್ರಮಗಳು ಹೆಚ್ಚು ಯಶಸ್ವಿಯಾದವು. ಎಡ–ನಡುಪಂಥೀಯ ಉದಾರವಾದಿಗಳು ಧರ್ಮವಿರೋಧಿ, ಸಾಮಾಜಿಕ ಸಾಮರಸ್ಯ ಮತ್ತು ಶಿಸ್ತು ಹಾಳುಮಾಡುವವರು ಎಂಬ ಚರ್ಚೆನ ➚

“ಕ್ಯಾರೆಕ್ಟರ್ ಸರ್ಟಿಫಿಕೇಟ್ ಕೇಳುವ ಅಭೂತಪೂರ್ವ ಅಸಂಬದ್ಧ ಆಣತಿ” ಹರ್ಯಾಣ ಸರಕಾರದ ಕ್ರಮಕ್ಕೆ ದಿಲ್ಲಿ ಪತ್ರಕರ್ತರ ಸಂಘದ ಬಲವಾದ ಖಂಡನೆ

ಬಿಲಾಸ್‌ಪುರಕ್ಕೆ ಪ್ರಧಾನಮಂತ್ರಿಯವರ ಭೇಟಿಯನ್ನು ವರದಿ ಮಾಡಲು ಬಯಸುವ ಎಲ್ಲಾ ಪತ್ರಕರ್ತರು ಸಿಐಡಿಗೆ ತಮ್ಮ ಚಾರಿತ್ರ್ಯದ ಪ್ರಮಾಣಪತ್ರವನ್ನು ಸಲ್ಲಿಸಬೇಕು ಎಂಬ ಹಿಮಾಚಲ ಪ್ರದೇಶ ಸರಕಾರದ ಆದೇಶಕ್ಕೆ ದಿಲ್ಲಿ ಪತ್ರಕರ್ತರ ಸಂಘ (ಡಿಯುಜೆ) ದಿಗ್ಭ್ರಮೆ ವ್ಯಕ್ತಪಡಿಸಿದೆ. ಈ ಕೆಟ್ಟದಾಗಿ ಯೋಜಿಸಿರುವ ಆದೇಶವನ್ನು ಹಿಂಪಡೆಯುವ ಸರ್ಕಾರದ ಕೊನೆಯ ಕ್ಷಣದ ಕ್ರಮವನ್ನು ನಾವು ಸ್ವಾಗತಿಸುತ್ತೇವೆ ಎಂದೂ ಅದು ಹೇಳಿದೆ.

ಇದು ಪತ್ರಿಕಾರಂಗವನ್ನು ಹೆದರಿಸಿ ಮಣಿಸಲು ಅಧಿಕಾರದ ಪ್ರಯೋಗದ ಅಶುಭಕಾರೀ ಕಸರತ್ತು. ಜಿಲ್ಲಾಡಳಿತದ ಆದೇಶವು ಎಂತಹ ವಿವಾದವನ್ನು ಹುಟ್ಟುಹಾಕಿದೆ ಎಂದರೆ ಹಿಮಾಚಲ ಪೊಲೀಸ್ ಮುಖ್ಯಸ್ಥರು ಅಕ್ಟೋಬರ್ 5, 2022 ಕ್ಕೆ ನಿಗದಿತ ಭೇಟಿಗೆ ಒಂದು ದಿನ ಮುಂಚಿತವಾಗಿ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಮಾಡಬೇಕಾಗಿ ಬಂದಿದೆ ಎಂದು ಡಿಯುಜೆ ಹೇಳಿದೆ.

“ಪತ್ರಕರ್ತರ ಮೇಲೆ ಇಂತಹ ಅತಿಯಾದ ಕಣ್ಗಾವಲು ನಮ್ಮ ಕೆಲಸವನ್ನು ದಿನದಿಂದ ದಿನಕ್ಕೆ ಕಷ್ಟಕರವಾಗಿಸುತ್ತದೆ. ’ಕ್ಯಾರೆಕ್ಟರ್ ಸರ್ಟಿಫಿಕೇಟ್’ ಆಣತಿ ಅಸಂಬದ್ಧವಾಗಿ ಕಾಣುತ್ತದೆ, ಇದು ಜಿಲ್ಲಾಡಳಿತದ ಮಿತಿಮೀರಿದ ಉತ್ಸಾಹದ ಕ್ರಮವಷ್ಟೇ ಅಲ್ಲ, ಇದೊಂದು ಪತ್ರಿಕಾರಂಗದ ಬಾಯಿ ಮುಚ್ಚಿಸುವ ಪ್ರಸ್ತುತ ಕಾಲದ ಅಪಾಯಕಾರಿ ಪ್ರವೃತ್ತಿಯ ವಾಸನೆ ಹ’ೂಡ’೦ು’ುುವ’ ಅಬ’ೂತ’ಪ’ೂವ’ರ್ ಅಶುಭಕಾರೀ ಕ್ರಮ. ಪತ್ರಕರ್ತರ ಬಗ್ಗೆ ಆಳವಾಗಿ ಬೇರೂರಿರುವ ಅನುಮಾನ ಮತ್ತು ಸರ್ಕಾರಿ ಕಚೇರಿಗಳು, ಸಚಿವಾಲಯಗಳು ಮತ್ತು ಸಂಸತ್ತಿಗೆ ಕೂಡ ನಮ್ಮ ಪ್ರವೇಶವನ್ನು ತಡೆಯಲು ಹೆಚ್ಚುತ್ತಿರುವ ಕ್ರಮಗಳು ಕೇಂದ್ರದಿಂದ ಆಯ್ದ ರಾಜ್ಯಗಳವರೆಗೆ ಈ ಆಡಳಿತದ ವಿಶಿಷ್ಟ ಲಕ್ಷಣವಾಗಿ ಬಿಡುತ್ತಿದೆ. ತಮ್ಮ ಒಲವಿನ ಕೆಲವರಿಗೆ ಮಾತ್ರ ಪ್ರವೇಶವನ್ನು ನೀಡಲಾಗುತ್ತದೆ, ಇದು ಆಡಳಿತವನ್ನು ಕಡಿಮೆ ಪಾರದರ್ಶಕವಾಗಿಸುತ್ತದೆ. ಇದರಲ್ಲಿ ನಮ್ಮ ಸಂವಿಧಾನದ ಪ್ರಜಾಸತ್ತಾತ್ಮಕ ಚೈತನ್ಯವನ್ನು ಹೊಡೆದು ಹಾಕುವ ಮತ್ತು ಅಘೋಷಿತ ತುರ್ತು ಪರಿಸ್ಥಿತಿಯಂತಹ ಅಪಾಯಕಾರಿ ಪರಿಸ್ಥಿತಿಯ ವಾಸನೆ ಬಡಿಯುತ್ತಿದೆ. ಇದರ ಚಿಹ್ನೆಗಳು ಈಗಾಗಲೇ ಗೋಚರಿಸುತ್ತಿವೆ” ಎಂದು ದಿಲ್ಲಿ ಪತ್ರಕರ್ತರ ಸಂಘದ ಈ ಹೇಳಿಕೆ ಖೇದ ವ್ಯಕ್ತಪಡಿಸಿದೆ.



ಕ್ಯಾರೆಕ್ಟರ್ ಸರ್ಟಿಫಿಕೇಟ್! ವ್ಯಂಗ್ಯಚಿತ್ರ ಕೃಪೆ:: ಸತೀಶ ಆಚಾರ್ಯ

ನಿಷೇಧಗಳು ಪರಿಣಾಮಕಾರಿಯಾಗಿಲ್ಲ, ಅದು ಸಮಸ್ಯೆಯನ್ನು ನಿಭಾಯಿಸುವ ಮಾರ್ಗವಲ್ಲ ವಿಭಜನಕಾರೀ ರಾಜಕೀಯವನ್ನು ಬಯಲಿಗೆಳೆಯಬೇಕು

– ಪಿಎಫ್‌ಐ ನಿಷೇಧದ ಕುರಿತು ಪೊಲಿಟ್‌ಬ್ಯುರೊ

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಉಗ್ರಗಾಮಿ ದೃಷ್ಟಿಕೋನಗಳನ್ನು ಹೊಂದಿರುವ ಸಂಘಟನೆಯಾಗಿದ್ದು, ತಾನು ವಿರೋಧಿಗಳೆಂದು ಬಗೆಯುವವರ ವಿರುದ್ಧ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಸಿಪಿಐ(ಎಂ) ಈ ಉಗ್ರಗಾಮಿ ದೃಷ್ಟಿಕೋನಗಳನ್ನು ಬಲವಾಗಿ ವಿರೋಧಿಸುತ್ತ ಬಂದಿದೆ ಮತ್ತು ಪಿಎಫ್‌ಐನ ಹಿಂಸಾತ್ಮಕ ಚಟುವಟಿಕೆಗಳನ್ನು ಯಾವಾಗಲೂ ಖಂಡಿಸಿದೆ. ಆದಾಗ್ಯೂ, ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ(ಯುಎಪಿಎ) ಅಡಿಯಲ್ಲಿ ಪಿಎಫ್‌ಐ ಅನ್ನು ಕಾನೂನುಬಾಹಿರ ಸಂಘವೆಂದು ಸಾರಿರುವ ಅಧಿಸೂಚನೆಯು ಈ ಸಮಸ್ಯೆಯನ್ನು ನಿಭಾಯಿಸುವ ಮಾರ್ಗವಲ್ಲ. ಆರ್‌ಎಸ್‌ಎಸ್ ಮತ್ತು ಮಾವೋವಾದಿಗಳಂತಹ ಸಂಘಟನೆಗಳ ಮೇಲಿನ ನಿಷೇಧಗಳು ಪರಿಣಾಮಕಾರಿಯಾಗಿಲ್ಲ ಎಂಬುದು ಹಿಂದಿನ ಅನುಭವದಿಂದ ಸಾಬೀತಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಪಿಎಫ್‌ಐ ಕಾನೂನುಬಾಹಿರ ಅಥವಾ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಾಗ ಅದರ ವಿರುದ್ಧ ಅಸ್ತಿತ್ವದಲ್ಲಿರುವ ಕಾನೂನುಗಳ ಅಡಿಯಲ್ಲಿ ದೃಢವಾದ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು, ಅದರ ಸಂಕುಚಿತ ಪಂಥವಾದಿ ಮತ್ತು ವಿಭಜಕ ಸಿದ್ಧಾಂತವನ್ನು ಜನರ ನಡುವೆ ಬಯಲಿಗೆಳಯಬೇಕು ಮತ್ತು ಅದರ ವಿರುದ್ಧ ರಾಜಕೀಯವಾಗಿ ಹೋರಾಡಬೇಕು ಎಂದು ಅದು ಹೇಳಿದೆ.

ಕೋಮು ಧ್ರುವೀಕರಣವನ್ನು ಸೃಷ್ಟಿಸುವ ಉದ್ದೇಶದಿಂದ ಪಿಎಫ್‌ಐ ಮತ್ತು ಆರ್‌ಎಸ್‌ಎಸ್ ಕೇರಳ ಮತ್ತು ಕರಾವಳಿ ಕರ್ನಾಟಕದಲ್ಲಿ ಹತ್ಯೆಗಳು ಮತ್ತು ಪ್ರತೀಕಾರದ ಹತ್ಯೆಗಳಲ್ಲಿ ತೊಡಗಿ ವಾತಾವರಣವನ್ನು ಕೆಡಿಸುತ್ತಿವೆ. ‘ಸನಾತನ ಸಂಸ್ಥಾ’ ಮತ್ತು ‘ಹಿಂದೂ ಜನಜಾಗೃತಿ ಸಮಿತಿ’ಯಂತಹ ಉಗ್ರಗಾಮಿ ಸಂಘಟನೆಗಳೂ ಇವೆ, ಇವುಗಳಿಗೆ ಸೇರಿದವರು ಪ್ರಖ್ಯಾತ ಜಾತ್ಯತೀತ ಲೇಖಕರು ಮತ್ತು ವ್ಯಕ್ತಿಗಳ ಹತ್ಯೆಗಳ ಆರೋಪಿಗಳಾಗಿವೆ ಎಂದು ನೆನಪಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಈ ಎಲ್ಲಾ ಶಕ್ತಿಗಳನ್ನು, ಅವು ಯಾವುದೇ ಉಗ್ರಗಾಮಿ ಬಹುಸಂಖ್ಯಾತ ಗುಂಪುಗಳನ್ನು ಅಥವಾ ಅಲ್ಪಸಂಖ್ಯಾತ ಗುಂಪುಗಳನ್ನು ಪ್ರತಿನಿಧಿಸುತ್ತಿರಲಿ, ನಾಡಿನ ಎಂದಿನ ಕಾನೂನುಗಳನ್ನು ಬಳಸಿಕೊಂಡು ಮತ್ತು ದೃಢವಾದ ಆಡಳಿತಾತ್ಮಕ ಕ್ರಮದ ಮೂಲಕ ಎದುರಿಸಬೇಕು ಎಂದಿದೆ.

ಅಂತಹ ಶಕ್ತಿಗಳನ್ನು ಎದುರಿಸುತ್ತ ಗಣರಾಜ್ಯದ ಜಾತ್ಯತೀತ–ಪ್ರಜಾಪ್ರಭುತ್ವದ ಸ್ವರೂಪವನ್ನು ಕಾಯ್ದುಕೊಳ್ಳುವುದು ಅಧಿಕಾರವನ್ನು ಚಲಾಯಿಸುವ ಮತ್ತು ಸಂವಿಧಾನವನ್ನು ಎತ್ತಿಹಿಡಿಯುವ ಪ್ರತಿಜ್ಞೆ ಮಾಡಿದವರ ಪ್ರಧಾನ ಕರ್ತವ್ಯವಾಗಿರಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.

➘ ಒಂದು ವಿಭಾಗದ ಪ್ರಚಾರ ಸಹ ಲುಲಾ ಕೂಟಕ್ಕೆ ಮುಳುವಾದಂತಿದೆ. ಅದರಲ್ಲೂ ಬಡಜನರಲ್ಲಿ ಬಲವಾಗಿರುವ ಇವೆಂಜಲಿಸ್ಟ್ ಕ್ರಿಶ್ಚಿಯನ್ ಪಂಥಗಳು ಬೊಲ್ಸೆನಾರೊ ಪ್ರಚಾರಸಭೆಗಳಲ್ಲಿ ನೇರವಾಗಿ ಭಾಗವಹಿಸಿದ್ದು ವ್ಯಾಪಕವಾಗಿ ಕಂಡು ಬಂದಿದೆ. ಎಡ ಜನಪರ ನೀತಿಗಳನ್ನು, ಹೊಸ ಕಲ್ಯಾಣ ಯೋಜನೆಗಳನ್ನು ಚುನಾವಣಾ ವಿಷಯವಾಗಿ ಮುನ್ನೆಲೆಗೆ ತಂದಿದ್ದರೆ ಉಗ್ರಬಲಪಂಥವನ್ನು ಹಿಮ್ಮೆಟ್ಟಿಸಬಹುದಿತ್ತು. ಇವೆಲ್ಲ ಉಗ್ರ ಬಲಪಂಥ ವಿಶೇಷವಾಗಿ ಮತ್ತು ಬಲಪಂಥ ಸಾಮಾನ್ಯವಾಗಿ ಪ್ರಬಲವಾಗಿ ಹೊಮ್ಮಿದ್ದಕ್ಕೆ ಕಾರಣ ಎಂದು ಹೇಳಲಾಗಿದೆ.

ಅಧ್ಯಕ್ಷೀಯ ಮತ್ತು ಗವರ್ನರ್ ಚುನಾವಣೆಗಳ ಎರಡನೆಯ ಸುತ್ತಿನಲ್ಲಿ ಇದನ್ನು ವಿಶೇಷವಾಗಿ ಗಮನಿಸಿ ಬೊಲ್ಸೆನಾರೊ ಉಗ್ರಬಲಪಂಥವನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಬೇಕಾಗಿದೆ. ಎರಡನೆಯ ಸುತ್ತಿನಲ್ಲಿ ಲುಲಾ ಗೆಲ್ಲುವ ಸಾಧ್ಯತೆಗಳು ಹೆಚ್ಚು. ಆದರೆ ಬೊಲ್ಸೆನಾರೊ ಉಗ್ರಬಲಪಂಥ ಬಲವಾದ ಪೈಪೋಟಿ ನೀಡುತ್ತದೆ. ಗೆಲ್ಲಲು ಏನೂ ಮಾಡುವುದಕ್ಕೆ ಹೇಸುವುದಿಲ್ಲ. ಮೊದಲ ಸುತ್ತಿನಲ್ಲೇ ಸಾಕಷ್ಟು ಹಿಂಸಾಚಾರ ನಡೆಸಿದೆ. ಮಿಲಿಟರಿ ಕ್ಷಿಪ್ರಕ್ರಾಂತಿಯ ಅಪಾಯವೂ ಇದೆ. ಒಂದೊಮ್ಮೆ ಗೆದ್ದರೂ ಲುಲಾ ಎಡ ಜನಪರ ನೀತಿಗಳು ಮತ್ತು ಹೊಸ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡುವುದು ಕಷ್ಟವಾಗಬಹುದು. ಇದು ಬಲಪಂಥ ಇನ್ನಷ್ಟು ಗಟ್ಟಿಗೊಳ್ಳುವ ಸಾಧ್ಯತೆಯನ್ನು ತೆರೆಯುತ್ತದೆ. ಹಾಗಾಗಿ ಎಡಶಕ್ತಿಗಳು ತಳ ಮಟ್ಟದಲ್ಲಿ ಜನತೆಯ ಚಳುವಳಿ ಕಟ್ಟುವ ಮೂಲಕ ಈ ರೀತಿಯ ನೀತಿಗಳು ಕ್ರಮಗಳಿಗೆ ಒತ್ತಾಯ ಹೇರಬೇಕಾಗಿದೆ. ಕಮ್ಯುನಿಸ್ಟ್ ಪಕ್ಷ ಇಂತಹ ಅಣಿನೆರೆಸುವಿಕೆಗೆ ಈಗಾಗಲೇ ಕರೆ ಕೊಟ್ಟಿದೆ. ಲುಲಾ ಗೆದ್ದರೆ ಲ್ಯಾಟಿನ್ ಅಮೆರಿಕದ ಎಳೆಗೆಂಪು ಅಲೆ ಪೂರ್ಣವಾಗಿ ಅಂತರಾಷ್ಟ್ರೀಯವಾಗಿ ಪೂರಕ ವಾತಾವರಣವಂತೂ ಇರುತ್ತದೆ.

ರೂಪಾಯಿ ಮೌಲ್ಯ ಇಳಿಕೆಯ ಹಿಂದಿದೆ ಆಳವಾದ ಕಾಯಿಲೆ

ಪುಟ 13 ರಿಂದ

ಮುಂಚಿತವಾಗಿಯೇ ಉಂಟಾಗಿದ್ದ ಈ ಹಣದುಬ್ಬರವು, "ಸುಲಭ ಹಣ ಲಭ್ಯತೆ"ಯ ನೀತಿಯನ್ನು ಫೆಡರಲ್ ರಿಸರ್ವ್ ನಿಲ್ಲಿಸಿದ್ದರೂ ಸಹ, ಬಡ್ಡಿ ದರಗಳನ್ನು ಹೆಚ್ಚಿಸುವಂತೆ ಮಾಡುತ್ತಿದೆ. ಇದರ ಅರ್ಥವೆಂದರೆ, ಬಂಡವಾಳದ ನಿವ್ವಳ ಹರಿವಿನ ದಿಕ್ಕು ತಿರುಗುಮುರುಗಾಗಿದೆ. ಇದು ಫೆಡರಲ್ ರಿಸರ್ವ್‌ನಿಂದಾದ ಒಂದು ತಾತ್ಕಾಲಿಕ ಮಾರ್ಗಚ್ಯುತಿಯಲ್ಲ. ಬದಲಾಗಿ, ಶಾಶ್ವತವಾಗಿ ಉಳಿಸಿಕೊಳ್ಳಲಾಗದ ಮತ್ತು ಕೊನೆಗೊಳ್ಳಬೇಕಾದ ಶೂನ್ಯ ಬಡ್ಡಿದರದ ಅವಧಿಯನ್ನು ಒಂದು ತಾತ್ಕಾಲಿಕ ಮಾರ್ಗಚ್ಯುತಿ ಎನ್ನಬಹುದು. ಫೆಡರಲ್ ರಿಸರ್ವ್‌ಗೆ ಪ್ರತಿಕ್ರಿಯೆಯಾಗಿ ಭಾರತದಂತಹ ದೇಶಗಳು ಬಡ್ಡಿ ದರಗಳನ್ನು ಹೆಚ್ಚಿಸುತ್ತಿದ್ದರೂ ಸಹ, ಹಣದ ಸುಲಭ ಲಭ್ಯತೆಯ ಹಿಂದಿನ ಅವಧಿಗೆ ಮರಳುವುದು ಮುಂಬರುವ ದಿನಗಳಲ್ಲಿ ಸಾಧ್ಯವಾಗುವುದಿಲ್ಲ.

ನಮ್ಮ ಚಾಲ್ತಿ ಖಾತೆಯ ಕೊರತೆಯು ವಿಸ್ತಾರಗೊಳ್ಳುತ್ತಿರುವಾಗ, ಈ ಕೊರತೆಯನ್ನು ಸರಿದೂಗಿಸಿಕೊಳ್ಳುವಷ್ಟು ಹಣ ಹೊಂದಿಸಿಕೊಳ್ಳುವುದು ಕಷ್ಟಕರವಾಗುತ್ತಿದೆ. ಏಕೆಂದರೆ, ಹಣಕಾಸು ಇನ್ನು ಮುಂದೆ ಸುಲಭವಾಗಿ ಲಭ್ಯವಿರುವುದಿಲ್ಲ (ಆರ್‌ಬಿಐ ಬಡ್ಡಿ ದರಗಳನ್ನು ಹೆಚ್ಚಿಸುವ ಮೂಲಕ ಬಂಡವಾಳದ ನಿವ್ವಳ ಹೊರಹರಿವು ಕೊನೆಗೊಂಡರೂ ಸಹ). ವಿನಿಮಯ ದರಗಳ ಇಳಿಕೆ, ಅದರ ಪರಿಣಾಮವಾಗಿ ಉಲ್ಬಣಗೊಳ್ಳುವ ಹಣದುಬ್ಬರ ಮತ್ತು ಹೆಚ್ಚಿನ ನಿರುದ್ಯೋಗ (ಬಹುಶಃ ಹೆಚ್ಚು ಹೆಚ್ಚು ಜನರ ನಡುವೆ ನಿರ್ದಿಷ್ಟ ಸಂಖ್ಯೆಯ ಉದ್ಯೋಗಗಳನ್ನು ಹಂಚಿಕೊಳ್ಳುವ ಮೂಲಕ ಈ ನಿರುದ್ಯೋಗವನ್ನು ಮರೆಮಾಚಲಾಗಿದೆ) ಮತ್ತು ಅರ್ಥವ್ಯವಸ್ಥೆಯ ಸ್ಥಗಿತತೆ, ಇವು ಮುಂಬರುವ ದಿನಗಳಲ್ಲಿ ಸರ್ವಸಾಮಾನ್ಯವಾಗುತ್ತವೆ.

ಆಳವಾದ ಒಳಬೇನೆ

ಈ ಪರಿಸ್ಥಿತಿಯು ಒಂದು ಆಳವಾದ ಒಳಬೇನೆಯು ವ್ಯವಸ್ಥೆಯನ್ನು ಬಾಧಿಸುತ್ತಿದೆ ಎಂಬುದನ್ನು ಸೂಚಿಸುತ್ತದೆ. "ಮುಖ್ಯವಾಹಿನಿ" ಎಂದು ಕರೆಯಲಾದ ಸಾಂಪ್ರದಾಯಿಕ ಅರ್ಥಶಾಸ್ತ್ರೀಯ ಸಿದ್ಧಾಂತದ ಸಮಸ್ಯೆ ಎಂದರೆ, ಕರೆನ್ಸಿ ಪರಿಚಲನಾ ಕ್ಷೇತ್ರದ ಮೇಲೆ ಏಕಮಾತ್ರವಾಗಿ ಗಮನವನ್ನು ಕೇಂದ್ರೀಕರಿಸಿ ವರ್ಗ ಸಂಬಂಧಗಳನ್ನು ಮರೆಮಾಚಿ ತಾನು ಹೇಳಿದ್ದೇ ಸರಿ ಎಂದು ವಾದಿಸುವ ಅದರ ಸ್ವಭಾವ ಮಾತ್ರವಲ್ಲ, ಕರೆನ್ಸಿ ಪರಿಚಲನಾ ಕ್ಷೇತ್ರದ ಬಗ್ಗೆ ಅದರ ವಿಶ್ಲೇಷಣೆಯೂ ದೋಷಪೂರ್ಣವೇ. ಬೆಲೆಗಳು ಮುಕ್ತವಾಗಿ ಚಲಿಸಲು ಬಿಟ್ಟರೆ, ಕರೆನ್ಸಿ ಪರಿಚಲನಾ ಕ್ಷೇತ್ರದಲ್ಲಿ ಮಾರುಕಟ್ಟೆ ಸಮತೋಲನ ಇರುತ್ತದೆ ಎಂದು ಭಾವಿಸಲಾಗಿದೆ. ಆದರೆ, ಬೇಡಿಕೆ ಮತ್ತು ಪೂರೈಕೆಯಲ್ಲಿನ ಬದಲಾವಣೆಗಳಿಗೆ ತಕ್ಕಂತೆ ಚಲಿಸಲು ಸ್ವತಂತ್ರವಾಗಿದ್ದರೆ ಮೂರನೆಯ ಜಗತ್ತಿನ ದೇಶಗಳ ಕರೆನ್ಸಿಗಳಿಗೆ ವಿನಿಮಯ ದರ ಸಮತೋಲನ ಇರುವುದಿಲ್ಲ. ಏಕೆಂದರೆ, ಇತರ ಎಲ್ಲ ಅಂಶಗಳು ಸಮಾನವಾಗಿದ್ದಾಗ, ಶ್ರೀಮಂತರು ಮೊದಲ ಜಗತ್ತಿನವರಾಗಿರಲಿ ಅಥವಾ ಮೂರನೇ ಜಗತ್ತಿನವರಾಗಿರಲಿ, ತಮ್ಮ ಸಂಪತ್ತನ್ನು ಡಾಲರ್ ಅಥವಾ ಡಾಲರ್–ಹೆಸರು ಹೊಂದಿದ ಸ್ವತ್ತುಗಳಲ್ಲಿ ಇಟ್ಟುಕೊಳ್ಳಲು ಬಯಸುತ್ತಾರೆ (ಕೊನೆಯಪಕ್ಷ ಪಾಶ್ಚಾತ್ಯ ದೇಶಗಳ ಪ್ರಾಬಲ್ಯ ಇರುವವರೆಗೂ). ಈ ಪ್ರವೃತ್ತಿಯನ್ನು ತಪ್ಪಿಸುವ ಸಲುವಾಗಿ ಮೂರನೇ ಜಗತ್ತಿನ ದೇಶಗಳಲ್ಲಿ ಬಡ್ಡಿ ದರಗಳನ್ನು ಕಾರ್ಯಸಾಧ್ಯವಲ್ಲದಷ್ಟು ಉನ್ನತ ಮಟ್ಟದಲ್ಲಿ ನಿಗದಿಪಡಿಸಬೇಕಾಗುತ್ತದೆ. ಆದಾಗ್ಯೂ, ಈ ಕ್ರಮವು ಬಂಡವಾಳದ ನಿವ್ವಳ ಹೊರಹರಿವನ್ನು ತಡೆಯುವಲ್ಲಿ ವಿಫಲವಾಗಬಹುದು ಮತ್ತು ಈ ಕಾರಣದಿಂದಾಗಿ ಬೆಳವಣಿಗೆಯೂ ಕುಂಠಿತಗೊಳ್ಳಬಹುದು.

ಈ ಕಾರಣದಿಂದಾಗಿಯೇ ಮೂರನೆಯ ಜಗತ್ತಿನ ದೇಶಗಳು ವಿದೇಶ ವ್ಯಾಪಾರವನ್ನು ಮತ್ತು ವಿದೇಶಿ ಬಂಡವಾಳ ಹೂಡಿಕೆಯನ್ನು ನಿಯಂತ್ರಿಸಬೇಕಾಗುತ್ತದೆ. ಮತ್ತು, ಈ ಮೂಲಕ ಪರಿಸ್ಥಿತಿಯನ್ನು ನಿಭಾಯಿಸಬೇಕಾಗುತ್ತದೆ. ಏಕೆಂದರೆ, ನವ–ಉದಾರವಾದವು ತರ್ಕಸಂಗತವಲ್ಲ ಎಂಬುದು ಸ್ಪಷ್ಟವಾಗಿದೆ. ಈ ಮೂಲಭೂತ ಸಂಗತಿಯನ್ನು ಇಲ್ಲಿಯವರೆಗೆ ವಿಶ್ವ ಅರ್ಥವ್ಯವಸ್ಥೆಯ ಕೆಲವು ವಿಶೇಷ ಸನ್ನಿವೇಶಗಳಿಂದಾಗಿ ಗಮನ ಹರಿಸಲಾಗಿರಲಿಲ್ಲ. ಈಗ ಅದು ಬಯಲಿಗೆ ಬರುತ್ತಿದೆ. ಗಮನ ಹರಿಸಲೇಬೇಕಾಗುತ್ತದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE OCTOBER 10-16, 2022 Price: Rs. 10/- Date of Publication: 7 October 2022 RNI No. KARKAN /2006/17926 Posted on 10-10-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಕಾಂತಾರ: ಭೂಮಿ ಮತ್ತು ಬದುಕಿನ ರಕ್ಷಣೆಗಾಗಿನ ಹೋರಾಟದ ಮೇಲೆ ಬೆಳಕು ಚೆಲ್ಲುವ ಚಿತ್ರ



ಅಕ್ಟೋಬರ್ ಮೊದಲ ವಾರ ಕರ್ನಾಟಕದಲ್ಲಿ ನಾಲ್ಕು ಸಿನಿಮಾಗಳು ರಿಲೀಸ್ ಆಗಿದ್ದವು. ಅದರಲ್ಲಿ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶನ ಮಾಡಿರುವ ಕಾಂತಾರ ಸಿನಿಮಾ ಕೂಡ ಒಂದು. ಸಿನಿಮಾದ ಬಗ್ಗೆ ಬಹುತೇಕ ಪಾಸಿಟಿವ್ ರಿವ್ಯು ಬಂದಿರುವ ಕಾರಣದಿಂದಾಗಿ ಶುಕ್ರವಾರ ಬಿಡುಗಡೆ ಕಂಡ ಬಹುತೇಕ ಚಿತ್ರಮಂದಿರಗಳಲ್ಲಿ ಕಾಂತಾರ ಹೌಸ್ ಫುಲ್ ಪ್ರದರ್ಶನ ಕಂಡಿದೆ. ನೂರಾರು ಚಿತ್ರಮಂದಿರಗಳಲ್ಲಿ ಕಾಂತಾರ ಬಿಡುಗಡೆ ಆಗಿದ್ದು, ಕೋಟಿ ಕೋಟಿ ಹಣವನ್ನು ಬಾಚಿದೆ ಎಂದು ಅಂದಾಜಿಸಲಾಗಿದೆ. ಈ ಸಿನಿಮಾ ಕುರಿತು ಎಚ್.ಆರ್.ನವೀನ್ ಕುಮಾರ್, ಹಾಸನ ಮುನೀರ್ ಕಾಟಿಪಳ್ಳ ಅನಿಸಿಕೆ ಹಂಚಿಕೊಂಡಿದ್ದಾರೆ.

ಒಂದು ವಿಷಯವನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಜನರಿಗೆ ಮನಮುಟ್ಟಿಸುವ ಪರಿಣಾಮಕಾರಿ ಮಾಧ್ಯಮ ಸಿನಿಮಾ. ಈ ಸಿನಿಮಾ ಮಾಧ್ಯಮವನ್ನ ಪರಿಣಾಮಕಾರಿಯಾಗಿ ಬಳಸಿಕೊಂಡು ಯಶಸ್ವಿಯಾದ ನಿರ್ದೇಶಕರ ಸಾಲಿಗೆ ಈಗ ರಿಷಭ್ ಶೆಟ್ಟಿ ನಿಲ್ಲುತ್ತಾರೆ.

ಕರಾವಳಿಯ ಕಾಡಿನ ಜನರ ಬದುಕು, ಅವರ ಭೂಮಿ ಪ್ರಶ್ನೆ, ವಡೆಯರುಗಳು ಅವರನ್ನ ನಡೆಸಿಕೊಂಡ ಮತ್ತು ಬಳಸಿಕೊಂಡ ರೀತಿ, ಸರ್ಕಾರ, ಅರಣ್ಯ ಇಲಾಖೆ, ಜಾತಿಯ ಪ್ರಶ್ನೆ ಇವೆಲ್ಲವುಗಳ ಸುತ್ತ ಜನರ ನೈಜ ಬದುಕು ಮತ್ತು ಅದಕ್ಕಾಗಿ ಅವರು ನಂಬಿರುವ ಆಚರಣೆಗಳು, ದೈವಾರಾಧನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ತಮ್ಮ ಕತೆಯಲ್ಲಿ ಮತ್ತು ನಿರ್ದೇಶನದಲ್ಲಿ ರಿಷಭ್ ಶೆಟ್ಟಿ ದುಡಿಸಿಕೊಂಡಿದ್ದಾರೆ.

ಇಡೀ ಸಿನಿಮಾ ಒಂದು ರೀತಿಯಲ್ಲಿ ಕತ್ತಲೆಯ ಕಾಡಿನ ಕತೆಯಾಗಿದ್ದು ಕೊನೆಯಲ್ಲಿ ಸೀಟಿನಿಂದ ಮೇಲೆದ್ದು ಥಿಯೇಟರ್ ನಿಂದ ಹೊರಬರುವಾಗ ಕಾಡುವುದಂತೂ ಸತ್ಯ. ತಮ್ಮ ಭೂಮಿಗಾಗಿ ಹೋರಾಟ ಮಾಡುವ ಜನ ತಮ್ಮನ್ನು ಒಕ್ಕಲೆಬ್ಬಿಸುವವರೆಲ್ಲರ ವಿರುದ್ಧ ತಿರುಗಿ ಬೀಳುತ್ತಾರೆ. ನಮ್ಮ ಪ್ರಾಣ ಹೋದರೂ ತಲತಲಾಂತರದಿಂದ ವಾಸವಿರುವ ಭೂಮಿಯ ಹಕ್ಕನ್ನ ಬಿಡಲು ತಯಾರಾಗುವುದಿಲ್ಲ. ಅವರ ಈ ಹೋರಾಟಕ್ಕೆ ಅವರದ್ದೇ ನಂಬಿಕೆಯ ದೈವಾರಾದನೆಯ ಕೋಲ ಜೊತೆಯಾಗುತ್ತದೆ.

ಕತೆಯನ್ನ ನಿರೂಪಿಸಿರುವ ಶೈಲಿ ವಿಶೇಷವಾಗಿದೆ. ಅಲ್ಲಲ್ಲಿ ಕುತೂಹಲ ಹುಟ್ಟಿಸುವ (ಭಯ, ಗಾಬರಿ) ಕೊನೆಯವರೆಗೂ ಪ್ರೇಕ್ಷಕರನ್ನು ಹಿಡಿದಿಡುತ್ತದೆ. ಕೊನೆಯ 20 ನಿಮಿಷದಲ್ಲಿ ನಡೆಯುವ ಕ್ಲೈಮ್ಯಾಕ್ಸ್ ನಿಜವಾಗಲೂ ಒಬ್ಬ ನಿರ್ದೇಶಕನಾಗಿ ಮತ್ತು ಒಬ್ಬ ಕಲಾವಿದನಾಗಿ ರಿಷಬ್ ಶೆಟ್ಟಿಯನ್ನ ಗೆಲ್ಲಿಸಿದೆ. ಇಡೀ ಸಿನಿಮಾದಲ್ಲಿ ಎಲ್ಲರ ನಟನೆಯೂ ಅತ್ಯುತ್ತಮವಾಗಿ ಮೂಡಿಬಂದಿದೆ.

ಚಿತ್ರದ ವಸ್ತು ಜನರ ಬದುಕು ಮತ್ತು ಜಂಜಾಟ. ಭೂಮಿ ಮತ್ತು ಬದುಕಿನ ರಕ್ಷಣೆಗಾಗಿನ ಹೋರಾಟ:

ಕನ್ನಡ ಚಿತ್ರರಂಗಗಳಲ್ಲೂ ಉತ್ತಮ ಕಥಾವಸ್ತು, ಹೊಸ ರೀತಿಯ ಪ್ರಯೋಗಗಳು ನಡೆಯುತ್ತಿವೆ, ಇಲ್ಲಿಯವರೂ ಹೊಸ ರೀತಿಯಲ್ಲಿ ಆಲೋಚಿಸಯಲು ಪ್ರಾರಂಭಿಸಿದ್ದಾರೆ ಎನ್ನುವುದಕ್ಕೆ ಈ ಸಿನೆಮಾ ಒಂದು ಸಾಕ್ಷಿ. ಅಲ್ಲಲ್ಲಿ ಬಾಹುಬಲಿ ಮತ್ತು ಖಖಖ ಸಿನಿಮಾಗಳ ಕೆಲವು ದೃಶ್ಯಗಳನ್ನು ಅನುಕರಿಸಿದಂತೆ ಕಂಡರೂ ಸಂಪೂರ್ಣ ದೇಸೀ ಸೊಗಡು ಎದ್ದು ಕಾಣುತ್ತದೆ. ಮೊದಲಾರ್ಧದಲ್ಲಿ ಹಿನ್ನೆಲೆ ಸಂಗೀತ ಮಾತುಗಳನ್ನು ನುಂಗಿದಂತೆ ಕಂಡರೂ ಕೊನೆಯಲ್ಲಿ ಈ ಹಿನ್ನೆಲೆ ಸಂಗೀತವೇ ನಿರೂಪಣೆಗೆ ಶಕ್ತಿಯನ್ನು ತುಂಬಿದೆ.

ಎಲ್ಲರೂ ಸಿನಿಮಾ ಮಂದಿರಕ್ಕೆ ಬಂದು ಒಮ್ಮೆ ಸಿನಿಮಾ ನೋಡಿ. ಒಂದು ಅತ್ಯುತ್ತಮ ಮನೋರಂಜನೆ ಮತ್ತು ಯೋಚನೆಯ ವಸ್ತುವನ್ನಂತೂ ಖಂಡಿತಾ ಕೊಡುತ್ತದೆ. ಕೊಟ್ಟ ಕಾಸಿಗೆ ಮೋಸವಿಲ್ಲ.

–ಎಚ್.ಆರ್.ನವೀನ್ ಕುಮಾರ್, ಹಾಸನ.

ರಿಷಭ್ ಶೆಟ್ಟಿಯ ಸೈದ್ಧಾಂತಿಕ ನಿಲುವುಗಳು ನನಗೆ ತಿಳಿದಿಲ್ಲ. ಅಲ್ಲಿ ಇಲ್ಲಿ ಕಿವಿಗೆ ಬಿದ್ದ ಪ್ರಕಾರ ಬಲಪಂಥದಿಂದ ಒಂದಿಷ್ಟು ಪ್ರಭಾವಿತರಾಗಿದ್ದಾರೆ ಎಂಬುದು. ಮುಂದಕ್ಕೆ ಅವರ ಸಿನೆಮಾ ಕತೆಗಳು ಹೇಗಿರುತ್ತವೋ ಗೊತ್ತಿಲ್ಲ. ಆದರೆ, ಕಾಂತಾರ ಮಾತ್ರ ಇಷ್ಟ ಆಯ್ತು. ಹೌದು. ಸಿನೆಮಾದಲ್ಲಿ ತುಂಬಾ ಮಿತಿಗಳಿವೆ. ಅದು ರಿಷಭ್ ಮಿತಿಯೂ ಆಗಿರಬಹುದು. ಅಥವಾ ಸದ್ಯದ ಸಾಮಾಜಿಕ ವಾತಾವರಣದ ಪರಿಣಾಮವೂ ಇರಬಹುದು. ಲಾಜಿಕ್ಗಳ ಜೊತೆ ಸಿನೆಮಾ ನೋಡಿದರೆ ಕಾಂತಾರ ಹತ್ತಾರು ಪ್ರಶ್ನೆಗಳನ್ನು ಮೂಡಿಸುತ್ತದೆ. (ಲಾಜಿಕ್ ಕುರಿತು ಸಿನೆಮಾ ವೀಕ್ಷಿಸುವಾಗ ನಾನು ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ). ನಾನು ವಿಮರ್ಶೆ ಬರೆಯಲು ಹೋಗಲಿಲ್ಲ. ವಿಮರ್ಶೆಗಳ ಕುರಿತು ಕುತೂಹಲಿ ಆಗಿದ್ದೇನೆ. ಕಾಂತಾರ ತುಳುನಾಡಿನ ಪರಂಪರೆ, ಇತಿಹಾಸದ ಕುರಿತು ಚರ್ಚೆಗೆ ಒಂದು ಒಳ್ಳೆಯ ಅವಕಾಶ ಕಲ್ಪಿಸಿದೆ. ಅದು ನಡೆಯಲಿ. ಅದಕ್ಕಾಗಿ ರಿಷಭ್ ಶೆಟ್ಟಿಗೆ ಧನ್ಯವಾದ.

ಅಸ್ಪೃಶ್ಯ ಸಮುದಾಯದ ದಲಿತ ಪಾತ್ರವೊಂದು ಹೀರೋ ಆಗಿ ಕನ್ನಡ ಸಿನೆಮಾದಲ್ಲಿ ವಿಜೃಂಭಿಸಿರುವುದು, ಭೂ ಒಡೆಯನ ಬಂಗಲೆಗೆ ಆ ಪಾತ್ರ ನಿರ್ಭಿಡೆಯಿಂದ ಪ್ರವೇಶ ಮಾಡಿ ಧಣಿಯ ಸರಿಸಮಾನ ಕೂತು ಸ್ವತಹ ತಾನೆ ಬಡಿಸಿ ಉಣ್ಣುವುದು, ಊರ ಕೋಲದಲ್ಲಿ ಬ್ಯಾರಿ(ಮುಸ್ಲಿಂ) ಪಾತ್ರ ಗರ್ನಾಳ್ ಸಿಡಿಸುವುದು, ದಲಿತ ಪಾತ್ರವೊಂದನ್ನು ಮುಟ್ಟಿದ ಧಣಿ ತಕ್ಷಣವೇ ಕೈ ತೊಳೆದು ಕೊಳ್ಳುವುದು ಮುಂತಾದ ಸೀನ್ ಗಳು ನೀಡುವ ಸಂದೇಶಗಳು ಸಣ್ಣದಲ್ಲ. ಇನ್ನು ತುಳುನಾಡಿನ ದಲಿತ ಜಾತಿಗಳು ನಾನು ಕಂಡಂತೆ ತೀರಾ ಸೌಮ್ಯ ಸ್ವಭಾವದವು. ಘಟ್ಟದ ಮೇಲಿನಂತೆ ಇಲ್ಲಿ ರೆಬೆಲ್ (ತಿರುಗಿ ಬೀಳುವ) ಆಗಿ, ಆಕ್ರಮಣಕಾರಿಗಳಾಗಿ ಅವರು ನಡೆದು ಕೊಂಡದ್ದು ತೀರಾ ಅಪರೂಪ. ಅದು ದಲಿತ ಚಳವಳಿಗಳ ಕಾಲಘಟ್ಟದಲ್ಲಾದರೂ ಸರಿಯೆ. ಸಿನೆಮಾದಲ್ಲಿ ನಾಯಕ (ದಲಿತ ಸಮುದಾಯಕ್ಕೆ ಸೇರಿದ) ಮತ್ತವನ ಗೆಳೆಯರು ತೋರಿಸುವ "ಕಾರುಬಾರು" ಗಳು ಸಾಮಾನ್ಯವಾಗಿ ಆ ಸಮುದಾಯದಲ್ಲಿ ಇಲ್ಲಿ ಕಂಡುಬಂದದ್ದು ತೀರಾ ಅಪರೂಪ. (ನನ್ನ ತಿಳುವಳಿಕೆ ತಪ್ಪಿರಲೂ ಬಹುದು) ಈ ಎಲ್ಲಾ ಹಿನ್ನಲೆಯಲ್ಲಿ ತುಳುನಾಡಿನ ಹಿರಿಯ ದಲಿತ ಮುಂದಾಳು ಎಂ ದೇವದಾಸ್ ಸಹಿತ ಹಲವು ದಲಿತ ಗೆಳೆಯರಲ್ಲಿ ಸಿನೆಮಾ ನೋಡಿ ಅಭಿಪ್ರಾಯ ದಾಖಲಿಸುವಂತೆ ವಿನಂತಿಸಿದ್ದೇನೆ.

ಅದೇನೆ ಕೊರತೆಗಳು ಇದ್ದರೂ ಭೂ ಸಂಬಂಧಗಳನ್ನು ಸಿನೆಮಾದಲ್ಲಿ ವಸ್ತು ಆಗಿ ಆಯ್ಕೆ ಮಾಡಲಾಗಿದೆ. ತುಳು ಜನಪದವೂ ಸಿನೆಮಾವನ್ನು ಆವರಿಸಿಕೊಂಡಿದೆ. ಸಿನೆಮಾ ಒದಗಿಸಿರುವ ಭರಪೂರ ಮನೋರಂಜನೆ, ಸಿನೆಮಾದಲ್ಲಷ್ಟೆ ಹೀರೊ ಪಾತ್ರಕ್ಕೆ ಶಿಳ್ಳೆ ಅನ್ನುವಷ್ಟಕ್ಕೆ ಚರ್ಚೆಯನ್ನು ಸೀಮಿತಗೊಳಿಸಲು ಬಿಡದೆ ತುಳುನಾಡಿನ ಅನಾದಿ ಕಾಲದಿಂದಲೂ ನಡೆಯುತ್ತಾ ಬಂದಿರುವ ಉಳ್ಳವರ, ಇಲ್ಲದವರ ನಡುವಿನ ಸಂಘರ್ಷದ ಕಥನವನ್ನು ಈ ಸಿನೆಮಾದ ಹಿನ್ನಲೆಯಲ್ಲಿ ಚರ್ಚೆಗೆ ಎತ್ತಿಕೊಳ್ಳುವುದು ಬಹಳ ಮುಖ್ಯ. ತುಳುನಾಡು ಆರಾಧಿಸುವ ಬಬ್ಬರ್ಯ, ಕಲ್ಲುರ್ಟಿ, ಕಲ್ಕುಡ, ಕೋಟಿ ಚೆನ್ನಯ, ಕೋಡ್ದಬ್ಬು, ಕೊರಗ ತನಿಯ, ಕಾನದ ಕಟದರು, ಸಿರಿ ಮೊದಲಾದವು ತಮ್ಮೊಳಗೆ ಹುದುಗಿಸಿ ಕೊಂಡಿರುವ ಇತಿಹಾಸದ ಕತೆಗಳೇನು ಸಣ್ಣವೇ!. ವರ್ತಮಾನವನ್ನೇ ತಿರುಗಿಸಿ ನಿಲ್ಲಿಸಬಲ್ಲಷ್ಟು ಶಕ್ತಿ ಹೊಂದಿಲ್ಲವೇ ಅವು?

–ಮುನೀರ್ ಕಾಟಿಪಳ್ಳ

ಕಂಬಕ್ಕೆ ಕಟ್ಟಿ ಹಾಕಿ ದಲಿತ ಬಾಲಕನಿಗೆ ಥಳಿಸಿದ ಸವರ್ಣೀಯರು





ಸವರ್ಣೀಯರ ಗುಂಪೊಂದು 14 ವರ್ಷದ ದಲಿತ ಸಮುದಾಯದ ಬಾಲಕನನ್ನು ಕಂಬಕ್ಕೆ ಕಟ್ಟಿ ಹಾಕಿ ಮನಬಂದಂತೆ ಥಳಿಸಿರುವ ಘಟನೆ ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು ಕೆಂಪದೇನಹಳ್ಳಿಯಲ್ಲಿ ಗುರುವಾರ ರಾತ್ರಿ ನಡೆದಿದೆ. ಬಾಲಕನನ್ನು ರಕ್ಷಿಸಲು ಹೋದ ಪೋಷಕರ ಮೇಲೂ ಹಲ್ಲೆ ನಡೆಸಲಾಗಿದೆ.

ಚಿಂತಾಮಣಿ ತಾಲೂಕಿನಿಂದ 10 ಕಿಲೋ ಮೀಟರ್ ದೂರದಲ್ಲಿರುವ ಕೆಂಪದೇನಹಳ್ಳಿಯಲ್ಲಿ ಗುರುವಾರ ರಾತ್ರಿ 9 ಗಂಟೆ ಸುಮಾರಿನಲ್ಲಿ ಈ ಘಟನೆ ನಡೆದಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿಎಲ್ ನಾಗೇಶ್ ತಿಳಿಸಿದ್ದಾರೆ. ಶನಿವಾರ ಎಸ್ ಪಿ ಜೊತೆಗೆ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಎನ್ ಎಂ ನಾಗರಾಜ್, ಇದೊಂದು ದುರಾದೃಷ್ಟಕರ ಘಟನೆ ಎಂದಿದ್ದಾರೆ. ಬಾಲಕ ಹಾಗೂ ಆತನ ಪೋಷಕರಿಗೆ ತಲಾ 25,000 ರೂಪಾಯಿ ಪರಿಹಾರವನ್ನು ಅವರು ಪ್ರಕಟಿಸಿದ್ದಾರೆ. ಬಾಲಕನ ತಾಯಿ ರತ್ನ ನೀಡಿದ ದೂರಿನ ಆಧಾರದ ಮೇಲೆ ಮಹಿಳೆ ಸೇರಿದಂತೆ 10 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಸಂಬಂಧ ಮೂವರನ್ನು ಬಂಧಿಸಲಾಗಿದ್ದು, ಉಳಿದ ಆರೋಪಿಗಳ ಬಂಧನಕ್ಕಾಗಿ ತಂಡವೊಂದನ್ನು ರಚಿಸಲಾಗಿದೆ.

9 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಬಾಲಕ, ಸರ್ವಣೀಯ ಸಮುದಾಯಕ್ಕೆ ಸೇರಿದ 4 ವರ್ಷದ ಬಾಲಕಿಯೊಬ್ಬಳ ಕಿವಿಯಲ್ಲಿದ್ದ ಚಿನ್ನದ ಓಲೆಯನ್ನು ಕಳ್ಳತನ ಮಾಡಲು ಪ್ರಯತ್ನಿಸಿದ್ದ ಎಂದು ಆರೋಪಿಸಿ ಬಾಲಕನನ್ನು ಹಿಡಿದು ಕಟ್ಟಿಹಾಕಿ ಥಳಿಸಿದ್ದಾರೆ. ಇದನ್ನು ಪ್ರಶ್ನೆ ಮಾಡಿದ್ದ ಬಾಲಕನ ತಂದೆ–ತಾಯಿಯ ಮೇಲೆಯೂ ಹಲ್ಲೆ ನಡೆಸಿದ್ದಾರೆ. ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಆರೋಗ್ಯ ಪರಿಸ್ಥಿತಿ ಸ್ಥಿರವಾಗಿದೆ ಎಂದು ಎಸ್.ಪಿ. ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ, 'ಅಂಬೇಡ್ಕರ್ ಸೇವಾ ಸಮಿತಿ–ಕರ್ನಾಟಕ'ದ ಸಂಸ್ಥಾಪಕರಾದ ಸಂದೇಶ್ ಅವರು ಭೇಟಿ ನೀಡಿ ಕುಟುಂಬಕ್ಕೆ ನ್ಯಾಯ ಕೊಡಿಸುವ ಭರವಸೆ ನೀಡಿದ್ದಾರೆ. ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, "ಬಾಲಕನ ಮೇಲೆ ಸವರ್ಣೀಯರು ಹಲ್ಲೆ ಮಾಡುತ್ತಿರುವುದು ಇದುವೆ ಮೊದಲ ಬಾರಿ ಏನೂ ಅಲ್ಲ. ಈ ಹಿಂದೆಯು ಅವರ ಮೇಲೆ ದಾಳಿಗಳು ನಡೆದಿವೆ" ಜಿಲ್ಲಾಡಳಿತ ದಲಿತರ ಮೇಲಿನ ದೌರ್ಜನ್ಯವನ್ನು ತಡೆಯಲು ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**